ಆಯುಕ್ತರು, ಸದರಿ ವಿಚಾರಣಾ ವರದಿಯನ್ನು ಒಪ್ಪಿ, 2ನೇ ಕಾರಣ ಕೇಳುವ ನೋಟೀಸನ್ನು ಆರೋಪಿತ ಅಧಿಕಾರಿಗೆ ಮೇಲೆ (6) ರಲ್ಲಿ ಓದಲಾದ ಪತ್ರದ ಮೂಲಕ ದಿನಾಂಕ 13-05-2009 ರಂದು ಜಾರಿ ಮಾಡಲಾಗಿದ್ದು, ಅದು ಜಾರಿಯಾಗದೆ ಹಿಂದಿರುಗಿದೆ. ಈ ಸಂಬಂಧ ಆಯುಕ್ತರು ಅರೋಪಿತ ಅಧಿಕಾರಿಯು ಅನಧಿಕೃತ ಗೈರುಹಾಜರಾಗಿರುವುದು ವಿಚಾರಣಾ ವರದಿಯಿಂದ ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರಿಗೆ ಕಠಿಣ ದಂಡನೆ ವಿಧಿಸುವ ಬಗ್ಗೆ ಮೇಲೆ (7) ರಲ್ಲಿ ಓದಲಾದ ಪತ್ರದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸರ್ಕಾರವು ಆರೋಪ, ಸಾಕ್ಷಿಗಳ ಹೇಳಿಕೆ, ದಾಖಲಾತಿಗಳು, ವಿಚಾರಣಾ ವರದಿ, ಆಯುಕ್ತರು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಸದರಿ ಆರೋಪಿತ ಆಧಿಕಾರಿಯವರನ್ನು ದಿನಾಂಕ 31-10-1995 ರಲ್ಲಿ ವರ್ಗಾವಣೆಗೊಳಿಸಲಾಗಿದ್ದು. ವರ್ಗಾವಣೆಗೊಂಡ ಸ್ಥಳದಲ್ಲಿ ಹಾಜರಾಗದೆ ದಿನಾಂಕ 29-08-2003 ರ ವರೆಗೆ ಅನಧಿಕೃತ ಗೈರುಹಾಜರಿ ಆಗಿರುವುದು, ತದನಂತರ ವರ್ಗಾವಣೆಯನ್ನು ಮಾರ್ಪಡಿಸಿ, ದಿನಾಂಕ 21-01-2004ರಲ್ಲಿ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಿದ್ದರೂ ಸಹ ಆ ಸ್ಥಳದಲ್ಲಿ ಒಂದು ದಿನ ಮಾತ್ರ ಕರ್ತವ್ಯಕ್ಕೆ ಹಾಜರಾಗಿ ತದನಂತರ ಪುನಃ ಅನಾರೋಗ್ಯದ ಕಾರಣ ನೀಡಿ ಅನಧಿಕೃತ ಗೈರುಹಾಜರಾಗಿರುವುದು, ಈ ಸಂಬಂಧ ವಿಚಾರಣೆಗೂ ಹಾಜರಾಗದೆ ಇರುವುದು 1995 ರಿಂದ ಇಲ್ಲಿಯವರೆವಿಗೂ ಅಂದರೆ ಸುಮಾರು 12 ವರ್ಷಗಳ ಕಾಲ ಕರ್ತವ್ಯಕ್ಕೆ ಗೈರುಹಾಜರಾಗಿರುವುದು ಇಲಾಖಾ ವಿಚಾರಣೆಯಿಂದ ದೃಢಪಟ್ಟಿರುವುದರಿಂದ, ಡಾ॥ ಎಂ. ಸನತ್‌ಕುಮಾರ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ. ಸೂರ್ಲಬಿ, ಕೊಡಗು ಜಿಲ್ಲೆ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಾವಳಿಗಳು 1957ರ, ನಿಯಮ – 8 (viii) ರಡಿಯಲ್ಲಿ ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 309 ಎಂಎಸ್‌ಎ 2009, ಬೆಂಗಳೂರು, ದಿನಾಂಕ 29ನೇ ಜನವರಿ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಸರ್ಕಾರವು, ಡಾ|| ಎಂ. ಸನತ್‌ಕುಮಾರ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಸೂರ್ಲಬಿ, ಕೊಡಗು ಜಿಲ್ಲೆ ಇವರನ್ನು ಅನಧಿಕೃತ ಗೈರುಹಾಜರಿ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಾವಳಿಗಳು 1957ರ, ನಿಯಮ – 8 (viii) ರಡಿಯಲ್ಲಿ ಪದತ್ತವಾದ ಅಧಿಕಾರಗಳನ್ನು ಚಲಾಯಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸಕಾರಿ ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಪದ್ಮಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಿಆರ್-615 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇಂಧನ ಸಚಿವಾಲಯ

ವಿಷಯ : M/s Vijay Durga Power Projects Pvt. Ltd. ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/06/ಸೋಮೇಶ್ವರ/2007/2863, ದಿನಾಂಕ 29-12-2007/8-1-2008.
2. ದಿನಾಂಕ 13-2-2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Vijay Durga Power Projects Pvt. Ltd. ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು, ಕೆಳ ಚಾವಡಿ ಗ್ರಾಮದ ಬಳಿ ಸೀತಾ ನದಿಯ ಬಲದಂಡೆಯಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ : 13-2-2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Vijay Durga Power Projects Pvt. Ltd. ಇವರಿಗೆ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 19 ಎನ್‌ಸಿಇ 2008, ಬೆಂಗಳೂರು, ದಿನಾಂಕ: 23-2-2010.

M/s Vijay Durga Power Projects Pvt. Ltd. ಇವರಿಗೆ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು, ಕೆಳ ಚಾವಡಿ ಗ್ರಾಮದ ಬಳಿ ಸೀತಾ ನದಿಯ ಬಲದಂಡೆಯಲ್ಲಿ 5.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude : 13°27`54" Longitude : 75°04'45") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ.

1. (ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.
(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.
(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2. (ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.

4. ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 591

(ಎಸ್.ಜೆ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 39 ಅಚವಿ 2008, ದಿನಾಂಕ : 24-10-2009,

2. ವ್ಯವಸ್ಥಾಪಕ ನಿರ್ದೇಶಕರು ಕೆಬಿಟ್ಸ್ ಹಾಗೂ ಅಧ್ಯಕ್ಷರು, ಬಿಪಿಓ ಸ್ಕ್ರೀನಿಂಗ್ ಕಮಿಟಿ ಇವರ ಪತ್ರದ ಸಂಖ್ಯೆ : ಕೆಬಿಟ್ಸ್/ಕೈ.ಉ.ಅ/ ಗ್ರಾ. ಬಿಪಿಓ-ಭಾಲ್ಕಿ-ಔರಾದ್/43(3)/2009-10, ದಿನಾಂಕ: 17-2-2010

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಯೋಜನೆಯಡಿಯಲ್ಲಿ 2009-10ನೇ ಸಾಲಿನಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸಲು ಎಂಟು ಅರ್ಹ ಅಭ್ಯರ್ಥಿಗಳ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ (2)ರಲ್ಲಿ ಓದಲಾದ ವ್ಯವಸ್ಥಾಪಕ ನಿರ್ದೇಶಕರು ಕೆಬಿಟ್ಸ್ ಇವರ ಪತ್ರದಲ್ಲಿ ಮೆ : ಟಾಟಾ ಬ್ಯುಸಿನೆಸ್ ಸಪೋರ್ಟ್ ಸರ್ವೀಸಸ್ ಲಿ. ರವರು ಔರಾದ್/ಭಾಲ್ಕಿಯಲ್ಲಿ ಗ್ರಾಮೀಣ ಬಿಪಿಓ ಘಟಕ ಸ್ಥಾಪಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದು, ಅದರಂತೆ ದಿನಾಂಕ 24-12-2009 ರಂದು ನಡೆದ ಗ್ರಾಮೀಣ ಬಿಪಿಓ ಸಭೆಯಲ್ಲಿ ಸದರಿ ಘಟಕವನ್ನು ರದ್ದುಗೊಳಿಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಮೇಲೆ (1)ರಲ್ಲಿ ಓದಲಾದ ದಿನಾಂಕ 24-10-2009ರ ಸರ್ಕಾರಿ ಆದೇಶದ ಅನುಬಂಧದಲ್ಲಿನ ಕ್ರಮ ಸಂಖ್ಯೆ (3) ರಲ್ಲಿ ಅನುಮೋದಿಸಿದ್ದ ಮೆ : ಟಾಟಾ ಬ್ಯುಸಿನೆಸ್ ಸಪೋರ್ಟ್ ಸರ್ವೀಸಸ್ ಲಿ. ಗೌರಾ ಟ್ರಿನಿಟಿ, ಚಿರಾನ್ ಫೋರ್ಟ್ ಲೇನ್, ಬೇಗಂ ಪೇಟ್, ಹೈದರಾಬಾದ್-500016 ರವರು ಬೀದರ್ ಜಿಲ್ಲೆಯ ಔರಾದ್/ಭಾಲ್ಕಿ ಗ್ರಾಮೀಣ ಬಿಪಿಓ ಘಟಕವನ್ನು ಸ್ಥಾಪಿಸಲು ಅನುಮೋದಿಸಿರುವುದನ್ನು ರದ್ದುಗೊಳಿಸಿ ಆದೇಶ ಹೊರಡಿಸುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ: 26-2-2010.

ಪ್ರಸ್ತಾವನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿನ ಅನುಬಂಧದ ಕ್ರಮ ಸಂಖ್ಯೆ 3 ರಲ್ಲಿ ಮೆ : ಟಾಟಾ ಬ್ಯುಸಿನೆಸ್ ಸಪೋರ್ಟ್ ಸರ್ವೀಸಸ್ ಲಿ. ಗೌರಾ ಟ್ರಿನಿಟಿ, ಚಿರಾನ್ ಫೋರ್ಟ್ ಲೇನ್, ಬೇಗಂ ಪೇಟ್, ಹೈದರಾಬಾದ್-500016 ರವರಿಗೆ ಬೀದರ್ ಜಿಲ್ಲೆಯ ಔರಾದ್/ಭಾಲ್ಕಿ ಗ್ರಾಮೀಣ ಬಿಪಿಓ ಕೇಂದ್ರವನ್ನು ತೆರೆಯಲು ಅನುಮೋದಿಸಿದ್ದನ್ನು ರದ್ದುಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ.ಎ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 592

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಡಿ.ಬಿ. ಕಡ್ಲಿ, ಮುಖ್ಯ ಅಧೀಕ್ಷಕರು (ಅಮಾನತ್ತಿನಲ್ಲಿರುವ), ಬೆಳಗಾಂ ಕೇಂದ್ರ ಕಾರಾಗೃಹ, ಬೆಳಗಾಂ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಕರ್ತವ್ಯಕ್ಕೆ ತೆಗೆದುಕೊಳ್ಳುವ ಬಗ್ಗೆ

ಓದಲಾಗಿದೆ :
1. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಪತ್ರ ಸಂಖ್ಯೆ: ಎನ್‌ಕ್ವೈಯರಿ/ಸಿಆರ್.5/2009, ದಿನಾಂಕ : 21-5-2009.
2. ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 42 ಪಿಆರ್‌ಇ 2009, ದಿನಾಂಕ : 8-6-09.
3. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಆದೇಶ ಸಂಖ್ಯೆ : ವಿಚಾರಣೆ/ಸಿಆರ್-5/2009-10, ದಿನಾಂಕ : 6-8-2009
4. ಶ್ರೀ ಡಿ.ಬಿ. ಕಡ್ಲಿ, ಮುಖ್ಯ ಅಧೀಕ್ಷಕರು, ಇವರು ಸರ್ಕಾರಕ್ಕೆ ಸಲ್ಲಿಸಿದ ಮನವಿ ದಿನಾಂಕ 6-7-2009
5. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಸಂಖ್ಯೆ : ಎನ್‌ಕ್ವೈಯರಿ/ಸಿಆರ್-5/2009, ದಿನಾಂಕ : 21-7-2009.

ಪ್ರಸ್ತಾವನೆ :

ಬೆಳಗಾವಿ ಕೇಂದ್ರ ಕಾರಾಗೃಹದ ವಿಚಾರಣಾ ಬಂಧಿ ಸಂಖ್ಯೆ : 6415 ನಾಗೇಂದ್ರರೆಡ್ಡಿ, ತಂದೆ ಮದನಮೋಹನ ರೆಡ್ಡಿ, ಈತನನ್ನು ಒಳರೋಗಿಯಾಗಿ ಬೆಳಗಾವಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಗ, ಈತನು ಅಲ್ಲಿ ಕರ್ತವ್ಯದ ಮೇಲಿದ್ದ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಪೇದೆ ಸಂಖ್ಯೆ : 84 ಶ್ರೀ ಚಂದ್ರಕಾಂತ್ ಎನ್. ಕಾಂಬ್ಳೆಯವರಿಗೆ ಇರಿದು, ಮಾರಣಾಂತಿಕ ಹಲ್ಲೆ ನಡೆಸಿ, ಪರಾರಿಯಾಗಿದ್ದನು. ಪೊಲೀಸ್ ಪೇದೆಯವರಿಗೆ ತುರ್ತ ಚಿಕಿತ್ಸೆಗಾಗಿ ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಅವರು ಮರಣ ಹೊಂದಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರು ಮೇಲೆ ಓದಲಾದ (1)ರ ಪತ್ರದೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಈ ಘಟನೆಗೆ ಸಂಬಂಧಿಸಿದಂತೆ ಶ್ರೀ ಡಿ.ಬಿ. ಕಡ್ಲಿ, ಮುಖ್ಯ ಅಧೀಕ್ಷಕರು, ಹಾಗೂ ಶ್ರೀ ಎಂ.ಹೆಚ್. ಕುಂಬಾರ್, ಮುಖ್ಯ ವೀಕ್ಷಕರು, ಬೆಳಗಾವಿ ಕೇಂದ್ರ ಕಾರಾಗೃಹ ಬೆಳಗಾವಿ, ಇವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದೂ ಸದರಿಯವರುಗಳ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದರು.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ವರದಿಯನ್ನು ಪರಿಶೀಲಿಸಿ ಮತ್ತು ವರದಿಯಲ್ಲಿನ ಅಂಶಗಳ ಆಧಾರದ ಮೇರೆಗೆ, ಸರ್ಕಾರವು ಮೇಲೆ ಓದಲಾದ (2)ರ ಆದೇಶದಲ್ಲಿ ಶ್ರೀ ಡಿ.ಬಿ. ಕಡ್ಲಿ, ಮುಖ್ಯ ಅಧೀಕ್ಷಕರು, ಬೆಳಗಾವಿ ಕೇಂದ್ರ ಕಾರಾಗೃಹ ಹಾಗೂ ಶ್ರೀ ಎಂ.ಹೆಚ್. ಕುಂಬಾರ್, ಮುಖ್ಯ ವೀಕ್ಷಕರು, ಬೆಳಗಾವಿ, ಕೇಂದ್ರ

ಕಾರಾಗೃಹ, ಇವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣದ ಹಿನ್ನೆಲೆಯಲ್ಲಿ, ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10 (1) (ಡಿ) ರನ್ವಯ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ.

ಅನಂತರ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರು ಮೇಲೆ ಓದಲಾದ (3)ರ ಅವರ ಆದೇಶದಲ್ಲಿ, ಶ್ರೀ ಎಂ.ಹೆಚ್. ಕುಂಬಾರ್ ಮುಖ್ಯ ವೀಕ್ಷಕರು, ಬೆಳಗಾವಿ ಕೇಂದ್ರ ಕಾರಾಗೃಹ, ಬೆಳಗಾವಿ, ಇವರ ವಿರುದ್ಧ ಮುಂದೆ ಜರುಗತಕ್ಕ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(5)(ಸಿ) ರಲ್ಲಿನ ಅಧಿಕಾರವನ್ನು ಬಳಸಿ, ಸದರಿಯವರ ನಿಲಂಬನದ ಆದೇಶವನ್ನು ರದ್ದುಪಡಿಸಿ, ಬೆಳಗಾವಿ ಕೇಂದ್ರ ಕಾರಾಗೃಹದಲ್ಲಿಯೇ ಕರ್ತವ್ಯದಲ್ಲಿ ಮುಂದುವರಿಸಿರುತ್ತಾರೆ.

ಅಮಾನತ್ತಿಗೊಳಪಟ್ಟ ಶ್ರೀ ಡಿ.ಬಿ. ಕಲ್ಲಿ, ಮುಖ್ಯ ಅಧೀಕ್ಷಕರು, ಇವರು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರ ಮುಖೇನ ದಿನಾಂಕ 6-7-2009 ರಂದು ಸರ್ಕಾರಕ್ಕೆ ಸಲ್ಲಿಸಿದ ಓದಲಾದ (4)ರ ಮೇಲೆ ಸಲ್ಲಿಸಿದ ಮನವಿಯಲ್ಲಿ ದಿನಾಂಕ 10-5-2009 ರಂದು ನಡೆದ ಘಟನೆಯ ಬಗ್ಗೆ ವಾಸ್ತವಿಕ ಅಂಶಗಳನ್ನು ತಿಳಿಸುತ್ತಾ, ಸದರಿ ಘಟನೆಗೆ ಅವರು ಕಾರಣರಲ್ಲವೆಂದೂ, ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು ತಿಳಿಸುತ್ತಾ, ಅವರ ಅಮಾನತ್ತು ಆದೇಶವನ್ನು ರದ್ದುಪಡಿಸಿ, ಕರ್ತವ್ಯಕ್ಕೆ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

ಈ ಕೋರಿಕೆಯ ಮೇರೆಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ಕಾರಾಗೃಹಗಳ ಮಹಾನಿರೀಕ್ಷಕರವರು ಸರ್ಕಾರಕ್ಕೆ ಬರೆದ ಮೇಲೆ ಓದಲಾದ (5)ರ ಪತ್ರದಲ್ಲಿ, ಶ್ರೀ ಡಿ.ಬಿ. ಕಲ್ಲಿ, ಮುಖ್ಯ ಅಧೀಕ್ಷಕರು (ಅಮಾನತ್ತಿನಲ್ಲಿರುವ) ಇವರ ಮನವಿಯನ್ನು ಮಾನವೀಯತೆ ಮತ್ತು ಅನುಕಂಪದ ದೃಷ್ಟಿಯಿಂದ ಪರಿಗಣಿಸಿ, ಕಾರಾಗೃಹ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆ ಇರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಸದರಿಯವರ ಅಮಾನತ್ತನ್ನು ರದ್ದುಪಡಿಸಿ, ಕರ್ತವ್ಯಕ್ಕೆ ತೆಗೆದುಕೊಳ್ಳುವಂತೆ ಕೋರಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 42 ಪಿಆರ್‌ಇ 2009, ಬೆಂಗಳೂರು, ದಿನಾಂಕ: 22-02-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಡಿ.ಬಿ. ಕಲ್ಲಿ, ಮುಖ್ಯ ಅಧೀಕ್ಷಕರು, ಕರ್ನಾಟಕ ಕಾರಾಗೃಹಗಳ ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(5)(ಸಿ)ರ ಅನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸದರಿಯವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಮುಖ್ಯ ಅಧೀಕ್ಷಕರ ಹುದ್ದೆಯಲ್ಲಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 593 ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಕಂದಾಯ ಸಚಿವಾಲಯ

ವಿಷಯ : ಶ್ರೀ ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಶಿವಮೊಗ್ಗ ಪೊಲೀಸ್ ಠಾಣೆಯಲ್ಲಿ ದಾಖಲಾದ ಗುನ್ನೆ ಸಂ. 5/2009 ಬಗ್ಗೆ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು

ಓದಲಾಗಿದೆ : 1. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಸಿಟಿವಿಲ್-12/ಸಿಆರ್-5/2009, ಶಿವಮೊಗ್ಗ, ದಿನಾಂಕ 1-9-2009.

2. ತನಿಖಾಧಿಕಾರಿಯ ಅಂತಿಮ ತನಿಖಾ ವರದಿ ದಿನಾಂಕ 30-7-2009

3. ತನಿಖಾ ದಾಖಲೆಗಳ ನಕಲುಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಆಪಾದಿತ ಅಧಿಕಾರಿಯು ನೀಡಿದ ಸ್ವ ರಕ್ಷಣಾ ಹೇಳಿಕೆ, ಪ್ರಕರಣದ ತನಿಖಾ ಕಾಲದಲ್ಲಿ ಅಮಾನತ್ತು ಪಡಿಸಿದ ದಾಖಲಾತಿಗಳು.

ಪ್ರಸ್ತಾವನೆ :

ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಪ್ರಸ್ತುತ ನಿವೃತ್ತ ಇವರ ವಿರುದ್ಧ ಗುನ್ನೆ ಸಂಖ್ಯೆ : 05/2009ರಲ್ಲಿ ಆರಕ್ಷಕ ನಿರೀಕ್ಷಕರು, ಶಿವಮೊಗ್ಗ, ಕರ್ನಾಟಕ ಲೋಕಾಯುಕ್ತ, ಪೊಲೀಸ್ ಠಾಣೆಯಲ್ಲಿ

ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು (ಉಲ್ಲೇಖ-2,3) ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ತಮ್ಮ ಪತ್ರದ ದಿನಾಂಕ 1-9-2009 (ಉಲ್ಲೇಖ-1) ರೊಡನೆ ಕಳುಹಿಸುತ್ತಾ ಆಪಾದಿತನನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988ರ 19ನೆಯ ಕಲಂ (1)ರಡಿಯಲ್ಲಿ ಮಂಜೂರಾತಿಗಾಗಿ ಈ ಪ್ರಾಧಿಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಅಪರ ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಉಲ್ಲೇಖಿತ ಪತ್ರ ಸಂ: ಲೋಕ್/ಐಎನ್‌ವಿ(ಜಿ)ಸಿಟಿಎಲ್-12/ಸಿಆರ್-5/2009, ಶಿವಮೊಗ್ಗ ದಿನಾಂಕ 1-9-2009 ರೊಂದಿಗೆ ಕಳುಹಿಸಿಕೊಟ್ಟ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಅಂತಿಮ ತನಿಖಾ ವರದಿ ದಿನಾಂಕ : 30-7-2009

2. ಪ್ರಥಮ ವರ್ತಮಾನ ವರದಿ ಮತ್ತು ಫಿರ್ಯಾದಿಯ ದೂರಿನ ನಕಲು, ಪಂಚ ಸಾಕ್ಷಗಳನ್ನು ಬರಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿದ ಕೋರಿಕೆ ಪತ್ರದ ನಕಲುಗಳು, ವಹಿಸುವಿಕೆ, ಜಪ್ತಿ ಪಂಚನಾಮೆ ಮತ್ತು ಪಂಚನಾಮೆಗಳ ನಕಲುಗಳು, ಟ್ರ್ಯಾಪ್ ಯಶಸ್ವಿಯಾದ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯ ನಕಲು, ಸ್ವತ್ತು ಪಟ್ಟಿ ನಕಲುಗಳು, ತನಿಖಾ ಕಾಲದಲ್ಲಿ ತೆಗೆದಿರುವ ಫೋಟೋಗಳ ಛಾಯಾ ಪ್ರತಿಗಳು.

3. ಸಾಕ್ಷಿದಾರರುಗಳ ಹೇಳಿಕೆಗಳ ಮತ್ತು ಮುಂದುವರಿದ ಹೇಳಿಕೆಗಳ ನಕಲು ಪ್ರತಿಗಳು,

4. 1) ಆಪಾದಿತ ಅಧಿಕಾರಿಯ ಸೇವಾ ವಿವರಗಳ ಮಾಹಿತಿಯಿರುವ ಪ್ರತಿ.
   2) ಸಹಾಯಕ ಕಾರ್ಯಪಾಲಕ ಇಂಜಿನೀಯರ್, ನಂ. 2, ಲೋಕೋಪಯೋಗಿ ಉಪ ವಿಭಾಗ, ತೀರ್ಥಹಳ್ಳಿ ಇವರ ಪತ್ರದ ದಿನಾಂಕ : 20-5-2009ರ ಪ್ರತಿ.
   3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರ ಪತ್ರದ ದಿನಾಂಕ 15-5-2009 ಹಾಗೂ ಅದರೊಟ್ಟಿಗೆ ಲಗತ್ತಿಸಿರುವ ದಾಖಲೆಗಳ ಪ್ರತಿಗಳು.
   4) ತೀರ್ಥಹಳ್ಳಿ ಪೊಲೀಸ್ ಠಾಣೆ ಮೊಕದ್ದಮೆ ಸಂ. 196/2009ರ ಪ್ರತಿ ಹಾಗೂ ಅದರೊಟ್ಟಿಗೆ ಲಗತ್ತಿಸಿರುವ ದೂರಿನ ಪ್ರತಿ.

5. 1. ರಸಾಯನಿಕ ಪರಿವೀಕ್ಷಕರ ವರದಿಯ ನಕಲು
   2. ಕೃತ್ಯ ನಡೆದ ಸ್ಥಳದ ನಕಾಶೆಯ ಪ್ರತಿ

6. ಆಪಾದಿತ ಅಧಿಕಾರಿಯು ನೀಡಿರುವ ಸ್ವ ರಕ್ಷಣಾ ಹೇಳಿಕೆಯ ನಕಲು.

7. ಪ್ರಕರಣದ ತನಿಖಾ ಕಾಲದಲ್ಲಿ ಅಮಾನತ್ತು ಪಡಿಸಿದ ದಾಖಲಾತಿಗಳು.

ತನಿಖಾಧಿಕಾರಿಗಳಾದ ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಇವರು ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಶಿವಮೊಗ್ಗ ಲೋಕಾಯುಕ್ತ, ಆರಕ್ಷಕ ಠಾಣೆಯಲ್ಲಿ ಮೊಕದ್ದಮೆ ಸಂ. 5/2009ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ 13 (2)ರಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆಪಾದಿತ ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಪ್ರಸ್ತುತ ಅಮಾನತ್ತಿನಲ್ಲಿರುವ ಫಿರ್ಯಾದಿಯಾದ ಶ್ರೀ ಕೆ. ಭಾಸ್ಕರಶೆಟ್ಟಿ ತಂದೆ ಲೇಟ್. ಕೆ.ಎಸ್. ಕೃಷ್ಣಯ್ಯ, ರಂಜದಕಟ್ಟೆ, ದೂರ್ವಾಸಪುರ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಇವರ ಲಾರಿಯಲ್ಲಿ ಮರಳು ತುಂಬಿಕೊಂಡು ಬರುತ್ತಿದ್ದಾಗ ತಹಶೀಲ್ದಾರರು ಫಿರ್ಯಾದುದಾರರ ವಾಹನವನ್ನು ತಡೆದು, ರೂ. 3,000/- ರೂಗಳ ದಂಡನೆಯನ್ನು ವಿಧಿಸಿರುತ್ತಾರೆ. ಇದಾದ ಸುಮಾರು 8-10 ದಿನಗಳ ನಂತರ ಫಿರ್ಯಾದುದಾರರು ತಹಶೀಲ್ದಾರರನ್ನು ಭೇಟಿ ಮಾಡಿ 50 ಲೋಡ್ ಮರಳನ್ನು ತನ್ನ ಮನೆಯ ಪಕ್ಕ ದಾಸ್ತಾನು ಮಾಡಿಕೊಳ್ಳುತ್ತೇನೆಂದು ದಿನಾಂಕ 4-5-2009 ರಂದು ತಹಶೀಲ್ದಾರರನ್ನು ಕೇಳಿಕೊಂಡಾಗ, ತಹಶೀಲ್ದಾರ್‌ರವರು ರೂ. 10,000/-ಗಳನ್ನು ಕೊಡಬೇಕು ಎಂದು ಫಿರ್ಯಾದುದಾರರಿಗೆ ತಿಳಿಸಿರುತ್ತಾರೆ. ಆದ್ದರಿಂದ ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸರ್ಕಾರಿ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿನಾಂಕ : 7-5-2009 ರಂದು ತಹಶೀಲ್ದಾರರ ಕ್ವಾರ್ಟರ್ಸ್, ತೀರ್ಥಹಳ್ಳಿ ಇಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿ ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು, ಅಕ್ರಮ ಸಂಭಾವನೆಯಾದ 10,000/- ರೂಗಳನ್ನು ಸದರಿ ಕೆಲಸವನ್ನು ಮಾಡಲು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿ ಹಾಕಿಕೊಂಡಿರುತ್ತಾರೆ. ಆಪಾದಿತ ಸರ್ಕಾರಿ ಅಧಿಕಾರಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಪಿಂಗಾಣಿ ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಮಾರ್ಜನೆ ಮಾಡಿ ಫೀನಾಪ್ತಲೀನ್ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸರ್ಕಾರಿ ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು

ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 10,000/-ಗಳನ್ನು ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್, ತೀರ್ಥಹಳ್ಳಿ ತಾಲ್ಲೂಕು ಇವರ ಅಧಿಕೃತ ಕ್ವಾಟರ್ಸ್‌ನಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಅದೇ ರೀತಿ ತನಿಖಾಧಿಕಾರಿಗಳು, ತನಿಖಾ ಕಾಲದಲ್ಲಿ ತೀರ್ಥಹಳ್ಳಿ ತಾಲ್ಲೂಕು ಕಛೇರಿಯಿಂದ ಮಾಹಿತಿಗಳನ್ನು ಪಡೆದಿರುತ್ತಾರೆ ಮತ್ತು ತನಿಖಾ ಕಾಲದಲ್ಲಿ ದಾಖಲೆಗಳನ್ನು ಅಮಾನತ್ ಪಡಿಸಿಕೊಂಡಿರುತ್ತಾರೆ. ತನಿಖಾ ಕಾಲದಲ್ಲಿ ಸಾಕ್ಷ್ಯಾಧಾರಗಳು ಲಭ್ಯವಾಗಿದ್ದು ಆರೋಪಗಳನ್ನು ರುಜುವಾತುಪಡಿಸುತ್ತವೆ.

ಈ ಎಲ್ಲಾ ಕಾರಣಗಳಿಂದ ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988ರ ಕಲಂ 7, 13(1)(ಡಿ) ಜೊತೆಗೆ ಓದಲಾದ ಕಲಂ 13(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988ರ ಅನ್ವಯ ಕಲಂ, 13(1)(ಡಿ) ಮತ್ತು ಜೊತೆಗೆ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತವನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದಾಗಿರುತ್ತದೆ. ಹಾಗೂ ಈ ಬಗ್ಗೆ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 8 (iii) ರಡಿಯಲ್ಲಿ ಸಕ್ಷಮ ಪ್ರಾಧಿಕಾರಿಯಾಗಿರುತ್ತದೆ. ಆದ್ದರಿಂದ, ಲಂಚ ನಿರೋಧಕ ಕಾಯ್ದೆ, 1988 ಕಲಂ 19 (1)ರ ಅಡಿ ಆಪಾದಿತ ನೌಕರನಾದ ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕು (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರನ್ನು ಕಲಂ 7 ಮತ್ತು 13 (1) (ಡಿ) ಜೊತೆಗೆ 13(2)ರ ಅಡಿಯಲ್ಲಿ ಭ್ರಷ್ಟಾಚಾರ ನಿವಾರಣಾ ಅಧಿನಿಯಮ 1988 ಹಾಗೂ ಕಲಂ 409, 468 ಐಪಿಸಿ ಪ್ರಕಾರ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆರ್ 08 ಎಡಿಇ 2009, ಬೆಂಗಳೂರು, ದಿನಾಂಕ: 16-02-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆರೋಪಿಯಾದ ಶ್ರೀ ಕೆ. ಕೇಶವರಾಜು, ಹಿಂದಿನ ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕು ಪ್ರಸ್ತುತ ಅಮಾನತ್ತಿನಲ್ಲಿರುವ ಇವರನ್ನು ಹುದ್ದೆಯಿಂದ ತೆಗೆದು ಹಾಕುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರಿದವಾದ ಸರ್ಕಾರವು ಇವರನ್ನು ಬ್ರಷ್ಟಾಚಾರ ನಿವಾರಣಾ ಅಧಿನಿಯಮ ಕಲಂ 7, 13 (1) (ಡಿ) ಜೊತೆಯಲ್ಲಿ ಓದಲಾದ ಕಲಂ 13 (2)ರ ಪ್ರಕಾರ ಹಾಗೂ ಐ.ಪಿ.ಸಿ ಕಲಂ 409, 468 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಈ ಮೂಲಕ ಐ.ಪಿ.ಸಿ ಕಾಯ್ದೆ 19(1) (ಸಿ) ಹಾಗೂ ಕಲಂ 197 ಸಿಆರ್‌ಪಿಸಿ ಅಡಿಯಲ್ಲಿ ಸರ್ಕಾರವು ಮಂಜೂರಾತಿಯನ್ನು ನೀಡಿದೆ.

ಮುಂದುವರೆದು, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ, 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಎಲ್ಲಾ ಆದೇಶಗಳನ್ನು ಅಥವಾ ಲೇಖನಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕು ಅಥವಾ ಹೊರಡಿಸುವಂತೆ ಮಾಡಬೇಕು.

ಅದೇ ನಿಯಮಾವಳಿಯ ನಿಯಮ 19 (1)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿದ ಆದೇಶಗಳು ಮತ್ತು ಲೇಖನಗಳು ಒಬ್ಬ ಅಧೀನ ಕಾರ್ಯದರ್ಶಿಯ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಈ ಮೇಲ್ಕಂಡ ಆದೇಶವನ್ನು ದಿನಾಂಕ 16-2-2010 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 594

(ಎಸ್.ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ರಚಿಸಿರುವ ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಅಗತ್ಯವಿರುವ ಸಿಬ್ಬಂದಿ ಹುದ್ದೆಗಳ ಸೃಜನೆ ಬಗ್ಗೆ

ಓದಲಾಗಿದೆ : 1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 59 ಭೂದಾಪು 2008, ದಿನಾಂಕ 26-12-2009.

2. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 71 ಭೂದಾಪು 2009, ದಿನಾಂಕ 9-12-2009.
3. ಸರ್ಕಾರದ ಅಧಿಸೂಚನೆ ಸಂಖ್ಯೆ : ಗ್ರಾಅಪ : 202 ಕೆಎಸ್‌ಎಸ್ 2009, ದಿನಾಂಕ 30-12-2009.
4. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 1029 ವೆಚ್ಚ-7/2009, ದಿ. 29-12-2009
5. ಜಿಲ್ಲಾಧಿಕಾರಿ, ಯಾದಗಿರಿ ಇವರ ಪತ್ರ ಸಂಖ್ಯೆ : ಕಂ : ಜಿಯಾಜಿ/ಆಡಳಿತ/ಸಿಆರ್/2009-10, ದಿ. 4-1-2010

ಪ್ರಸ್ತಾವನೆ :

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಆದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಯಾದಗಿರಿ ಪಟ್ಟಣವನ್ನು ಕೇಂದ್ರಸ್ಥಾನವನ್ನಾಗಿರಿಸಿ, ಹೊಸದಾಗಿ ಯಾದಗಿರಿ ಜಿಲ್ಲೆಯನ್ನು ರಚಿಸಿ, ದಿನಾಂಕ : 30-12-2009 ರಿಂದ ಜಾರಿಗೆ ಬರುವಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿ: 9-12-2009 ರ ಸರ್ಕಾರದ ಆದೇಶದಲ್ಲಿ ಹೊಸದಾಗಿ ರಚಿಸಲಾಗಿರುವ ಯಾದಗಿರಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 67 ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರ.ಸಂ. (3) ರಲ್ಲಿ ಓದಲಾದ ದಿನಾಂಕ : 30-12-2009ರ ಆದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 23 ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ನೀಡಲಾಗಿದೆ.

ಮೇಲೆ ಕ್ರ.ಸಂ. (4) ರಲ್ಲಿ ಓದಲಾದ ದಿನಾಂಕ : 29-12-2009 ರ ಅಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಯಾದಗಿರಿ ಜಿಲ್ಲೆ ರಚನೆ ಸಂಬಂಧ ಪ್ರತಿ ಇಲಾಖೆಯಲ್ಲಿ ಸಿಬ್ಬಂದಿ ಮಾದರಿ ರಚನೆಯನ್ವಯ ಅವಶ್ಯಕವಿರುವ ಹುದ್ದೆಗಳಲ್ಲಿ ಶೇ. 25 ರಷ್ಟು ಹುದ್ದೆಗಳನ್ನು ಅಡ್ ಹಾಕ್ (Ad-hoc) ಆಧಾರದ ಮೇಲೆ ಸೃಜಿಸಲು ಒಪ್ಪಿಗೆ ನೀಡಿರುತ್ತದೆ.

ಮೇಲೆ ಕ್ರ.ಸಂ. (5) ರಲ್ಲಿ ಓದಲಾದ ದಿನಾಂಕ : 4-1-2010 ರ ಪತ್ರದಲ್ಲಿ ಜಿಲ್ಲಾಧಿಕಾರಿ, ಯಾದಗಿರಿ ಇವರು, ನೂತನ ಯಾದಗಿರಿ ಜಿಲ್ಲೆಗೆ ವಿವಿಧ ಇಲಾಖೆಗಳಿಗೆ ಅವಶ್ಯಕತೆ ಇರುವ (ಒಟ್ಟು 71 ಇಲಾಖೆಗಳಿಗೆ) ಹೊಸದಾಗಿ 901 ಹುದ್ದೆಗಳನ್ನು ಸೃಜಿಸಬೇಕಾಗುತ್ತದೆ ಎಂದು ಕೋರಿರುತ್ತಾರೆ.

ಮೇಲ್ಕಂಡ ಹಿನ್ನಲೆಯಲ್ಲಿ ಹೊಸದಾಗಿ ರಚಿಸಿರುವ ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಅವಶ್ಯಕವಿರುವ ಶೇ. 25 ರಷ್ಟು ಹುದ್ದೆಗಳನ್ನು ಸದ್ಯಕ್ಕೆ ಅಡ್-ಹಾಕ್ (Ad-hoc) ಆಧಾರದ ಮೇಲೆಸೃಜಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 71 ಭೂದಾಪು 2009, ಬೆಂಗಳೂರು, ದಿನಾಂಕ: 23-02-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಯಾದಗಿರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗೆ ಸಂಬಂಧಿಸಿದಂತೆ ಸಿಬ್ಬಂದಿ ಮಾದರಿ ರಚನೆ ಅನ್ವಯ ಅವಶ್ಯಕವಿರುವ ಹುದ್ದೆಗಳಲ್ಲಿ ಶೇ. 25 ರಷ್ಟು ಹುದ್ದೆಗಳನ್ನು ಸದ್ಯಕ್ಕೆ ಅಡ್-ಹಾಕ್ (Ad-hoc) ಆಧಾರದ ಮೇಲೆ ಸೃಜಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಸಂಬಂಧಪಟ್ಟ ಇಲಾಖೆಗಳು ಈ ಅವಶ್ಯಕತೆ ಇರುವ ಹುದ್ದೆಗಳನ್ನು ಗುರುತಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಿ, ಶೀಘ್ರವೇ ಭರ್ತಿ ಮಾಡಿಕೊಳ್ಳತಕ್ಕದ್ದು. ಈ ಹುದ್ದೆಗಳಿಗೆ ಆಯವ್ಯಯ ಅವಕಾಶವನ್ನು ಸಹ ಕಲ್ಪಿಸಲು ಕ್ರಮ ಕೈಗೊಳ್ಳತಕ್ಕದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ 1029 ವೆಚ್ಚ-7/2009, ದಿನಾಂಕ : 29-12-2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 595

(ಬಿ.ವಿ. ಚೌಕೀಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ)

COMMERCE AND INDUSTRIES SECRETARIAT

Sub : Approval to the Project Proposal of M/s. Manjushree Technopack Ltd., to setup a unit for manufacturing Pet Containers, Jars and Bottles, at Harohalli Industrial Area, Ramanagar District.

Read : Proceedings of the 20th State High Level Clearance Committee (SHLCC) meeting held on 05-01-2010.

Preamble:

M/s. Manjushree Technopack Ltd., proposes to establish a unit for manufacturing Pet Containers, Jars and Bottles, at Harohalli Industrial Area, Ramanagar District, with an investment of Rs. 92 crores, generating employment to about 450 persons.

In the 20th State High Level Clearance Committee (SHLCC) meeting held on 05-01-2010, the proposal of the Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following Order.

GOVERNMENT ORDER NO. CI 68 SPI 2010, BANGALORE, DATED 23RD FEBRUARY 2010

Government is pleased to accord in principle approval for the project proposal of M/s. Manjushree Technopack Ltd., to establish a unit for manufacturing Pet Containers, Jars and Bottles, at Harohalli Industrial Area, Ramanagar District, with an investment of Rs. 92 crores, generating employment to about 450 persons and extend the following infrastructure facilities, incentives and concessions.

Infrastructure Facilities :

1. **Land :** 10 acres – KIADB land in Harohalli Industrial Area, Ramanagara District.
2. **Power :** 3000 KVA BESCOM.
3. **Water :** 1 MLD from KIADB.
4. **Incentives & Concessions :** As applicable under New Industrial Policy 2009-14.

General Terms and Conditions :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government policy of Employment to local people i.e. Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub-assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to atleast one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period to two years from the date of issue.

By Order and in the name of the Governor of Karnataka,

PR. 588

Aparna Pavate
Desk Officer (Technical Cell)
Commerce & Industries Department.

COMMERCE AND INDUSTRIES SECRETARIAT

Sub : Approval to the Project of Proposal M/s. Bhadrashree Steel and Power Ltd., to setup 2 x 100 TPD Sponge Iron Plant, 15 MW Captive Power Plant, 2 x 10 MT Induction Furnace and 200 TPD Rolling Mill, with in the existing premises of Kunikere Village, Koppal Taluk and District.

Read : Proceedings of the 20th State High Level Clearance Committee (SHLCC) meeting held on 05-01-2010.

Preamble:

M/s. Bhadrashree Steel & Power Ltd., proposes to establish 2 x 100 TPD Sponge Iron Plant, 15 MW Captive Power Plant, 2 x 10 MT Induction Furnace and 200 TPD Rolling Mill, within their existing premises at Kunikere Village, Koppal Taluk and District, with an investment of Rs. 146.83 crores, generating employment to about 425 persons.

In the 20th State High Level Clearance Committee (SHLCC) meeting held on 05-01-2010, the proposal of the Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following Order.

GOVERNMENT ORDER NO. CI 26 SPI 2010, BANGALORE, DATED 23RD FEBRUARY 2010

Government is pleased to accord in principle approval for the project proposal of M/s. Bhadrashree Steel & Power Ltd., to establish 2 x 100 TPD Sponge Iron Plant, 15 MW Captive Power Plant, 2 x 10 MT Induction Furnace and 200 TPD Rolling Mill, with in their existing premises at Kunikere Village, Koppal Taluk and District, with an investment of Rs. 146.83 crores, generating employment to about 425 persons and extend the following infrastructure facilities, incentives and concessions.

Infrastructure Facilities :

1. **Land :** Existing premises.
2. **Power :** 15 MW from GESCOM.
3. **Water :** 1.13 MLD from own sources.
4. **Incentives & Concessions :** As applicable under New Industrial Policy 2009-14.

General Terms and Conditions :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government policy of Employment to local people i.e. Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period to two years from the date of issue.

By Order and in the name of the Governor of Karnataka,

PR. 589

Aparna Pavate

Desk Officer (Technical Cell)

Commerce & Industries Department.

COMMERCE AND INDUSTRIES SECRETARIAT

Sub : Approval to the Project Proposal of M/s. Dynamatic Technologies Ltd., to manufacture Aerospace Components in 35 acres of land in KIADB Aerospace Industrial Area, Devanahalli Taluk, Bangalore Rural District.

Read : Proceedings of the 20th State High Level Clearance Committee (SHLCC) meeting held on 05-01-2010.

Preamble:

M/s. Dynamatic Technologies Ltd., proposes to establish a manufacturing unit for Aerospace Components in 35 acres of land in KIADB Aerospace Industrial Area, Devanahalli Taluk, Bangalore Rural District, with an investment of Rs. 465.80 crores, generating employment to about 2100 persons.

In the 20th State High Level Clearance Committee (SHLCC) meeting held on 05-01-2010, the proposal of the Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following Order.

GOVERNMENT ORDER NO. CI 59 SPI 2010, BANGALORE, DATED 23RD FEBRUARY 2010

Government is pleased to accord in principle approval for the project proposal of M/s. Dynamatic Technologies Ltd., to establish a manufacturing unit for Aerospace Components in 35 acres of land in KIADB Aerospace Industrial Area, Devanahalli Taluk, Bangalore Rural District, with an investment of Rs. 465.80 crores, generating employment to about 2100 persons and extend the following infrastructure facilities, incentives and concessions.

Infrastructure Facilities :

1. **Land :** 35 acres – KIADB Aerospace Industrial Area, Devanahalli Taluk, Bangalore Rural District.
2. **Power :** 1750 KVA from BESCOM.
3. **Water :** 24 KLD from KIADB.
4. **Incentives & Concessions :** As applicable under New Industrial Policy 2009-14.

General Terms and Conditions :

1. **MOU** : The project proponents will have to sign a MOU with the Government of Karnataka during the Global Investors Meet in June 2010.
2. **Environment** : The promoters to obtain CFE and CFO from KSPCB and environmental clearance from MOEF, GOI.
3. **Employment** : The Company shall prepare a plan for development of Human Resources required for the project, train local people and provide employment to these trained local youth and comply with Government policy of Employment to local people i.e. Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.

4. **Vendor Development** : Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development** : The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period to two years from the date of issue.

By Order and in the name of the Governor of Karnataka,
Aparna Pavate
Desk Officer (Technical Cell)
Commerce & Industries Department.

PR. 590

ಕೃಷಿ ಸಚಿವಾಲಯ

ವಿಷಯ : ಶ್ರೀ N. ಬೈಲಯ್ಯ, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು) ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮಡಿಕೇರಿ ಇವರಿಗೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ.

ಓದಲಾಗಿದೆ : 1. ಕೃಷಿ ಆಯುಕ್ತರ ಪತ್ರ ಸಂ. ಕೃಸಿಪ-(1)/ವಿವ-74/2009-10, ದಿನಾಂಕ 04-02-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ಶ್ರೀ N. ಬೈಲಯ್ಯ, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮಡಿಕೇರಿ ಇವರು ಕೌಟುಂಬಿಕ ಕಾರಣಗಳಿಂದಾಗಿ ಸ್ವಯಂ ನಿವೃತ್ತಿ ಹೊಂದಲು ಅನುಮತಿ ಕೋರಿ ಸಲ್ಲಿಸಿರುವ ದಿನಾಂಕ 26-11-2009ರ ಮನವಿಯೊಂದಿಗೆ ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇಹುವುದಿಲ್ಲವಾದ್ದರಿಂದ ಬಾಕಿ/ಬೇಬಾಕಿ ಪತ್ರಗಳ ನಿರೀಕ್ಷಣಾ ಷರತ್ತುಗಳಿಗೊಳಪಟ್ಟು ದಿನಾಂಕ 28-2-2010 ರಿಂದ ಅನ್ವಯಿಸುವಂತೆ ಸ್ವ-ಇಚ್ಛಾ ನಿವೃತ್ತಿಗೆ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ ಕೃತೋಇ 278 ಕೃಪಸೇ 2009, ಬೆಂಗಳೂರು, ದಿನಾಂಕ 25ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ N. ಬೈಲಯ್ಯ, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಮಡಿಕೇರಿ ಇವರಿಗೆ ಅವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಏನಾದರೂ ಇದ್ದರೆ ಅದನ್ನು ಅವರಿಗೆ ನೀಡಬೇಕಾದ ನಿವೃತ್ತಿ ಸವಲತ್ತುಗಳಿಂದ ವಸೂಲಿ ಮಾಡುವ ಷರತ್ತಿಗೊಳಪಟ್ಟು ದಿನಾಂಕ 28-2-2010 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 285(1)(ಎ) ಅನ್ವಯ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಕೆ. ಗುರಾಣಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಪಿ.ಆರ್.621

ಕೃಷಿ ಸಚಿವಾಲಯ

ವಿಷಯ : ಶ್ರೀ ಸರದಾರ್ ದಿಲಾವರ್ ಖಾನ್, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು) ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ.

ಓದಲಾಗಿದೆ : 1. ಕೃಷಿ ಆಯುಕ್ತರ ಪತ್ರ ಸಂ. ಕೃಸಿಪ-(1)/ವಿವ-75/2009-10, ದಿನಾಂಕ 04-02-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ ಶ್ರೀ ಸರದಾರ್ ದಿಲಾವರ್ ಖಾನ್, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ ಇವರು ಕೌಟುಂಬಿಕ ಕಾರಣಗಳಿಂದಾಗಿ ಸ್ವಯಂ ನಿವೃತ್ತಿ ಹೊಂದಲು ಅನುಮತಿ ಕೋರಿ ಸಲ್ಲಿಸಿರುವ ದಿನಾಂಕ 26-10-2009ರ ಮನವಿಯೊಂದಿಗೆ ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಬಾಕಿ ಇರುವುದಿಲ್ಲವಾದ್ದರಿಂದ ಬಾಕಿ/ಬೇಬಾಕಿ ಪತ್ರಗಳ ನಿರೀಕ್ಷಣಾ ಷರತ್ತುಗಳಿಗೊಳಪಟ್ಟು ದಿನಾಂಕ 28-2-2010 ರಿಂದ ಅನ್ವಯಿಸುವಂತೆ ಸ್ವ-ಇಚ್ಛಾ ನಿವೃತ್ತಿಗೆ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ ಕೃತೋಇ 42 ಕೃಪಸೇ 2009, ಬೆಂಗಳೂರು, ದಿನಾಂಕ 26ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಸರದಾರ್ ದಿಲಾವರ್ ಖಾನ್, ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು), ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಅವರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಏನಾದರೂ ಇದ್ದರೆ ಅದನ್ನು ಅವರಿಗೆ ನೀಡಬೇಕಾದ ನಿವೃತ್ತಿ ಸವಲತ್ತುಗಳಿಂದ ವಸೂಲಿ ಮಾಡುವ ಷರತ್ತಿಗೊಳಪಟ್ಟು ದಿನಾಂಕ 28-2-2010 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 285(1)(ಎ) ಅನ್ವಯ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಜಿ.ಕೆ. ಗುರಾಣಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಪಿ.ಆರ್.622

ENERGY SECRETARIAT

Sub : Conversion of Interest Free Loan of Rs.500 crores released to ESCOMs in 2008-09 as Equity for 2009-10 – Reg.

Read :
1. Cabinet decision of 06-11-2008 (Rs. 200 crores).
2. Cabinet decision of 09-01-2009 (on file No.EN 65 EEB 2008)
3. G.O. No. EN 86 PSR 2008/P1, dated 01-12-2008
4. G.O. No. EN 86 PSR 2008/P1, dated 16-12-2008
5. G.O. No. EN 391 NCE 2008, dated 30-12-2008
6. G.O. No. EN 86 PSR 2008, dated 19-01-2009
7. G.O. No. EN 86 PSR 2008/P1, dated 31-01-2009
8. G.O. No. EN 391 NCE 2008, dated 07-02-2009
9. G.O. No. EN 391 PSR 2008, dated 11-03-2009
10. G.O. No. EN 86 PSR 2008, dated 30-03-2009
11. G.O. No. EN 391 NCE 2008, dated 31-03-2009
12. Cabinet decision on 23-12-2009 (on file No. EN 67 PSR 2009)
13. D.O. letter No. PCKL/A12/162/2008-09/5055, dated 29-01-2010 of Managing Director, PCKL.

Preamble :

1. The State of Karnataka has been reeling under acute power shortage in the year 2008-09 which continued into the first quarter of 2009-10, and reached alarming and extra-

ordinary levels of power deficit. Other factors such as reduced availability of water from the hydro generating stations in Karnataka due to poor rainfall, reduction in power available from Central Sector Generation Station etc., added to the power deficit.

2. It was the considered opinion of the Government to take special measures to protect public interest to deal with the unprecedented power deficit situation in the State. Power Company of Karnataka Limited (PCKL)/Karnataka Power Transmission Corporation Limited (KPTCL) has been authorized to purchase high cost energy on behalf of ESCOMs from November 2008 to May 2009 to provide power by ESCOMs in Rural areas for definite time period of 6 hours in three phase and 6 hours in single phase as per the programme formulated by individual ESCOMs and 24 hours of power supply in Urban areas.

3. PCKL/KPTCL on behalf of ESCOMs procured short term high cost energy of 3809.83 MUs at a total cost of Rs.2639.31 crores (including UI) for the period from 16-11-2008 to 31-05-2009.

4. Since ESCOMs faced problems to meet the cash needs of the short term high cost energy procurement, Government vide G.O. read at (3) to (9) above released in 2008-09 an amount of Rs. 500 crores to ESCOMs through PCKL (i.e. Rs. 50+50+75+50+50+75+150 crores respectively) initially under the Head of Account "2801-80-101-1-04-106 (NP)".

5. In Government Orders read at (10) & (11) above, the amount of Rs.500 crores released as at para 4 above, was subsequently modified into interest free loan w.r.t. Supplementary Estimates-II 2008-09 as under :

Rs. In crores

Head of Account	G.O. No./date	
6801-00-800-1-01-394 (Plan)	EN 86 PSR 2008/30-3-2009	350.00
6801-00-800-1-01-294 (NP)	EN 391 NCE 2008/31-03-2009	150.00
	Total	500.00

6. The matter including para-3 and 4 above, was placed before the Cabinet in the meeting held on 23-12-2009.

7. Managing Director, PCKL in his letter read at (13) above, has reported that the amount of Rs.500 crores as per para-4 & 5 released by Government, has been allocated to ESCOMs as under :

		Rs. In crores
1)	HESCOM	220.35
2)	GESCOM	67.34
3)	CESC	70.52
4)	BESCOM	119.15
5)	MESCOM	22.64
	Total	**500**

8. Government has examined the proposal in detail to convert the interest free loan of Rs.500 crores released in 2008-09 to ESCOMs referred in para 4 & 5 above, as 'Equity support to ESCOMs' for FY 2009-10. Accordingly the following Order is issued.

Government Order No. EN 67 PSR 2009, Bangalore, Dated 01st March 2010

1) In the circumstances explained in the preamble, Government are pleased to accord approval to convert the interest free loan of Rs.500 crores (Rupees five hundred crores only) released to ESCOMs in 2008-09, as equity for the financial year 2009-10 as under :

		Rs. In crores
1)	HESCOM	220
2)	GESCOM	70
3)	CESC	70
4)	BESCOM	118
5)	MESCOM	22
	Total	**500**

2) The required entries with head of account, in the Government Account, to be carried out after approval of the Supplementary Estimates 2009-10.

3) This order is issued with the concurrence of Finance Department vide their U.O. Note No. FD 98 Exp-I/2010 dated 11-02-2010.

By Order and in the name of the Governor of Karnataka,

S.J. SAMPATH KUMAR,

Under Secretary to Government,

Energy Department

PR. 623

ಇಂಧನ ಸಚಿವಾಲಯ

ವಿಷಯ : ಮೆ॥ ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಬಜೆ ಕಿರು ಜಲ ವಿದ್ಯುತ್ ಯೋಜನೆಯನ್ನು 3.8 ಮೆಗಾ ವ್ಯಾಟ್‌ಗೆ ಹೆಚ್ಚಿಸಿ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ ಇಂಇ 87 ಎನ್‌ಸಿಇ 2003, ದಿನಾಂಕ 2-8-2003.
2. ಸರ್ಕಾರಿ ಆದೇಶ ಸಂಖ್ಯೆ ಇಎನ್ 87 ಎನ್‌ಸಿಇ 2003, ದಿನಾಂಕ 10-2-2004.
3. ಸರ್ಕಾರಿ ಆದೇಶ ಸಂಖ್ಯೆ ಇಎನ್ 18 ಎನ್‌ಸಿಇ 2007, ದಿನಾಂಕ 7-2-2007.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ ಕೆ.ಆರ್.ಇ.ಡಿ./06/ಬಜೆ/2009/4110, ದಿನಾಂಕ 11-12-2009.
5. ಸರ್ಕಾರದ ಪತ್ರ ಸಂಖ್ಯೆ ಇಎನ್ 622 ಎನ್‌ಸಿಇ 2009, ದಿನಾಂಕ 13-1-2010.
6. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ ಕೆ.ಆರ್.ಇ.ಡಿ./06/ಬಜೆ-ಎಂಹೆಚ್‌ಎಸ್/2010/252, ದಿನಾಂಕ 23/25-01-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಹಿರಿಯಡ್ಕ ಗ್ರಾಮದ ಬಳಿ ಸ್ವರ್ಣ ನದಿಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 2.00 ಮೆಗಾ ವ್ಯಾಟ್‌ನಿಂದ 3.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸದರಿ ಯೋಜನೆಯ ಕಾಲಾವಕಾಶವನ್ನು ದಿನಾಂಕ 11-2-2007 ರಿಂದ ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆಯ ಸಾಮರ್ಥ್ಯವನ್ನು 3.00 ಮೆಗಾ ವ್ಯಾಟ್‌ನಿಂದ 3.8 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಸರ್ಕಾರಿ ಪತ್ರದಲ್ಲಿ ಸದರಿ ಯೋಜನೆಯ ಸ್ಥಳ ಪರಿವೀಕ್ಷಣೆ ಮಾಡಿ ವಾಸ್ತವಾಂಶವನ್ನು ದೃಢಪಡಿಸಿಕೊಂಡು ವರದಿಯನ್ನು ನೀಡಲು ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ನೀಡಿರುವ ಪ್ರಗತಿಯ ಕುರಿತ ಮಾಹಿತಿ ಹಾಗೂ ದಿನಾಂಕ 19-01-2010 ರಂದು ನಡೆಸಿದ ಸ್ಥಳ ಪರಿವೀಕ್ಷಣಾ ವರದಿಯನ್ನು ಕಳುಹಿಸುತ್ತಾ, ಸಾಮರ್ಥ್ಯ ಹೆಚ್ಚುವರಿ ಪ್ರಸ್ತಾವನೆಯನ್ನು ಪರಿಗಣಿಸಲು ಶಿಫಾರಸ್ಸು ಮಾಡಿರುತ್ತಾರೆ.

ಯೋಜನಾ ಅನುಷ್ಠಾನಕ್ಕಾಗಿ ನೀಡಲಾಗಿದ್ದ ವರದಿಯು ದಿನಾಂಕ 10-02-2010 ರಂದು ಮುಕ್ತಾಯಗೊಂಡಿರುತ್ತದೆ. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರಿ ಆದೇಶ ಸಂಖ್ಯೆ : ಇಎನ್ 622 ಎನ್‌ಸಿಇ 2009, ಬೆಂಗಳೂರು, ದಿನಾಂಕ 23ನೇ ಫೆಬ್ರವರಿ 2010

ಮೆ॥ ದೇವರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಉಡುಪಿ ಜಿಲ್ಲೆಯ ಉಡುಪಿ ತಾಲ್ಲೂಕಿನ ಹಿರಿಯಡ್ಕ ಗ್ರಾಮದ ಬಳಿ ಸ್ವರ್ಣ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ ಬಜೆ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 3.00 ಮೆಗಾ ವ್ಯಾಟ್‌ನಿಂದ 3.8 ಮೆಗಾ ವ್ಯಾಟ್‌ಗೆ ಹೆಚ್ಚಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ 7.02.2010 ರಿಂದ ಮುಂದಿನ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

ಈ ಯೋಜನೆಯನ್ನು ಒಂದು ವರ್ಷದೊಳಗಾಗಿ ಅನುಷ್ಠಾನಗೊಳಿಸದಿದ್ದಲ್ಲಿ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗುವುದೆಂಬ ಷರತ್ತಿಗೊಳಪಟ್ಟು ಯೋಜನೆಯ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ.

ಈ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜಿ. ಸಂಪತ್ ಕುಮಾರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.624

ಇಂಧನ ಸಚಿವಾಲಯ

ವಿಷಯ : M/s. Sai Spurthi Power Private Limited ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ ಕೆ.ಆರ್.ಇ.ಡಿ./06/ಸಿರಸಿ/2007/2987, ದಿನಾಂಕ 24/29-1-2008.

2. ದಿನಾಂಕ 13-2-2009 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s. Sai Spurthi Power Private Limited ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕಿನ ಮಸ್ಕಿ ಗ್ರಾಮದ ಬಳಿ ಬಿಳಿಹಳ್ಳಕ್ಕೆ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ 23-10-2009 ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s. Sai Spurthi Power Private Limited ಇವರಿಗೆ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯ ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ ಇಎನ್ 57 ಎನ್‌ಸಿಇ 2008, ಬೆಂಗಳೂರು, ದಿನಾಂಕ 25ನೇ ಫೆಬ್ರವರಿ 2010

M/s. Sai Spurthi Power Private Limited ಇವರಿಗೆ ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕಿನ ಮಸ್ಕಿ ಗ್ರಾಮದ ಬಳಿ ಬೀಳಿಹಳ್ಳಕ್ಕೆ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ :-

1 (ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ.400.00 ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2 (ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಆವಿಷ್ಕರಿಸುವುದಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4. ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನೂ ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿ.ಪಿ.ಎ.) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

13. The developer should bear the risk of submersion in the event of Bedthi Scheme implemented by KPCL.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಜೆ. ಸಂಪತ್ ಕುಮಾರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್.625

ENERGY SECRETARIAT

Sub : Constitution of Technical Committee to Review/Formulate the guidelines for capacity allotment/enhancement of Mini Hydro/Wind Projects-reg.

Read : Letter No. KRED/06/Framework-enhancement/09-3841, dated 24-11-2009 and letter No. KRED/06/Framework-enhancement/09/4118, dated 15-12-2009 from the Managing Director, Karnataka Renewable Energy Development Limited.

Preamble:

At present there are no comprehensive guidelines/circular instructions regarding capacity allotment/enhancement especially in respect of Mini Hydro and Wind Energy Projects.

In the letters read at above, the Managing Director, Karnataka Renewable Energy Development Limited has sent a proposal to constitute a Technical Committee with the representatives from KPTCL,KPCL, Energy Department, Forest Department, Irrigation Department, KREDL etc.,

There is an absolute necessity of formulating comprehensive guidelines in order to ensure transparency and objectivity in capacity allotment/enhancement of mini hydro and wind projects in the State. The proposal of the Managing Director, KREDL has been examined in detail and issued following Orders :

Government Order No. EN 16 NCE 2010, Bangalore, Dated 24th February 2010

In the circumstances explained in the preamble, Government are pleased to Constitute a Technical Committee consisting of the following members to Review/Formulate the guidelines for capacity allotment/enhancement of Mini Hydro/Wind Power Projects with immediate effect and until further Orders:

1	The Manager Director, Karnataka Renewable Energy Development Limited, Bangalore	Chairman
2	The Manager Director, Power Company of Karnataka Limited, Bangalore	Member
3	The Deputy Secretary to Government, Energy Department, Bangalore	Member
4	The Chief Engineer (Design & Investigation), Karnataka Power Corporation Limited, Bangalore	Member

5	The Chief Engineer (Planning & Monitoring), Karnataka Power Transmission Corporation Limited, Bangalore	Member
6	The Conservator of Forests (Forest Conservation), Forest Department, Bangalore	Member
7	The Special Officer (Technical, MMI-3), Water Resources Department, Bangalore	Member
8	The Executive Engineer (Project), Energy Department, Bangalore	Member
9	The Executive Engineer-2, EMC Section, Energy Department, Bangalore	Member
10	The Special Officer, Karnataka Renewable Energy Development Limited, Bangalore	Convener

The committee shall finalise guidelines within one month and submit its report to Government.

By Order and in the name of Governor of Karnataka,

S.J. SAMPATH KUMAR,

Under Secretary to Government,

Energy Department

PR. 626

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೇಲೂರು ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.1690.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ವ್ಯ.ನಿ. ಕನನೀಸ ಒಚ ಮಂಡಳಿ ಬೆಂಗಳೂರು ರವರ ಪತ್ರ ಸಂಖ್ಯೆ/ಕ.ಜ.ಮಂ/ತಾಂತ್ರಿಕ/ಬೇಲೂರು-ನೀ.ಸ.ಯೋ/3966/2009-10, ದಿನಾಂಕ 09-03-2009.

ಪ್ರಸ್ತಾವನೆ :

ಬೇಲೂರು ಪಟ್ಟಣವು ಹಾಸನ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಒಂದಾಗಿದ್ದು. 2001 ರ ಜನಗಣತಿ ಪ್ರಕಾರ ಈ ಪಟ್ಟಣದ ಜನಸಂಖ್ಯೆಯು 19,241 ಇದ್ದು ಹಾಲಿ 25,000 ಇರುತ್ತದೆ. ಈ ಪಟ್ಟಣಕ್ಕೆ ಮೊದಲನೆ ಹಂತದ ನೀರು ಸರಬರಾಜು ಯೋಜನೆಯನ್ನು ಯಗಚಿ ನದಿ ಮೂಲದಿಂದ 0.90 ಎಂ.ಎಲ್.ಡಿ. ಸಾಮರ್ಥ್ಯದ ಜಲಶುದ್ಧೀಕರಣ ಘಟಕವನ್ನು 1963 ರಲ್ಲಿ ನಿರ್ಮಿಸಿ ಚಾಲನೆಗೊಳಿಸಲಾಯಿತು. ಎರಡನೇ ಹಂತದಲ್ಲಿ ಜಲಸಂಗ್ರಹಾಗಾರ ವಿತರಣಾ ಜಾಲ ಹಾಗೂ ಇತ್ಯಾದಿ ಕಾಮಗಾರಿಗಳನ್ನು ಒಳಗೊಂಡ ಯೋಜನೆಯನ್ನು 1975ರಲ್ಲಿ ಚಾಲನೆಗೊಳಿಸಲಾಯಿತು. ಯಗಚಿ ನದಿಯಲ್ಲಿ ನೀರಿನ ಹರಿವು ಕಡಿಮೆಯಾದ್ದರಿಂದ ಸಾಕಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗದ ಕಾರಣ ಯಗಚಿ ಜಲಾಶಯವನ್ನು ಮೂಲವಾಗಿಟ್ಟುಕೊಂಡು 2001 ರಲ್ಲಿ AUWSP ಯೋಜನೆಯಡಿ ತಲಾ ದಿನಂಪ್ರತಿ 100 ಲೀಟರ್ ನಂತೆ 2021 ಕ್ಕೆ ಅಂದಾಜಿಸಲಾದ 30000 ಜನಸಂಖ್ಯೆಗೆ ನೀರು ಪೂರೈಕೆ ಮಾಡಲು ವಿನ್ಯಾಸಿಸಿ, ಯೋಜನೆಯನ್ನು 2002-03ರಲ್ಲಿ ಚಾಲನೆಗೊಳಿಸಲಾಯಿತು.

ಪ್ರಸ್ತುತ ಪಟ್ಟಣವು ಬೆಳೆಯುತ್ತಿದ್ದು, ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಯಲ್ಲಿ ಜಲಸಂಗ್ರಹಾಗಾರಗಳ ಕೊರತೆಯಿದ್ದು, ಅಭಿವೃದ್ಧಿಗೊಂಡಿರುವ ಬಡಾವಣೆಗಳಿಗೆ ವಿತರಣಾ ಜಾಲದ ವ್ಯವಸ್ಥೆ ಇರುವುದಿಲ್ಲ. ಬೇಸಿಗೆಯಲ್ಲಿ ವಿದ್ಯುತ್‌ಚ್ಛಕ್ತಿ ಅಭಾವದಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತದೆ. ಆದ್ದರಿಂದ ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು ನೀರಿನ ಬೇಡಿಕೆಯನ್ನು ತಲಾ ದಿನಂಪ್ರತಿ 135 ಲೀಟರ್‌ನಂತೆ ಪರಿಗಣಿಸಿ 2041 ಕ್ಕೆ ಅಂದಾಜಿಸಲಾದ 45,000 ಜನಸಂಖ್ಯೆಗೆ ಯೋಜನೆಯನ್ನು ವಿನ್ಯಾಸಿಸಲಾಗಿದೆ.

ಈ ಯೋಜನೆಯನ್ನು ಮಂಡಳಿಯ ಮತ್ತು ಲೋಕೋಪಯೋಗಿ ಇಲಾಖೆಯ 2008-09 ನೇ ಸಾಲಿನ ದರಪಟ್ಟಿಯನ್ವಯ ರೂ.1690.00 ಲಕ್ಷಗಳಿಗೆ ತಯಾರಿಸಿ **ಕೊಳವೆ ನೀರು ಸರಬರಾಜು ಯೋಜನೆಯಡಿ** ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಮೇಲೆ ಓದಲಾದ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಯೋಜನೆಯನ್ನು ಮಂಡಳಿಯ 2009-10ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿಸಿ ರೂ.564.00 ಲಕ್ಷಗಳನ್ನು ಪ್ರಸ್ತುತ ಸಾಲಿನಲ್ಲಿ ಅನುವು ಮಾಡಲಾಗಿದೆ.

ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ನಅಇ 10 ಯುಡಬ್ಲ್ಯೂಎಸ್ 2009, ಬೆಂಗಳೂರು, ದಿನಾಂಕ 2ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೇಲೂರು ಪಟ್ಟಣಕ್ಕೆ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ ರೂ.1690.00 ಲಕ್ಷಗಳಲ್ಲಿ (ರೂ. ಒಂದು ಸಾವಿರದ ಆರು ನೂರ ತೊಂಬತ್ತು ಲಕ್ಷಗಳು ಮಾತ್ರ) ಕಲ್ಪಿಸುವ ಯೋಜನೆಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **"ಕೊಳವೆ ನೀರು ಸರಬರಾಜು ಯೋಜನೆಯಡಿ"** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) ETP and escalation charges should not be more than 5% and the Estimate should be revised accordingly.
2) Water rates as proposed by KUWS&DB have to be implemented to meet O&M cost.
3) KTPP provisions, quality control and timely completion of the Project should be ensured.
4) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ನ್ನು ಪಾಲಿಸುವುದು.
5) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡಕೂಡದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 18, Exp-9 : 2010, ದಿನಾಂಕ 29-01-2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಟಿ. ನಾರಾಯಣಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್.627

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಉಪ್ಪಾರಹಳ್ಳಿ ಸಣ್ಣ ನೀರಾವರಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ನೇರ್ಲಹಳ್ಳಿ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗಾಗಿ ಮುಂಗಡ ಹಣ ಠೇವಣಿ ಇಡುವ ಬಗ್ಗೆ.

ಓದಲಾಗಿದೆ : 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 26-02-2010 ರಂದು ಅಂತ್ಯಗೊಂಡ ಪತ್ರ ಸಂಖ್ಯೆ : ಮುಸದ/ಲೇಶಾಕೆ/ ಲೆಸ1/3/ಭೂಸ್ವಾಧೀನ/2009-10/538.

2) ಸುತ್ತೋಲೆ ಸಂಖ್ಯೆ : ಕಂಇ 42 ಭೂಸ್ವಾಹಾ 2000, ದಿನಾಂಕ 08-10-2001.

3) ಸರ್ಕಾರದ ಆದೇಶ ಸಂಖ್ಯೆ : ಸನೀಇ127ಭೂಸ್ವಾಪ್ರ 2006, ದಿನಾಂಕ 25-11-2006

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಊಪ್ಪಾರಳ್ಳಿ ಸಣ್ಣ ನೀರಾವರಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ನೇರ್ಲಹಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಹಾಗೂ ಪರಿಹಾರ ಧನದ ಮುಂಗಡ ಠೇವಣಿ ಪಾವತಿಸಲು ಹಣ ಬಿಡುಗಡೆ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಉಪ್ಪಾರಳ್ಳಿ ಸಣ್ಣ ನೀರಾವರಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ನೇರ್ಲಹಳ್ಳಿ ಗ್ರಾಮದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗಾಗಿ ಈಗಾಗಲೇ ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ರೂ. 2,94,000-00ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಇಡುವ ಸಲುವಾಗಿ ಬಿಡುಗಡೆ ಮಾಡಲಾಗಿದೆ.

ಕಂದಾಯ ಇಲಾಖೆಯು ಮೇಲೆ ಓದಲಾದ (2)ರ ಸುತ್ತೋಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಸಂಭವನೀಯ ಭೂಸ್ವಾಧೀನ ವೆಚ್ಚದ ಶೇ. 50ರಷ್ಟನ್ನು ಹಾಗೂ ಭೂಸ್ವಾಧೀನ ಕಾಯ್ದೆ ಕಲಂ 6(1)ರ ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಬಾಕಿ ಮೊತ್ತವನ್ನು ಮುಂಗಡ ಹಣವಾಗಿ ಭೂಸ್ವಾಧೀನಾಧಿಕಾರಿಗಳಲಿ ಠೇವಣಿ ಇಡಲು ಸೂಚಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 38 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 8ನೇ ಮಾರ್ಚ್ 2010

ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ಉಪ್ಪಾರಳ್ಳಿ ಸಣ್ಣ ನೀರಾವರಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ನೇರ್ಲಹಳ್ಳಿ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ರೂ. 2,94,000-00 (ಎರಡು ಲಕ್ಷದ ತೊಂಭತ್ತು ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಇಡುವ ಸಲುವಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 676

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಯಾದಗೀರ್ ತಾಲ್ಲೂಕು ಕೌಳೂರು ಏತ ನೀರಾವರಿ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಅದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 24-11-09 ರಂದು ಕೊನೆಗೊಂಡ ಪತ್ರ ಸಂಖ್ಯೆ : ಮುಇಂ/ಸನೀ/(ಉ)ವ/ಬಿಜಾ/ಭೂಸ್ವಾಪ್ರ/2008-09/6986.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಯಾದಗೀರ್ ತಾಲ್ಲೂಕು ಕೌಳೂರು ಏತ ನೀರಾವರಿ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 28-11-91

ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 27-07-93.

ಕೌಳೂರು ಗ್ರಾಮದ ಕೆರೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಸದರಿ ಗ್ರಾಮದ ಸ.ನಂ.ಗಳ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಬೇಕಾಗಿದೆ. ಇದರಲ್ಲಿ ಕೆಲವೊಂದು ಪ್ರಕರಣಗಳಿಗೆ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಅಭಿಪ್ರಾಯ ನೀಡಿದೆ. ಇತರೆ ಪ್ರಕರಣಗಳಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆದ ಬಗ್ಗೆ ಮಾಹಿತಿ ಇರುವುದಿಲ್ಲ. ಆದಾಗ್ಯೂ ಎಲ್ಲಾ ಪ್ರಕರಣಗಳಲ್ಲಿಯ ಜಮೀನನ್ನು ಒಂದೇ ಕೆರೆಗೆ ಹಾಗೂ ಒಂದೇ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿದ್ದು ಹಾಗೂ ಒಂದೇ ಸಾಮಾನ್ಯ ತೀರ್ಪು ಆಗಿದೆ. ಆದ್ದರಿಂದ ಈ ಹಂತದಲ್ಲಿ ಮೇಲ್ಮನವಿ ಸಲ್ಲಿಸುವಂತಹ ಯಾವುದೇ ಅಂಶಗಳು ಈ ಪ್ರಕರಣದಲ್ಲಿ ಕಂಡು ಬರುವುದಿಲ್ಲ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣ ವಿವರ ಕೆಳಕಂಡಂತಿದೆ :

ಕ್ರ.ಸಂ.	ಎಲ್‌ಎಸಿ ಸಂಖ್ಯೆ	ಕೌಳೂರು ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	276/96	375/ಎ	0–03	3299
2	295/96	69/ಇ	1–00	44038
3	292/96	31/ಎ	0–13	14511
4	293/96	69/ಎ	0–07	7704
5	300/96	376/ಎ	1–08	52845
6	305/96	42/ಎ	0–13	14311
7	318/96	36ಇ	0–04	4146
8	319/96	36ಎಎ	0–04	4146
9	320/96	36ಎ	0–04	4146
10	322/96	35	0–07	7252
11	323/96	35	0–07	7252
12	324/96	35	0–07	7252
13	325/96	35	0–07	7252
14	327/96	35	0–07	7252
15	328/96	35	0–07	7252
16	329/96	35	0–04	4146
17	330/96	59/2ಎ	0–09	9906
18	331/96	58	0–17	18716
19	334/96	90ಎ	0–12	13212
20	335/96	89/4ಎಸಿ	0–09	9906
21	360/96	375/ಎಎ	0–04	4409
22	336/96	31/ಎ	1–01	45137
23	340/96	112/ಎ	0–10	11008
24	341/96	112/ಎ	0–14	15412
25	342/96	112/ಎಎ	0–02	2201
26	343/96	112/ಇ	0–30	33027
27	345/96	113	0–10	11008
28	347/96	128/1	0–35	38531
29	350/96	51	0–18	19811
30	351/96	360	0–02	2201
31	353/96	363ಎಎ	0–04	4405
32	354/96	363/ಎಎ2	0–10	11008
33	365/96	66	0–38	41834
34	362/96	375/ಇ	0–05	5504
35	363/96	67	1–22	68258
36	368/96	41/2ಎ	0–07	7705
37	346/96	129/ಎ7ಇ	0–15	16512
38	361/96	372	0–24	26424

39	364/96	63	0–34	37432
40	303/96	85/ಎಎ7ಇ	1–08	52845
41	302/96	83/35	0–20	22018
42	301/96	109/110ಎಎಇಇ	0–35	38531
43	299/96	65ಎಎಇಇ	0–21	23118
44	298/96	65/ಎ	0–10	11008
45	297/96	68ಎಎ	0–28	30824
46	296/96	69/ಇಇ	0–04	4405
47	332/96	90/ಇ	0–09	9906
48	333/96	90/ಎಎ	0–12	13212
49	304/96	53/ಎ	0–06	6603
50	355/96	363/2ಎ	0–21	23117
51	356/96	369/ಎಎ	0–20	22019
52	357/96	370/ಎಎ	0–07	7705
53	358/96	371	0–10	11008
54	366/96	59/1	0–06	6603
55	367/96	41/2ಎ	0–07	7705
56	294/96	69/ಎ	0–01	1099
			ಒಟ್ಟು	**942097**

***ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 35 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 6ನೇ ಮಾರ್ಚ್ 2010

ಗುಲ್ಬರ್ಗಾ ಜಿಲ್ಲೆ ಯಾದಗೀರ್ ತಾಲ್ಲೂಕು ಕೌಳೂರು ಏತ ನೀರಾವರಿ ಯೋಜನೆಗಾಗಿ ಸ್ವಾಧೀನಪಡಿಸಿಕೋಳ್ಳಲಾದ ಕೌಳೂರು ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 9,42,097–00 ಗಳನ್ನು (ಒಂಭತ್ತು ಲಕ್ಷದ ನಲವತ್ತೆರಡು ಸಾವಿರದ ತೊಂಭತ್ತೇಳು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನು ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 677

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ವಜ್ಜಲ ಗ್ರಾಮ ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳಲ್ಲಿ ಮುಂಗಡ ಹಣ ಠೇವಣಿ ಇಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಸನೀಇ 43 ವಿಸವಿ 2004, ದಿನಾಂಕ 20-02-2010

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ, ಇವರ ದಿನಾಂಕ 23-02-2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಲೆಪ-1/2009-10/1168.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ವಜ್ಜಲ ಗ್ರಾಮ ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳಲ್ಲಿ ಮುಂಗಡ ಹಣ ಠೇವಣಿ ಇಡಲು ಈಗಾಗಲೇ ರೂ. 35,56,630-00ಗಳನ್ನು ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ವಜ್ಜಲ ಗ್ರಾಮ ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಮಂಜೂರಾದ ಅಂದಾಜಿನಲ್ಲಿ ನಿಗದಿಪಡಿಸಿದ ಮೊತ್ತ ರೂ. 407,10,000-00ಗಳಾಗಿದ್ದು ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಿರುವ ಮೊತ್ತ ರೂ. 35,56,630-00ಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ. 371,53,370-00ಗಳನ್ನು "ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಬಿಡುಗಡೆ ಮಾಡುವಂತೆ ಕೋರಿದ್ದಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ರೂ. 99.00,000/- (ತೊಂಭತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಲಭ್ಯವಿದ್ದು ಸದರಿ ಪ್ರಕರಣಕ್ಕೆ ಬಿಡುಗಡೆ ಮಾಡಲು ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 43 ವಿಸವಿ 2004, ಬೆಂಗಳೂರು, ದಿನಾಂಕ: 6ನೇ ಮಾರ್ಚ್ 2010

ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ವಜ್ಜಲ ಗ್ರಾಮ ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ರೂ. 99,00,000-00 (ತೊಂಭತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಇಡುವ ಸಲುವಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ "ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಆಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 678 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಮತ್ತು (ಉತ್ತರ) ವಲಯ, ಬಿಜಾಪುರ ವ್ಯಾಪ್ತಿಯಲ್ಲಿ ಬರುವ ಕಚೇರಿ ಉಪಯೋಗಕ್ಕಾಗಿ ಹೊಸ ವಾಹನಗಳನ್ನು ಖರೀದಿಸಲು ಅನುಮತಿ ಕುರಿತು-ಆದೇಶ.

ಓದಲಾಗಿದೆ : 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 24-10-2008ರ ಪತ್ರ ಸಂಖ್ಯೆ : ಮುಸದ/ತಾಂಸ-6/ಸ.ಇಂ-14/ವಾಹನಗಳು/2007-08/3968

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರ ದಿನಾಂಕ 06-11-2008ರ ಪತ್ರದ ಸಂಖ್ಯೆ : ಮುಇಂ/ಸಣೀ(ಉ)ವ/ಬಿಜೆಪಿ/ಪಿಬಿ-13/2008-09/5870.

3) ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 360 ಬಿಆರ್‌ಎಸ್ 2009, ದಿನಾಂಕ 2-3-2010.

ಪ್ರಸ್ತಾವನೆ :

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾಗಿರುವ ಪತ್ರದಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಬರುವ ವಿಭಾಗಗಳಿಗೆ/ಉಪ ವಿಭಾಗಗಳ ಉಪಯೊಗಕ್ಕಾಗಿ ವಾಹನಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (2)ರಲ್ಲಿ ಓದಲಾಗಿರುವ ಪತ್ರದಲ್ಲಿ ಸಣ್ಣ ನೀರಾವರಿ ಉತ್ತರ ವಲಯದ ವ್ಯಾಪ್ತಿಯಲ್ಲಿ ಬರುವ ವಿಭಾಗ/ಉಪ ವಿಭಾಗಗಳ ಉಪಯೋಗಕ್ಕಾಗಿ ವಾಹನಗಳನ್ನು ಖರೀದಿಸಲು ಅನುಮತಿ ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ 2-3-2010ರ ಆದೇಶದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹೊಸ ಜೀಪುಗಳನ್ನು ಖರೀದಿಸುವ ಸಲುವಾಗಿ ಲೆಕ್ಕಶೀರ್ಷಿಕೆ 2702-80-852-1-01-221 (ಯೋಜನೇತರ) ಅಡಿಯಲ್ಲಿ ರೂ. 38.79 ಲಕ್ಷಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿದೆ.

ಈ ಮೇಲ್ಕಂಡ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 105 ಮಸಾವಿ 2009, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರ ವ್ಯಾಪ್ತಿಯಲ್ಲಿ ಬರುವ ವಿಭಾಗ/ಉಪ ವಿಭಾಗ ಕಛೇರಿಗಳ ಉಪಯೋಗಕ್ಕಾಗಿ ಒಟ್ಟು 7 ಜೀಪುಗಳನ್ನು (ಟಾಟಾ ಸುಮೊ) ಅಂದಾಜು ವೆಚ್ಚ ರೂ. 34.08 ಲಕ್ಷಗಳಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ.

ಅದೇ ರೀತಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ವ್ಯಾಪ್ತಿಯಲ್ಲಿ ಬರುವ ವಿಭಾಗ/ಉಪ ವಿಭಾಗಗಳ ಕಛೇರಿಗಳ ಉಪಯೋಗಕ್ಕಾಗಿ ಒಟ್ಟು 7 ಜೀಪುಗಳನ್ನು (ಟಾಟಾ ಸುಮೊ) ಒಟ್ಟು ಅಂದಾಜು ವೆಚ್ಚ ರೂ. 34.08 ಲಕ್ಷಗಳಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ. ಮುಖ್ಯ ಇಂಜಿನಿಯರ್ ರವರು ಅವಶ್ಯಕತೆಗೆ ಅನುಗುಣವಾಗಿ ವಾಹನಗಳನ್ನು ಮರುಹಂಚಿಕೆ ಮಾಡಿಕೊಳ್ಳುವುದು.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು 2009-10ನೇ ಸಾಲಿಗೆ ಲೆಕ್ಕಶೀರ್ಷಿಕೆ "2702-2-80-052-1-01-221 (ಯೋಜನೇತರ) ಹೊಸ ಸರಬರಾಜು ಅಡಿ ಒದಗಿಸಿರುವ ರೂ. 29.37 ಲಕ್ಷ ಅನುದಾನ ಹಾಗೂ ಹೆಚ್ಚುವರಿಯಾಗಿ ಒದಗಿಸಿರುವ ರೂ 38.79 ಲಕ್ಷ ಅನುದಾನದಿಂದ ಭರಿಸುವುದು. ವಾಹನ ಖರೀದಿಗಾಗಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರುರವರಿಗೆ ರೂ. 34.08 ಲಕ್ಷಗಳನ್ನು (ಮೂವತ್ನಾಲ್ಕು ಲಕ್ಷದ ಎಂಟು ಸಾವಿರ ರೂ.ಗಳು ಮಾತ್ರ) ಮತ್ತು ಮುಖ್ಯ ಇಂಜಿನಿಯರ್, ಸಣ್ಣ ನಿರಾವರಿ (ಉತ್ತರ)ವಲಯ, ಬಿಜಾಪುರ ರವರಿಗೆ ರೂ. 34.08 ಲಕ್ಷಗಳನ್ನು (ಮೂವತ್ನಾಲ್ಕು ಲಕ್ಷದ ಎಂಟು ಸಾವಿರ ರೂ.ಗಳು ಮಾತ್ರ) ಸದರಿ ಲೆಕ್ಕಶೀರ್ಷಿಕೆಯಡಿ ಹಂಚಿಕೆ ಮಾಡಿ ಹೊಸ ಜೀಪುಗಳನ್ನು ಖರೀದಿಸಲು ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ : ಲೋಇ 109 ಆಕೋ-1/10 ದಿನಾಂಕ 20-02-2010ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 679

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಸೀತಾಪುರ ಏತ ನೀರಾವರಿ ಯೋಜನೆಗಾಗಿ ಅರಳಿಕುಪ್ಪೆ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಮುಂಗಡ ಹಣ ಠೇವಣಿ ಇಡುವ ಬಗ್ಗೆ.

ಓದಲಾಗಿದೆ : 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರ ದಿನಾಂಕ 06-02-2010ರ ಪತ್ರ ಸಂಖ್ಯೆ : ಮುಸದ/ಲೇಶಾಕೆ/ಲೆಸ-1/3/ಭೂಸ್ವಾಧೀನ/2009-10/354.

2) ಸುತ್ತೋಲೆ ಸಂಖ್ಯೆ : ಕಂಇ 42 ಭೂಸ್ವಾಹಾ 2000, ದಿನಾಂಕ : 08-10-2001.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಸೀತಾಪುರ ಏತ ನೀರಾವರಿ ಯೋಜನೆಗಾಗಿ ಅರಳಿಕುಪ್ಪೆ ಗ್ರಾಮದ ಸರ್ವೆ ನಂ : 99/1ಎ ಹಾಗೂ ಇತರೆ ಜಮೀನುಗಳಲ್ಲಿ 0-12 ಗುಂಟೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಹಾಗೂ ಪರಿಹಾರಧನದ ಮುಂಗಡ ಠೇವಣಿ ಪಾವತಿಸಲು ಹಣ ಬಿಡುಗಡೆ ಕುರಿತು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕಂದಾಯ ಇಲಾಖೆಯು ಮೇಲೆ ಓದಲಾದ (2)ರ ಸುತ್ತೋಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿ ಭೂಸ್ವಾಧೀನ ಕಾಯಿದೆ ಕಲಂ 4(1)ರ ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಸಂಭವನೀಯ ಭೂಸ್ವಾಧೀನ ವೆಚ್ಚದ ಶೇ. 50ರಷ್ಟನ್ನು ಮುಂಗಡ ಹಣವಾಗಿ ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಇಡಲು ಸೂಚಿಸಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 37 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 4ನೇ ಮಾರ್ಚ್ 2010

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಸೀತಾಪುರ ಏತ ನೀರಾವರಿ ಯೋಜನೆಗಾಗಿ ಅರಳಿಕುಪ್ಪೆ ಗ್ರಾಮದ ಸರ್ವೆ ನಂ : 99/1ಎ ಹಾಗೂ ಇತರೆ ಜಮೀನುಗಳಲ್ಲಿ ಒಟ್ಟು 0-12 ಗುಂಟೆ ಸ್ವಾಧೀನಪಡಿಸಿಕೊಳ್ಳಲು ರೂ. 30.916/-(ಮೂವತ್ತು ಸಾವಿರದ ಒಂಭೈನೂರ ಹದಿನಾರು ರೂಪಾಯಿಗಳು ಮಾತ್ರ) ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಇಡುವ ಸಲುವಾಗಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 680 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-1ರ (ಕೆಷಿಪ್-1) ಅವಧಿ ಮತ್ತು ಯೋಜನಾ ವೆಚ್ಚದ ಪರಿಷ್ಕರಣೆ.

1. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-1 (ಕೆಷಿಪ್-1) ರಾಜ್ಯದ ರಸ್ತೆ ಜಾಲದ ಅಭಿವೃದ್ಧಿಗೆ ಸರ್ಕಾರವ ಲೋಕೋಪಯೋಗಿ ಇಲಾಖೆಯಿಂದ ವಿಶ್ವ ಬ್ಯಾಂಕ್ ಬಾಹ್ಯ ನೆರವಿನಲ್ಲಿ ಕೈಗೊಂಡ ಯೋಜನೆಯಾಗಿದ್ದು, 1999-2000ರ ಅವಧಿಯಲ್ಲಿ ಸರ್ಕರದ ಆದೇಶ ಸಂಖ್ಯೆ ಲೋಇ : 21:ಸಿಆರ್‌ಎಂ: 96, ದಿನಾಂಕ 01-07-1999ರಡಿ ಪ್ರಾರಂಭಿಸಲಾಯಿತು.
2. ಯೋಜನೆಯ ಪ್ರಮುಖ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

*ಮೂಲ ಯೋಜನಾ ವೆಚ್ಚ ಡಾಲರ್‌ಗಳಲ್ಲಿ	:	ಯುಎಸ್‌ಡಿ 447 ಮಿಲಿಯನ್
*ಮೂಲಕ ಯೋಜನಾ ವೆಚ್ಚ ರೂಪಾಯಿಯಲ್ಲಿ	:	ರೂ. 2030.27 ಕೋಟಿ

*ವಿಶ್ವ ಬ್ಯಾಂಕ್ ನೆರವು	:	ರೂ. 1635 ಕೋಟಿ
*ರಾಜ್ಯ ಸರ್ಕಾರದ ಪಾಲು	:	ರೂ. 395 ಕೋಟಿ
*ಮೂಲ ಯೋಜನಾ ಅವಧಿ	:	5 1/2 ವರ್ಷಗಳು
*ವಿಶ್ವ ಬ್ಯಾಂಕ್ ಸಾಲ ಪ್ರಾರಂಭಿಕ ದಿನಾಂಕ	:	ಜುಲೈ, 2001
*ಯೋಜನೆಯ ಕಾಮಗಾರಿಗಳ ಮುಕ್ತಾಯ	:	30ನೇ ಜೂನ್, 2006
*ಯೋಜನೆಯ ಸಾಲದ ಅವಧಿಯ ಮುಕ್ತಾಯ	:	31ನೇ ಡಿಸೆಂಬರ್ 2006

3. ಯೋಜನೆಯಲ್ಲಿ ರಾಜ್ಯ ಹೆದ್ದಾರಿಗಳನ್ನು ಮುಖ್ಯವಾಗಿ ಒಳಗೊಂಡ 2414 ಕಿ.ಮೀ.ಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಇದರಲ್ಲಿ 900 ಕಿ. ಮೀ.ಗಳನ್ನು ಕನಿಷ್ಠ 7 ಮೀ. ಅಗಲಕ್ಕೆ ಮೇಲ್ದರ್ಜೆಗೇರಿಸಲಾಗಿದೆ ಹಾಗೂ 1514 ಕಿ.ಮೀಗಳನ್ನು 5.50 ಮೀ ಅಗಲಕ್ಕೆ ಪುನಃಶ್ಚೇತನಗೊಳಿಸಲಾಗಿದೆ. ಕೆಷಿಪ್-1 ರಡಿ ರಸ್ತೆ ಕ್ಷೇತ್ರದಲ್ಲಿ ಹೊಸ ಬದಲಾವಣೆಗಳನ್ನು, ಆಧುನಿಕ ವಿನ್ಯಾಸ, ಉತ್ತಮ ನಿರ್ಮಾಣ, ಗುಣ ಪರೀಕ್ಷೆ ವಿಧಾನಗಳು ಸಾಮಾಜಿಕ, ಪರಿಸರ ಹಾಗೂ ರಸ್ತೆ ಸುರಕ್ಷತೆ ಕ್ರಮಗಳನ್ನು ಪರಿಚಯಿಸಲಾಗಿದ್ದು ಇಲಾಖೆಯ ಕಾರ್ಯಕ್ಷಮತೆ ವೃದ್ಧಿಸುವಲ್ಲಿ ನೆರವಾಗಿದೆ.

4. ಯೋಜನೆಯ ಮೂಲ ಯೋಜನಾ ಅವಧಿ ಮತ್ತು ಯೋಜನಾ ವೆಚ್ಚವನ್ನು ನವೆಂಬರ್, 2006ರ ಸರ್ಕಾರದ ಆದೇಶ ಸಂಖ್ಯೆ ಲೋಇ : 55; ಇಎಪಿ : 2006 ದಿನಾಂಕ 25-11-2006 ಅಡಿಯಲ್ಲಿ ಪರಿಷ್ಕರಿಸಲಾಗಿದೆ. ಯೋಜನಾ ವೆಚ್ಚವನ್ನು ರೂ. 2030.27 ಕೋಟಿಗಳಿಂದ ರೂ. 2304.49 ಕೊಟಿಗಳಿಗೆ ಪರಿಷ್ಕರಿಸಲಾಗಿದ್ದು, ಇದರಲ್ಲಿ ರೂ. 275 ಕೋಟಿಗಳ ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗಿದೆ. ಯೋಜನಾ ಅವಧಿಯನ್ನು 30-06-2006 ರಿಂದ 31-10-2007ರ ವರೆಗೆ ಹಾಗೂ ಯೋಜನಾ ಸಾಲದ ಅವಧಿಯನ್ನು 31-12-2006 ರಿಂದ 31-01-2008ರ ವರೆಗೆ ವಿಸ್ತರಿಸಲಾಗಿದೆ.

5. ಯೋಜನೆಯ ಒಟ್ಟು ರಸ್ತೆ ಉದ್ದವಾದ 2414 ಕಿ.ಮೀ.ಗಳನ್ನು 50 ಗುತ್ತಿಗೆಗಳಾಗಿ 900 ಕಿ.ಮೀ.ಗಳನ್ನು ಮೇಲ್ದರ್ಜೆಗೇರಿಸುವ ಹಾಗೂ 1514 ಕಿ.ಮೀ.ಗಳನ್ನು ಪುನಃಶ್ಚೇತನಗೊಳಿಸುವ ಕಾಮಗಾರಿ ನಿರ್ವಹಿಸಲಾಗಿದ್ದು ಇದರಲ್ಲಿ 47 ಗುತ್ತಿಗೆಗಳ ಕಾಮಗಾರಿ ಪೂರ್ಣಗೊಂಡಿದೆ ಹಾಗೂ ಶೇ. 99.50% ರಷ್ಟು ರಸ್ತೆ ಅಭಿವೃದ್ಧಿ ಪೂರ್ಣಗೊಂಡಿದೆ. ಗುತ್ತಿಗೆ ಎಂ-27 ರಲ್ಲಿ ಅಂಶಿ ಅಭಯಾರಣ್ಯದಲ್ಲಿ ಹಾದು ಹೋಗುವ 19 ಕಿ.ಮೀ.ಗಳನ್ನು ಯೋಜನೆಯ ವ್ಯಾಪ್ತಿಯಿಂದ ಕೈಬಿಡಲಾಗಿದೆ.

6. ಭೂಸ್ವಾಧೀನ ಪ್ರಕ್ರಿಯೆ ರೈಲ್ವೆ ಇಲಾಖೆಯಿಂದ ಅಗತ್ಯ ವಿನ್ಯಾಸ ಪಡೆಯುವುದು ರಸ್ತೆಯ ಕೆಲವು ಭಾಗಗಳು ಅಭಯಾರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು ಹಾಗೂ ಕೆಲವು ಕಾಮಗಾರಿಗಳನ್ನು ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ ನಿರ್ವಹಿಸಬೇಕಾಗಿದ್ದ ಕಾರಣಗಳಿಂದ ಯೋಜನೆ ಪೂರ್ಣಗೊಳಿಸಲು ವಿಳಂಬವಾಗಿದ್ದು ಯೋಜನಾ ಅವಧಿಯನ್ನು 31-10-2007 ರಿಂದ ಮುಂದೆ ವಿಸ್ತರಿಸುವ ಅಗತ್ಯತೆ ಇರುತ್ತದೆ. ಎಲ್ಲಾ ಸಮಸ್ಯೆಗಳ ನಡುವೆಯೂ ಶೇ. 99 ರಷ್ಟು ಪ್ರಗತಿಯನ್ನು ಸಾಧಿಸಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಇನ್ನು ಕೇವಲ 4 ಗುತ್ತಿಗೆ ಕಾಮಗಾರಿಗಳು ಬಾಕಿ ಇರುತ್ತವೆ. (BP-1:1 M 32A:10 ಕಿಮೀ BP-2 ಸೇತುವೆ ಮತ್ತು U3 Br : ಸೇತುವೆ ಬಾಕಿ ಕಾಮಗಾರಿ) ಬಾಕಿ ಇರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಡಿಸೆಂಬರ್ 2010 ರವರೆಗೆ ಸಮಯದ ಅವಶ್ಯಕತೆ ಇರುತ್ತದೆ.

7. ಮೂಲ ಯೋಜನಾ ಮೊತ್ತವು ರೂ. 2030.27 ಕೋಟಿಗಳಾಗಿದ್ದು ಇದರಲ್ಲಿ ರೂ. 1635.00 ಕೋಟಿ ವಿಶ್ವಬ್ಯಾಂಕ್ ನಿಂದ ಸಾಲದ ರೂಪದಲ್ಲಿಯೂ ಹಾಗೂ ಉಳಿಕೆ ರೂ. 395 ಕೋಟಿಗಳನ್ನು ರಾಜ್ಯ ಸರ್ಕಾರದ ವತಿಯಿಂದಲೂ ಭರಿಸಲಾಗಿತ್ತು. ಸರ್ಕಾರದ ನವೆಂಬರ್ 2006 ದಿನಾಂಕ 25-11-2006ರ ಅನುಸಾರ ಮೂಲ ಯೋಜನಾ ವೆಚ್ಚವನ್ನು ರೂ. 2030.27 ರಿಂದ ರೂ. 2304-49 ಕೋಟಿಗಳಿಗೆ ಪರಿಷ್ಕರಿಸಲಾಯಿತು. ಇದರಲ್ಲಿ ಹೆಚ್ಚುವರಿ ಮೊತ್ತವಾದ ರೂ. 275 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗಿದೆ.

8. ಆಗಸ್ಟ್ 2009ರ ಆರ್ಥಿಕ ಪ್ರಗತಿಯಂತೆ ಪರಿಷ್ಕೃತ ಯೋಜನಾ ಮೊತ್ತವಾದ ರೂ. 2304.49 ಕೊಟಿಗಳನ್ನು ಪೂರ್ಣವಾಗಿ ಯೋಜನೆಗೆ ವೆಚ್ಚ ಮಾಡಲಾಗಿದೆ. 50 ಗುತ್ತಿಗೆಗಳಡಿ 30 ಗುತ್ತಿಗೆಗಳ ಕಾಮಗಾರಿ ಅಂತಿಮ ಬಿಲ್ ಇತ್ಯರ್ಥಗೊಂಡಿದೆ. ಪೂರ್ಣಗೊಂಡಿರುವ 17 ಕಾಮಗಾರಿಗಳ ಅಂತಿಮ ಬಿಲ್‌ಗಳ ಹಾಗೂ ಪ್ರಗತಿಯಲ್ಲಿರುವ 3 ಕಾಮಗಾರಿಗಳ ಬಾಬ್ತು ಕೆಷಿಪ್-1 ಯೋಜನೆಗೆ ಪರಿಷ್ಕೃತ ಯೋಜನಾ ವೆಚ್ಚದ ಮೇಲೆ ಇನ್ನೂ ರೂ. 85 ಕೋಟಿಗಳ ಹೆಚ್ಚುವರಿ ಮೊತ್ತದ ಅಗತ್ಯವಿದೆ. ಯೊಜನೆಯ ಅಂತಿಮ ವೆಚ್ಚವು ರೂ. 2389.49 ಕೋಟಿಗಳಾಗಲಿದೆ.

9. ಪರಿಷ್ಕೃತ ಯೋಜನಾ ವೆಚ್ಚಕ್ಕೆ ಹೋಲಿಸಿದಲ್ಲಿ ಸಿವಿಲ್ ಕಾಮಗಾರಿಗಳಲ್ಲಿ ರೂ. 60.55 ಕೋಟಿ ಹಾಗೂ ಸೇವೆಗಳಲ್ಲಿ ರೂ. 25.60 ಕೋಟಿಗಳ ಹೆಚ್ಚುವರಿ ಅಗತ್ಯವಿರುತ್ತದೆ.

10. ಬಾಹ್ಯ ನೆರವಿನ ಯೋಜನೆಗಳಿಗೆ ರಚಿಸಲಾಗಿರುವ ರಾಜ್ಯ ಮಟ್ಟದ ಸಮನ್ವಯ ಸಮಿತಿಯು ದಿನಾಂಕ 24-12-2009ರ ಸಭೆಯಲ್ಲಿ ಕೆಶಿಪ್-1 ಪ್ರಸ್ತಾವನೆಯ್ನು ಪರಿಶೀಲಿಸಿ ಯೋಜನೆಯ ಬಾಕಿ ಕೆಲಸಗಳನ್ನು ಜುಲೈ 2010ರೊಳಗೆ ಪೂರ್ಣಗೊಳಿಸಲು ಸೂಚಿಸಿ ಈ ಕೆಳಕಂಡ ಅಂಶಗಳಿಗೆ ತನ್ನ ಸಹಮತಿ ನೀಡಿರುತ್ತದೆ.

i) ಕೆಶಿಪ್-1 ಯೋಜನಾ ವೆಚ್ಚವನ್ನು ರೂ. 2304.49 ಕೋಟಿಯಿಂದ ರೂ. 2389.49 ಕೋಟಿಗೆ ಪರಿಷ್ಕರಣೆ.

ii) ಕೆಶಿಪ್-1 ಯೋಜನಾ ಅವಧಿಯನ್ನು 31-10-2007 ರಿಂದ 31-07-2010 ರವರಿಗೆ ವಿಸ್ತರಣೆ

iii) ಕೆಶಿಪ್-1 ಗೆ ಅಗತ್ಯವಿರುವ ರೂ. 85 ಕೋಟಿ ಹೆಚ್ಚುವರಿ ಮೊತ್ತವನ್ನು 2009-10ರ ಆರ್ಥಿಕ ಸಾಲಿನಲ್ಲಿ ನೀಡಿರುವ ರೂ. 400 ಕೋಟಿ ಅನುದಾನದಲ್ಲಿ ಭರಿಸಲು ಹಾಗೂ ಪ್ರಸ್ತಾವನೆಯನ್ನು ಸರ್ಕಾರದ ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲು.

11. ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಕೆಶಿಪ್ ಯೋಜನಾ ಮಂಡಳಿಯು ದಿನಾಂಕ 08-01-2010ರ ಸಭೆಯಲ್ಲಿ ಪ್ರಸ್ತಾವನೆಯನ್ನು ಅನುಮೋದಿಸಿದೆ.

12. ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಲೋಇ 5 ಇಎಪಿ 2010, ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2010

ಈ ಕೆಳಗೆ ಸೂಚಿಸಿರುವ ಷರತ್ತುಗಳೊಂದಿಗೆ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

i) ಕೆಶಿಪ್-1ರ ಯೋಜನಾ ವೆಚ್ಚವನ್ನು ರೂ. 2304.49 ಕೋಟಿಯಿಂದ ರೂ. 2389.49 ಕೋಟಿಗೆ ಪರಿಷ್ಕರಣೆ ಮಾಡಲು

ii) ಕೆಶಿಪ್-1ರ ಯೋಜನಾ ಅವಧಿಯನ್ನು 31-10-2007 ರಿಂದ 31-07-2010 ರವರಿಗೆ ವಿಸ್ತರಿಸಲು ಹಾಗೂ

iii) ಕೆಶಿಪ್-1 ಯೋಜನೆಗೆ ಅಗತ್ಯವಿರುವ ರೂ. 85.00 ಕೋಟಿ ಹೆಚ್ಚುವರಿ ಮೊತ್ತವನ್ನು 2009-10ರ ಆರ್ಥಿಕ ಸಾಲಿನಲ್ಲಿ ನೀಡಿರುವ ರೂ. 400.00 ಕೋಟಿ ಅನುದಾನದಲ್ಲಿ ಕೆಶಿಪ್-1ರ ಕಾಮಗಾರಿಗಳಿಗೆ ಮಾತ್ರ ವೆಚ್ಚ ಮಾಡಲು ಮತ್ತು ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ಅನುಮೋದನೆಯನ್ನು ಪಡೆದು ಹಾಗೂ ವಿಳಂಬದಿಂದ ವೆಚ್ಚ ಹೆಚ್ಚುವರಿಯಾಗದಂತೆ ಎಚ್ಚರವಹಿಸಿ ಭರಿಸಲು ಅನುಮತಿ ನಿಡಿದೆ.

ಷರತ್ತುಗಳು :

*There shall be no refund of the LD previously recovered

*Further LD shall be recovered as per the said decision

*Price escalation and rates payable shall be only as per contract provisions

*No. claim letter to be obtained from contractors towards granting of EOT to avoid any form of financial claims and disputes

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ : ಲೋಇ 765 ಅಕೋ-1/09, ದಿನಾಂಕ 23-10-2009 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ದೇವಿಪ್ರಸಾದ್)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 681 ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಕಾರ್ಮಿಕ ಸಚಿವಾಲಯ

ವಿಷಯ : ಶ್ರೀ ಟಿ.ಜಿ. ಮಹಾದೇವಸ್ವಾಮಿ, ನಿವೃತ್ತ ಸಹಾಯಕ ನಿರ್ದೇಶಕರು (ಉದ್ಯೋಗ), ಇವರ ದಂಡನಾ ಆದೇಶವನ್ನು ಪುನರ್ ಪರಿಷ್ಕರಿಸುವ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ 185 ಇಟಿಎಕ್ಸ್ 1989, ದಿನಾಂಕ 28-5-2004.

2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ : 3388/2004ರಲ್ಲಿ ನೀಡಿರುವ ಅಂತಿಮ ಆದೇಶ ದಿನಾಂಕ 4-6-2009

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಟಿ.ಜಿ. ಮಹಾದೇವಸ್ವಾಮಿ, ನಿವೃತ್ತ ಸಹಾಯಕ ನಿರ್ದೇಶಕರು (ಉದ್ಯೋಗ), ಇವರಿಗೆ ಸಹಾಯಕ ನಿರ್ದೇಶಕರ ಹುದ್ದೆಯಿಂದ ಕೆಳಗಿನ ದರ್ಜೆಯ ಉದ್ಯೋಗಾಧಿಕಾರಿ ಹುದ್ದೆಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(5) ರನ್ವಯ ಹಿಂಬಡ್ತಿ

ನೀಡಿ ದಂಡನೆ ವಿಧಿಸಲಾಗಿತ್ತು ಹಾಗೂ ಇವರ ವೇತನವನ್ನು ಉದ್ಯೋಗಾಧಿಕಾರಿ ಹುದ್ದೆಯ ವೇತನ ಶ್ರೇಣಿ ರೂ. 5575-10620 ರಲ್ಲಿ ಕನಿಷ್ಠ ಮೂಲ ವೇತನ ರೂ. 5575/-ಕ್ಕೆ ನಿಗದಿಪಡಿಸಲಾಗಿತ್ತು.

ಸದರಿ ಆದೇಶವನ್ನು ಪ್ರಶ್ನಿಸಿ ಶ್ರೀ ಟಿ.ಜಿ. ಮಹಾದೇವಸ್ವಾಮಿ, ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ : 3388/2004 ನ್ನು ಸಲ್ಲಿಸಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 4-6-2009 ರಂದು ಅಂತಿಮ ತೀರ್ಪನ್ನು ನೀಡಿರುತ್ತದೆ.

ಮೇಲೆ (2)ರಲ್ಲಿ ಓದಲಾದ ತನ್ನ ಅಂತಿಮ ತೀರ್ಪಿನ ಕಂಡಿಕೆ (7) ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ಕೆಳಗಿನಂತೆ ಆದೇಶಿಸಿರುತ್ತದೆ.

"For the abovesaid reasons, we allow the application in part. While affirming the conclusion of the disciplinary authority, that the charge had been proved, we modify the penalty imposed in Government Order No. SWL 185 ETX 1989, dt. 28-5-2004 restricting the imposition of penalty till 30-3-2006. The post of the applicant at the time of imposition of penalty and the salary he was getting at that time shall stand restored on 31-3-2006 and pensionary benefits shall be fixed on the basis of the same. If this necessitates re-fixation of pension, the same shall be done within a period of three months."

ಈ ತೀರ್ಪಿನ ಅನುಸಾರ ಶ್ರೀ ಟಿ.ಜಿ. ಮಹಾದೇವಸ್ವಾಮಿ ಇವರ ದಂಡನಾ ಆದೇಶವನ್ನು ಪುನರ್ ಪರಿಷ್ಕರಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನಿಸಲಾಗಿದ್ದು, ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 17 ಇಟಿಎಕ್ಸ್ 2010, ಬೆಂಗಳೂರು, ದಿನಾಂಕ: 9-3-2010

ಶ್ರೀ ಟಿ.ಜಿ. ಮಹಾದೇವಸ್ವಾಮಿ, ನಿವೃತ್ತ ಸಹಾಯಕ ನಿರ್ದೇಶಕರು (ಉದ್ಯೋಗ), ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 185 ಇಟಿಎಕ್ಸ್ 1989 ದಿನಾಂಕ 28-5-2004ರ ಮೂಲಕ ವಿಧಿಸಲಾದ ದಂಡನೆಯ ದಿನಾಂಕ : 30-3-2006ರ ತನಕ ಮಾತ್ರ ಜಾರಿಯಲ್ಲಿರುತ್ತದೆ. ದಿನಾಂಕ : 31-3-2006 ರಿಂದ ಅನ್ವಯವಾಗುವಂತೆ ಇವರ ವೇತನವನ್ನು ಅವರ ಹಿಂದಿನ ಹುದ್ದೆಯಾದ ಸಹಾಯಕ ನಿರ್ದೇಶಕರ ಹುದ್ದೆಯಲ್ಲಿ ಪಡೆಯುತ್ತಿದ್ದ ವೇತನಕ್ಕೆ ಪುನರ್ ಸ್ಥಾಪಿಸಲಾಗಿದೆ. ಹಾಗೂ ಇವರ ನಿವೃತ್ತ ವೇತನ ಹಾಗೂ ನಿವೃತ್ತ ಸೌಲಭ್ಯಗಳನ್ನು ಮರುಸ್ಥಾಪಿಸಲ್ಪಟ್ಟ ವೇತನ ಮೇಲೆ ನಿಗದಿಪಡಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 687

(ಎ.ಎಸ್. ವಿಶ್ವೇಶ್ವರಯ್ಯ)
ಪೀಠಾಧಿಕಾರಿ
ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಅರುಣಕುಮಾರ ವಿ. ಸಾಳುಂಕೆ, ಪಿ.ಎಸ್.ಐ. ಖಡೇಬಜಾರ ಪೊಲೀಸ್ ಠಾಣೆ, ಬೆಳಗಾವಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರ ಆದೇಶ ಸಂಖ್ಯೆ : ಸಿಬ್ಬಂದಿ 2ಎ/ಪಿಆರ್/124/2008 ಆಪು ಸಂ : 58/08, ದಿನಾಂಕ 27-1-2008
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ : ಅಪೀಲು (9)ಉವ/2009, ದಿನಾಂಕ 29-5-09
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ, ದಿನಾಂಕ 11-6-09
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 26/2009-10, ದಿನಾಂಕ 22-10-2009.

ಪ್ರಸ್ತಾವನೆ :

ಶ್ರೀ ಅರುಣಕುಮಾರ ವಿ. ಸಾಳುಂಕೆ, ಪಿ.ಎಸ್.ಐ. ಖಡೇಬಜಾರ ಪೊಲೀಸ್ ಠಾಣೆ, ಬೆಳಗಾವಿ, ಇವರು ಖಾನಾಪುರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಆಪಾದಿತ ಪೊಲೀಸ್ ಅಧಿಕಾರಿಯಾದ ನೀವು ಶ್ರೀಮತಿ ವಿನೂತಾ ಸತೀಶ ನೇಸರಿ, ಸಾ: ಖಾನಾಪುರ ಇವರ ಆತ್ಮ ಸಂರಕ್ಷಣಾ ಆಯುಧ ಅನುಜ್ಞಾ ಪತ್ರದ ವಿಚಾರಣೆ ಕಾಲಕ್ಕೆ ವಿಳಂಬ ನೀತಿ ಅನುಸರಿಸಿರುವುದಲ್ಲದೇ ಠಾಣೆಯ ದಾಖಲಾತಿಗಳ ಬಗ್ಗೆ ವೈಯುಕ್ತಿಕ ಗಮನಹರಿಸದೇ ಕೇವಲ ಠಾಣೆಯ ಬರಹಗಾರರ ಮೇಲೆಯೇ ಜವಾಬ್ದಾರಿಯನ್ನು ವಹಿಸಿ, ಮೇಲಾಧಿಕಾರಿಗಳ ಆದೇಶವನ್ನು ಕಡೆಗಾಣಿಸಿ, ನಿಮ್ಮ ಕರ್ತವ್ಯದಲ್ಲಿ ಘೋರ ನಿಷ್ಕಾಳಜಿತನ ಹಾಗೂ ಬೇಜವಾಬ್ದಾರಿತನವನ್ನು ಪ್ರದರ್ಶಿಸಿರುವಿರಿ".

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 27-1-09ರ ಆದೇಶದಲ್ಲಿ ಅರ್ಜಿದಾರರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಶಿಸ್ತು ಪ್ರಾಧಿಕಾರದ ಆದೇಶವನ್ನು ಭಾಗಶಃ ಮಾರ್ಪಡಿಸಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ : 29-5-2009ರ ಆದೇಶದಲ್ಲಿ ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 118 ಪೊಸಿಅ 2009, ಬೆಂಗಳೂರು, ದಿನಾಂಕ: 8-2-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಅರುಣಕುಮಾರ ವಿ. ಸಾಳುಂಕೆ, ಪಿ.ಎಸ್.ಐ. ಖಡೇಬಜಾರ ಪೊಲೀಸ್ ಠಾಣೆ, ಬೆಳಗಾವಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 688

(ಟಿ.ಎನ್. ರವಿಪ್ರಕಾಶ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಸುವರ್ಣ ವಸ್ತ್ರ ನೀತಿ 2008-2013ರಡಿ ಜವಳಿ/ಸಿದ್ಧ ಉಡುಪು ಬೃಹತ್ ಯೋಜನೆಗಳ ಸ್ಥಾಪನೆ-ಸಮನ್ವಯ ಸಮಿತಿ ರಚಿಸುವ ಬಗ್ಗೆ

ಸರ್ಕಾರದ ಆದೇಶ ಸಂಖ್ಯೆ : ವಾಕೈ 21 ಜವಿಮ 2009, ಬೆಂಗಳೂರು, ದಿನಾಂಕ 3-3-2010

ಪ್ರಸ್ತಾವನೆ :

ಸುವರ್ಣ ವಸ್ತ್ರ ನೀತಿ ಯೋಜನೆಯಡಿ ವಲಯ-(1) ಮತ್ತು (2)ರಲ್ಲಿ ಒಂದೇ ಯೋಜನೆಗಾಗಿ ಬಂಡವಾಳ ವೆಚ್ಚದ ಸಲುವಾಗಿ ರೂ. 100 ಕೋಟಿ ಮತ್ತು ಅದಕ್ಕೂ ಹೆಚ್ಚಿನ ಹೂಡಿಕೆ ಮಾಡುವ ಹಾಗೂ ಕನಿಷ್ಠ 500 ನೇರ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಜವಳಿ ಮತ್ತು ಉಡುಪು ತಯಾರಿಕ ಘಟಕಗಳನ್ನು ಬೃಹತ್ ಯೋಜನೆಯೆಂದು ವರ್ಗೀಕರಿಸಿ, ಈ ಬೃಹತ್ ಯೋಜನೆಗಳಿಗೆ ಪ್ರತ್ಯೇಕವಾಗಿ ಪ್ರಕರಣಗಳನ್ನು ಆಧರಿಸಿ, ವಿಶೇಷ ನೆರವು ಒದಗಿಸಲಾಗುವುದೆಂದು ತಿಳಿಸಲಾಗಿದೆ.

ಸುವರ್ಣ ವಸ್ತ್ರ ನೀತಿ ಅನುಷ್ಠಾನಕ್ಕೆ ಸರ್ಕಾರವು ಉನ್ನತ ಮಟ್ಟದ ಅಧಿಕಾರಿಯುಕ್ತ ಸಮಿತಿ, ರಾಜ್ಯ ಮಟ್ಟದ ಯೋಜನಾ ಅನುಷ್ಠಾನ ಸಮಿತಿ ಹಾಗೂ ಜಿಲ್ಲಾ ಮಟ್ಟದ ಯೋಜನಾ ಉಸ್ತುವಾರಿ ಸಮಿತಿಗಳನ್ನು ಅಲ್ಲದೆ, ಸಿದ್ಧ ಉಡುಪು ವಲಯಗಳ ಸ್ಥಾಪನೆಗೆ ಕಾರ್ಯಪಡೆ ಸಮಿತಿ ಹಾಗೂ ಸಲಹಾ ಸಮಿತಿಗಳನ್ನು ರಚಿಸಿದೆ.

ರಾಜ್ಯ ಹಾಗೂ ಹೊರ ರಾಜ್ಯದ ಉದ್ದಿಮೆದಾರರನ್ನು ಆಕರ್ಷಿಸಿ, ಮೆಗಾ ಯೋಜನೆಗಳ ಅನುಷ್ಠಾನಕ್ಕೆ ಕ್ರಮವಹಿಸಲು ಸಮನ್ವಯ ಸಮಿತಿಯನ್ನು ರಚಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಾಗೂ ರಾಜ್ಯದಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶಗಳನ್ನು ಆಯೋಜಿಸಿರುವ ಹಿನ್ನೆಲೆಯಲ್ಲಿ, ಸುವರ್ಣ ವಸ್ತ್ರ ನೀತಿ ಅಡಿ ಮೆಗಾ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿಯೊಂದನ್ನು ರಚಿಸಲು ಸರ್ಕಾರವು ಉದ್ದೇಶಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದ ಹಾಗೂ ಹೊರ ರಾಜ್ಯದ ಉದ್ದಿಮೆದಾರರನ್ನು ಆಕರ್ಷಿಸಿ, ಮೆಗಾ ಯೋಜನೆಗಳ ಅನುಷ್ಠಾನಕ್ಕೆ ಕ್ರಮವಹಿಸಲು ಸರ್ಕಾರವು, ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮನ್ವಯ ಸಮಿತಿಯನ್ನು ರಚಿಸಿದೆ :-

1.	ಸರ್ಕಾರದ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಅಧ್ಯಕ್ಷರು
2.	ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ	ಸದಸ್ಯರು
3.	ಸರ್ಕಾರದ ಉಪ ಕಾರ್ಯದರ್ಶಿ (ಜವಳಿ) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
4.	ಆಂತರಿಕ ಆರ್ಥಿಕ ಸಲಹೆಗಾರರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
5.	ಐ.ಎಲ್ & ಎಫ್.ಎಸ್. ಸಂಸ್ಥೆಯ ಪ್ರತಿನಿಧಿಗಳು	ಸದಸ್ಯರು
6.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ವಿದ್ಯುತ್‌ಮಗ್ಗಗಳ ಅಭಿವೃದ್ಧಿ ನಿಗಮ ನಿ., ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಈ ಸಮಿತಿಯು ಈ ಕೆಳಕಂಡ ಉಲ್ಲೇಖ ಮತ್ತು ನಿಬಂಧನೆಗಳ ಅಡಿ ಕಾರ್ಯನಿರ್ವಹಿಸತಕ್ಕದ್ದು :-

1. ರಾಜ್ಯ ಮತ್ತು ಹೊರ ರಾಜ್ಯದ ಜವಳಿ ಉದ್ದಿಮೆದಾರರ ಜೊತೆ ಸಂಪರ್ಕ ಬೆಳೆಸಿ, ಕರ್ನಾಟಕದಲ್ಲಿ ವಿಶೇಷವಾಗಿ ದೊರಕುವ ಪ್ರೋತ್ಸಾಹಗಳನ್ನು ಮನದಟ್ಟು ಮಾಡಿ, ಕರ್ನಾಟಕದಲ್ಲಿ ಉದ್ದಿಮೆ ಸ್ಥಾಪಸಲು ಕ್ರಮಕೈಗೊಳ್ಳುವುದು.
2. ವಿವಿಧ ಇಲಾಖೆಗಳ ಜೊತೆಗೆ ಸಂಪರ್ಕ ಬೆಳೆಸಿ ಉದ್ದಿಮೆದಾರರಿಗೆ ಉದ್ದಿಮೆ ಸ್ಥಾಪಿಸಲು escort service ಒದಗಿಸುವುದು.
3. ಸರ್ಕಾರದ ಮಟ್ಟದಲ್ಲಿ ವಿವಿಧ ಇಲಾಖೆಗಳಲ್ಲಿ ತ್ವರಿತ ಅನುಮೋದನೆಗಳನ್ನು ಪಡೆಯಲು ಕ್ರಮ ವಹಿಸುವುದು.
4. ಉದ್ದಿಮೆಗೆ ಬೇಕಾದ ಜಮೀನನ್ನು ಹಂಚಿಕೆ ಪಡೆಯಲು ಕೆ.ಐ.ಎ.ಡಿ.ಬಿ/ಜಿಲ್ಲಾಧಿಕಾರಿಗಳ ಜೊತೆಗೆ ಪತ್ರ ವ್ಯವಹಾರ ಮಾಡುವುದು.
5. ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು Single Window Agency ಮೂಲಕ ಸಂಬಂಧಪಟ್ಟ ಮಂಜೂರಾತಿ, ಅನುಮೋದನೆ ಮುಂತಾದವುಗಳ ಕಾರ್ಯ ನಿರ್ವಹಣೆಯನ್ನು ಹೇಗೆ ನಿರ್ವಹಿಸುತ್ತಿದೆಯೋ ಅದೇ ಮಾದರಿಯಲ್ಲಿ ಜವಳಿ ಉದ್ದಿಮೆಗೆ ಸಂಬಂಧಪಟ್ಟ ಮಂಜೂರಾತಿ, ಅನುಮೋದನೆ ಮುಂತಾದವುಗಳ ಕಾರ್ಯನಿರ್ವಹಣೆಯನ್ನು ನಿರ್ವಹಿಸುವುದು ಹಾಗೂ ಇದಕ್ಕೆ ಶುಲ್ಕವನ್ನು ಪಡೆಯಲು ಅನುಮೋದಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 689

(ಎಂ.ಎಸ್. ಗಣಪತಿ)
ಸರ್ಕಾರದ ಉಪ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ದಿನಾಂಕ : 31-3-2010ರೊಳಗೆ ನಡೆಸಬೇಕಾಗಿರುವ ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದರ ಕಾರ್ಯದರ್ಶಿಯವರ ಪತ್ರ ಸಂಖ್ಯೆ : ಕ.ರಾ.ನ್ಯಾ.ಇ.ನೌ.ಗೃ.ನಿ.ಸ.ಸಂ.ನಿ/ 49/2009-10, ದಿನಾಂಕ :

ಪ್ರಸ್ತಾವನೆ :

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2)ರಡಿ ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದು ಮಾರ್ಚ್ 2010 ರಲ್ಲಿ ತನ್ನ ಆಡಳಿತ ಸಮಿತಿಗೆ ಚುನಾವಣೆಯನ್ನು ನಡೆಸಬೇಕಾಗಿದ್ದು ಸದರಿ ಸಂಘದ ಕಾರ್ಯದರ್ಶಿಯವರು ಮೇಲೆ ಓದಲಾದ ಪತ್ರದಲ್ಲಿ ಸದರಿ ಸಂಘದ ಆಡಳಿತ ಮಂಡಳಿಯ ಚುನಾವಣೆಯನ್ನು ಮಾರ್ಚ್ 2010 ರಲ್ಲಿ ನಡೆಸಿದಾದಲ್ಲಿ ಸಂಘದಲ್ಲಿ ಇರುವ ಸದಸ್ಯರ ಪೈಕಿ ಸುಮಾರು ಅರ್ಧ ಭಾಗದಷ್ಟು ಸದಸ್ಯರು ಉತ್ತರ ಕರ್ನಾಟಕದವರೇ ಇದ್ದು ರಾಜ್ಯದ ವಿವಿಧ ಭಾಗಗಳಿಂದ ಬೆಂಗಳೂರಿಗೆ ಬಂದು ತಮ್ಮ ಮತವನ್ನು ಚಲಾಯಿಸಬೇಕಾಗಿರುವುದರಿಂದ ಸಂಘದ ಸದಸ್ಯರು ಸರ್ಕಾರ ಹಮ್ಮಿಕೊಂಡಿರುವ ನೆರೆ ಸಂತ್ರಸ್ತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ದಿನನಿತ್ಯ ಪಾಲುಗೊಳ್ಳುವುದರಿಂದ ಇವರುಗಳು ಈ ಕೆಲಸವನ್ನು ಬಿಟ್ಟು ಬೆಂಗಳೂರಿಗೆ ತೆರಳಿ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಪ್ರಜಾಸತ್ತಾತ್ಮಕವಾಗಿ ಚುನಾವಣೆಯಲ್ಲಿ ಮತ ಚಲಾಯಿಸಿ ತಮ್ಮ ಹಕ್ಕನ್ನು ಪ್ರತಿಪಾದಿಸುವಲ್ಲಿ ವಂಚಿತರಾಗುವುದರಿಂದ ಮಾರ್ಚ್ 2010ರಲ್ಲಿ ನಡೆಯಬೇಕಿರುವ ಆಡಳಿತ ಸಮಿತಿಯ ಚುನಾವಣೆಯನ್ನು ಒಂದು ವರ್ಷ ಕಾಲ ಮುಂದೂಡಬೇಕೆಂದು ಕೋರಿದ್ದಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 37 ಸಿಎಲ್ಎಂ 2010, ಬೆಂಗಳೂರು, ದಿನಾಂಕ: 20-2-2010

ಮೇಲಿನ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 39ಎ (4) ಮತ್ತು 121 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಅನ್ನು ಮಾರ್ಪಾಟು ಮಾಡಿ ಹಾಗೂ ಸರ್ಕಾರಿ ಆದೇಶದ ಸಂಖ್ಯೆ : ಸಿಒ 16 ಸಿಎಲ್ಎಂ 2010, ದಿನಾಂಕ : 22-1-2010 ಅನ್ನು ಭಾಗಶಃ ಮಾರ್ಪಡಿಸಿ ಸದರಿ ಸಹಕಾರ ಸಂಘದ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ : 30-9-2010 ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ : ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30-9-2010 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟುಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 690

(ಆರ್.ಎಸ್. ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ದಿನಾಂಕ : 22-3-2010ರೊಳಗೆ ನಡೆಸಬೇಕಾಗಿರುವ ಚುಂಚನೂರ ಕೃಷಿ ಸಹಕಾರ ಬ್ಯಾಂಕ್ ನಿಯಮಿತ, ಚುಂಚನೂರ, ಬೆಳಗಾವಿ ಜಿಲ್ಲೆ ಇದರ ಆಡಳಿತ ಸಮಿತಿ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಓದಲಾಗಿದೆ: 1. ಅಧ್ಯಕ್ಷರು, ಚುಂಚನೂರ ಕೃಷಿ ಸಹಕಾರ ಬ್ಯಾಂಕ್ ನಿಯಮಿತ, ಚುಂಚನೂರ, ಇವರ ಪತ್ರ ಸಂಖ್ಯೆ ಮತ್ತು ದಿನಾಂಕ ಇರುವುದಿಲ್ಲ.

2. ಮಾನ್ಯ ಸಹಕಾರ ಸಚಿವರ ಕಛೇರಿಯ ಪತ್ರದ ಸಂಖ್ಯೆ : ಸಸಕ/219/2010, ದಿನಾಂಕ : 11-2-2010.

ಪ್ರಸ್ತಾವನೆ :

ಚುಂಚನೂರ ಕೃಷಿ ಸಹಕಾರ ಬ್ಯಾಂಕ್ ನಿಯಮಿತ, ಚುಂಚನೂರ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇದರ ಕಾರ್ಯಕ್ಷೇತ್ರದಲ್ಲಿ ಬರುವ ಮೂರು ಗ್ರಾಮಗಳಲ್ಲಿ ಸತತ ಒಂದು ತಿಂಗಳ ಕಾಲ ಸುರಿದ ಅಕಾಲಿಕ ಮಳೆಯಿಂದ ಶೇಕಡ 75 ರಷ್ಟು ಮನೆಗಳು ಕುಸಿದಿದ್ದು ಹಾಗೂ ಬೆಳೆಗಳು ಸಹ ಕೊಚ್ಚಿ ಹೋಗಿರುವುದರಿಂದ ಸದರಿ ಬ್ಯಾಂಕಿನ ಚುನಾವಣೆಯನ್ನು ಆರು ತಿಂಗಳ ಕಾಲ ಮುಂದೂಡುವಂತೆ ಮೇಲೆ ಓದಲಾದ (1)ರ ಮನವಿಯಲ್ಲಿ ಸದರಿ ಬ್ಯಾಂಕಿನ ಅಧ್ಯಕ್ಷರು ಕೋರಿರುತ್ತಾರೆ.

ಸದರಿ ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಓ 39 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ: 18-2-2010

ಮೇಲಿನ ಪರಿಸ್ಥಿತಿಯಲ್ಲಿ ಚುಂಚನೂರ ಕೃಷಿ ಸಹಕಾರ ಬ್ಯಾಂಕ್ ನಿಯಮಿತ, ಚುಂಚನೂರ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇದಕ್ಕೆ ಅನ್ವಯವಾಗುವಂತೆ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ (4) ಮತ್ತು 121 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2) ಅನ್ನು ಮಾರ್ಪಾಟು ಮಾಡಿ ಹಾಗೂ ಸರ್ಕಾರಿ ಆದೇಶದ ಸಂಖ್ಯೆ : ಸಿಓ 16 ಸಿಎಲ್‌ಎಂ 2010, ದಿನಾಂಕ : 22-1-2010 ಅನ್ನು ಭಾಗಶಃ ಮಾರ್ಪಡಿಸಿ ಸದರಿ ಬ್ಯಾಂಕಿನ ಆಡಳಿತ ಸಮಿತಿಗೆ ಚುನಾವಣೆಯನ್ನು ದಿನಾಂಕ : 30-9-2010 ರೊಳಗೆ ನಡೆಸುವಂತೆ ಆದೇಶಿಸುತ್ತದೆ.

ಸೂಚನೆ : ಪ್ರಕರಣ 28ಎ(4), 28ಎ(5), 28ಬಿ(2), 29ಎಫ್(4) ಮತ್ತು 39ಎ(2)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 30-9-2010 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿಯು ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣಗಳ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಈ ಆದೇಶದ ಮೂಲಕ ಮಾರ್ಪಾಡು ಮಾಡಿದಂತೆ ಸದರಿ ಪ್ರಕರಣದ ಹಿಂದಿನ ಕಾರ್ಯಾಚರಣೆ ಮೇಲೆ ಯಾವುದೇ ಪರಿಣಾಮ ಉಂಟುಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 691

(ಆರ್.ಎಸ್. ಹುಚ್ಚಾಚಾರಿ)

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ 8-2-2010 ರಿಂದ 11-2-2010 ರವರೆಗೆ ನಡೆಯಲಿರುವ Efficient and Administration and Management ತರಬೇತಿ ಕೋರ್ಸಿಗೆ ಕೆ.ಎ.ಎಸ್. ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

ಓದಲಾಗಿದೆ : ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರ ಪತ್ರ ಸಂಖ್ಯೆ : TRG/F(NRM)CR-18/2008-09, ದಿನಾಂಕ 18-01-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 18-01-2010 ರ ಪತ್ರದಲ್ಲಿ ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ 8.2.2010 ರಿಂದ 11.2.2010 ರವರೆಗೆ ನಡೆಯಲಿರುವ Efficient Land Administration and Management ತರಬೇತಿ ಕೋರ್ಸಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು/ಸಹಾಯಕ ಆಯುಕ್ತರ ವೃಂದದ ಅಧಿಕಾರಿಗಳನ್ನು ನಿಯೋಜಿಸುವಂತೆ ಮಹಾನಿರ್ದೇಶಕರು ಕೋರಿದ್ದಾರೆ. ಸದರಿ ತರಬೇತಿಯಲ್ಲಿ ಪರಿಣಾಮಕಾರಿಯಾಗಿ ಭೂಮಿ ನಿರ್ವಹಣೆಗೆ ಸಂಬಂಧಿಸಿದ ಲ್ಯಾಂಡ್ ರೆಕಾರ್ಡ್ ನಿರ್ವಹಣೆ, ಭೂಸ್ವಾಧೀನ, ನೋಂದಣಿ, ಭೂಮಾಪನ, ಕಂದಾಯ ನ್ಯಾಯಾಲಯ, ಭೂ ಮಂಜೂರಾತಿ

ಮತ್ತು ಇನ್ನಿತರೆ ಪ್ರಾಮುಖ್ಯವಾದ ವಿಷಯಗಳ ಬಗ್ಗೆ ತರಬೇತಿ ಹಮ್ಮಿಕೊಂಡಿರುವುದರಿಂದ, ಈ ತರಬೇತಿಯು ಅಧಿಕಾರಿಗಳಿಗೆ ಆಡಳಿತ ನಿರ್ವಹಣೆಯಲ್ಲಿ ಉಪಯುಕ್ತವಾಗಿದೆಯೆಂದು ಮಹಾನಿರ್ದೇಶಕರು ತಿಳಿಸಿದ್ದಾರೆ.

ಮಹಾನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮುಂದಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 27 ಆಸೇಇ 2010, ಬೆಂಗಳೂರು, ದಿನಾಂಕ 3ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಈ ಕೆಳಕಂಡ 28 ಕೆ.ಎ.ಎಸ್. ಕಿರಿಯ ಶ್ರೇಣಿ ಅಧಿಕಾರಿಗಳನ್ನು ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ದಿನಾಂಕ 8-2-2010 ರಿಂದ 11-2-2010 ರವರೆಗೆ ನಡೆಯಲಿರುವ Efficient Land Administration and Management ತರಬೇತಿ ಕೋರ್ಸಿಗೆ ನಿಯೋಜಿಸಲಾಗಿದೆ.

ಅಧಿಕಾರಿಗಳು ಸದರಿ ಕೋರ್ಸಿಗೆ ಹಾಜರಾಗುವುದು ಕಡ್ಡಾಯವಾಗಿದ್ದು, ಗೈರುಹಾಜರಾಗುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ತರಬೇತಿ ಪಡೆದ ನಂತರ ಅನುಭವಗಳ ಕಿರುವರದಿಯನ್ನು ಒಂದು ವಾರದೊಳಗಾಗಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ. ಹಾಗೆಯೇ ಸಂಬಂಧಿಸಿದ ನಿಯಂತ್ರಣಾಧಿಕಾರಿಗಳು ಈ ತರಬೇತಿಗೆ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಕೋರಿದೆ.

ಕ್ರ.ಸ.	ಅಧಿಕಾರಿಯ ಹೆಸರು ಕಾರ್ಯನಿರ್ವಹಿಸುತ್ತಿರುವ ಹುದ್ದೆ ಶ್ರೀ/ಶ್ರೀಮತಿ	ಕ್ರ.ಸ.	ಅಧಿಕಾರಿಯ ಹೆಸರು ಕಾರ್ಯನಿರ್ವಹಿಸುತ್ತಿರುವ ಹುದ್ದೆ ಶ್ರೀ/ಶ್ರೀಮತಿ
1.	ಮಲ್ಲೇಶಯ್ಯ ವಿಶೇಷ ಭೂಸ್ವಾಧೀನಾಧಿಕಾರಿ, ಹೇಮಾವತಿ ನಾಲ ವಲಯ, ತುಮಕೂರು 9481401795	9.	ಶಿವಾನಂದ ಕಾಪಸಿ, ಉಪ ವಿಭಾಗಾಧಿಕಾರಿ, ಬಾಗಲಕೋಟೆ ಉಪ ವಿಭಾಗ, 9449839844
2.	ಎಸ್. ಕೃಷ್ಣಮೂರ್ತಿ ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಬೈಕಾಂಪಡಿ, ಮಂಗಳೂರು 944852580	10.	ಆರ್.ಎಸ್. ಪೆದ್ದಪ್ಪಯ್ಯ ಉಪ ವಿಭಾಗಾಧಿಕಾರಿ, ಕೋಲಾರ ಉಪ ವಿಭಾಗ, 9448621776
3.	ಟಿ. ಮಲ್ಲಪ್ಪ ವಿಶೇಷ ಭೂಸ್ವಾಧೀನಾಧಿಕಾರಿ, ಕೊಟ್ಟೂರು-ಹರಿಹರ ರೈಲ್ವೆ ಪ್ರಾಜೆಕ್ಟ್, ಹರಿಹರ	11.	ಡಾ|| ಕೆ. ಹರೀಶ್‌ಕುಮಾರ್ ಉಪ ವಿಭಾಗಾಧಿಕಾರಿ, ಪುತ್ತೂರು ಉಪ ವಿಭಾಗ, 9448549197
4.	ಬಿ.ಸಿ. ಸತೀಶ್, ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪ ವಿಭಾಗ, 9448773875	12.	ಆರ್. ಲತಾ ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಬೆಂಗಳೂರು 9845200485
5.	ಹೆಚ್. ಬಸವರಾಜೇಂದ್ರ ಉಪ ವಿಭಾಗಾಧಿಕಾರಿ, ತಿಪಟೂರು ಉಪ ವಿಭಾಗ, 944838028	13.	ಕಾಶಿನಾಥ್ ಪವಾರ್ ಉಪ ವಿಭಾಗಾಧಿಕಾರಿ, ಬಳ್ಳಾರಿ 9448516130
6.	ಎಂ.ಆರ್. ರವಿ ಉಪ ವಿಭಾಗಾಧಿಕಾರಿ, ಕಾರವಾರ ಉಪ ವಿಭಾಗ, 9449529434	14.	ಜಿ. ಜಗದೀಶ್ ಉಪ ವಿಭಾಗಾಧಿಕಾರಿ, ಸಿರ್ಸಿ ಉಪ ವಿಭಾಗ, 9448673876
7.	ಅಕ್ರಂ ಪಾಷ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ. 9448002232	15.	ಕೆ.ಎಂ. ಜಾನಕಿ, ಉಪ ವಿಭಾಗಾಧಿಕಾರಿ, ದಾವಣಗೆರೆ ಉಪ ವಿಭಾಗ, 9448978477
8.	ಕೆ. ಲೀಲಾವತಿ ಸಹಾಯಕ ಆಯುಕ್ತರು (ಎಲ್.ಎ.ಕ್ಯೂ.) ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ, ಬೆಂಗಳೂರು 9901996293	16.	ಜಹೀರಾ ನಸೀಂ, ಉಪ ವಿಭಾಗಾಧಿಕಾರಿ, ಬೀದರ್ ಉಪ ವಿಭಾಗ, 9243265715

17.	ಎಂ.ಎಲ್. ವೈಶಾಲಿ ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, 9449759069	23.	ಎಂ. ಶಿಲ್ಪ ಆಡಳಿತಾಧಿಕಾರಿ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, (ಲ್ಯಾಂಡ್ ಆರ್ಮಿ ಕಾರ್ಪೋರೇಷನ್), ಬೆಂಗಳೂರು 9945616006
18.	ಕುಮಾರ ಉಪ ವಿಭಾಗಾಧಿಕಾರಿ, ತುಮಕೂರು ಉಪ ವಿಭಾಗ, 9480267013	24.	ಜಿ. ಲಿಂಗಮೂರ್ತಿ ವಿಶೇಷ ಭೂಸ್ವಾಧೀನಾಧಿಕಾರಿ, ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ 9945161474
19.	ಬಿ.ಆರ್. ಪೂರ್ಣಿಮ ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ 9448556953	25.	ಎಸ್. ರಂಗಪ್ಪ ಉಪ ವಿಭಾಗಾಧಿಕಾರಿ, ಮಂಡ್ಯ ಉಪ ವಿಭಾಗ, 9343344488
20.	ಸಂಗಪ್ಪ ಉಪ ವಿಭಾಗಾಧಿಕಾರಿ, ಗುಲ್ಬರ್ಗ ಉಪ ವಿಭಾಗ, 9731930970	26.	ಇಬ್ರಾಹಿಂ ಮೈಗೂರು ವಿಶೇಷ ಭೂಸ್ವಾಧೀನಾಧಿಕಾರಿ, ಜಮಖಂಡಿ ಉಪ ವಿಭಾಗ, 944891976
21.	ಜಿ. ಪ್ರಭು ಉಪ ವಿಭಾಗಾಧಿಕಾರಿ, ಪಾಂಡವಪುರ, 9900145000	27.	ಶಶಿಧರ್ ಕುರೇರ ಉಪ ವಿಭಾಗಾಧಿಕಾರಿ, ತರಿಕೆರೆ ಉಪ ವಿಭಾಗ, 9900546354
22.	ಡಾ॥ ಕೆ.ಎನ್. ಅನುರಾಧ ಉಪ ಆಡಳಿತಾಧಿಕಾರಿ, ಕಾವೇರಿ ನೀರಾವರಿ ಯೋಜನೆ, ಮೈಸೂರು 9448163124	28.	ಪಿ.ಎಸ್.ಕಾಂತಾರಾಜ್ ವಿಶೇಷ ಭೂಸ್ವಾಧೀನಾಧಿಕಾರಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು 9731340766

ಈ ತರಬೇತಿಗೆ ನಿಯೋಜಿತರಾಗಿರುವ ಅಧಿಕಾರಿಗಳು ನಿಯಮಾನುಸಾರ ಭತ್ಯೆ ಪಡೆಯಲು ಅರ್ಹರಾಗುತ್ತಾರೆ. ತರಬೇತಿಯ ಅವಧಿ ಹಾಗೂ ಅವಶ್ಯಕ ಪ್ರಯಾಣದ ಅವಧಿಯನ್ನು ಕರ್ತವ್ಯದ ಮೇಲೆ ಎಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ (ಸೇವೆಗಳು-2).

ಪಿ.ಆರ್.330

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸುಧಾಕರ್ ಎ. ಪಂಡಿತ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತಿನ ತಿದ್ದುಪಡಿ.

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 93(2) ಸೇಲೋಯು 2009, ಬೆಂಗಳೂರು, ದಿನಾಂಕ 1ನೇ ಫೆಬ್ರವರಿ 2010

ಓದಲಾಗಿದೆ :
1. ಅಧಿಸೂಚನೆ ಸಂಖ್ಯೆ ಸಿಆಸುಇ 56 (1) ಸೇಲೋಯು 2008 (ಭಾ) ದಿನಾಂಕ 27-05-2009.
2. ಶ್ರೀ ಸುಧಾಕರ್ ಎ. ಪಂಡಿತ್, ಅಪರ ನಿಬಂಧಕರು (ವಿಚಾರಣೆಗಳು-9) ಕರ್ನಾಟಕ ಲೋಕಾಯುಕ್ತ ಇವರ ದಿನಾಂಕ 29-10-2009ರ ಮನವಿ.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ ಕಲೋ/ಸಿಬ್ಬಂದಿ (1)/111/2006-07, ದಿನಾಂಕ 23-11-2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 27-05-2009 ರ ಆದೇಶದಲ್ಲಿ ಶ್ರೀ ಸುಧಾಕರ್ ಎ. ಪಂಡಿತ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕ (ವಿಚಾರಣೆಗಳು)

ಹುದ್ದೆಗೆ ದಿನಾಂಕ 18-8-2008 ರಿಂದ ಗುತ್ತಿಗೆ ಆಧಾರದ ಮೇಲೆ ಮರುನೇಮಕಾತಿ ಮಾಡಿರುವುದರ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಲಾಗಿದ್ದು 2ನೇ ಷರತ್ತಿನಲ್ಲಿ ಅವರ ಮರುನೇಮಕಾತಿಯ ವೇತನವನ್ನು ರೂ.5,463/-ಕ್ಕೆ ನಿಗದಿಪಡಿಸಲಾಗಿತ್ತು ಮತ್ತು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲವೇತನಕ್ಕೆ ಕಾಲಕಾಲಕ್ಕೆ ಲಭ್ಯವಾಗುವ ಭತ್ಯೆಗಳೊಂದಿಗೆ ಪಡೆಯಲು ನಮೂದಿಸಲಾಗಿತ್ತು. ಆದರೆ, ಈ ಅಧಿಕಾರಿಯು ದಿನಾಂಕ 29-10-2009 ರಂದು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ (ಕ್ರ.ಸಂ.2 ರಲ್ಲಿ ಓದಲಾಗಿದೆ). ಮಹಾಲೇಖಪಾಲರು ನಿಗದಿಪಡಿಸಿರುವ ಪರಿಷ್ಕೃತ ಪಿಂಚಣಿಯ ಪ್ರಕಾರ ತಮ್ಮ ನಿವೃತ್ತಿಯ ಕೊನೆಯ ತಿಂಗಳಲ್ಲಿ ಪಡೆದ ಸಂಬಳವು ರೂ.30,750/- ಆಗಿರುವುದರಿಂದ ಮರುನೇಮಕಾತಿಯ ವೇತನವನ್ನು ಪರಿಷ್ಕರಿಸುವಂತೆ ಕೋರಿರುತ್ತಾರೆ. ನಿಬಂಧಕರು, ಲೋಕಾಯುಕ್ತ ಇವರು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಇದನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣದ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 18-8-2008 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಸುಧಾಕರ್ ಎ. ಪಂಡಿತ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರ ಮರುನೇಮಕಾತಿಯ ವೇತನವನ್ನು ಕರ್ನಾಟಕ ನಾಗರೀಕ ನಿಯಮಾವಳಿಗಳಲ್ಲಿನ ನಿಯಮ 313(ಬಿ) ಪ್ರಕಾರವಾಗಿ ರೂ.13,384/- (ಹದಿಮೂರು ಸಾವಿರದ ಮೂರು ನೂರ ಎಂಬತ್ತಾಲ್ಕು)ಗಳಿಗೆ ನಿಗದಿಪಡಿಸಲಾಗಿದೆ. ಈ ವೇತನದೊಂದಿಗೆ ನಿವೃತ್ತಿ ಸಮಯದಲ್ಲಿ ಪಡೆಯುತ್ತಿದ್ದ ಮೂಲ ವೇತನವಾದ ರೂ.30,750/- ಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಗಳನ್ನು ಪಡೆಯಬಹುದಾಗಿದ್ದು ನಿವೃತ್ತಿ ವೇತನದ ಮೇಲಿನ ತುಟ್ಟಿಭತ್ಯೆಯನ್ನು ಪಡೆಯುವಂತಿಲ್ಲವೆಂಬ ಪರಿಷ್ಕೃತ ಷರತ್ತಿನೊಂದಿಗೆ ಶ್ರೀಯುತರ ಮರುನೇಮಕಾತಿಯು ಈ ಹಿಂದಿನ ಷರತ್ತು ಮತ್ತು ನಿಬಂಧನೆಗಳೊಂದಿಗೆ ಮುಂದುವರೆಯುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 2210 ಸೇ-3/09, ದಿನಾಂಕ 11-12-2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಮಾರ್ಕಂಡೇಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

ಪಿ.ಆರ್.331

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಪಿ. ಪ್ರಕಾಶ್, ನಿವೃತ್ತ ಮುಖ್ಯ ಇಂಜಿನಿಯರ್ ಇವರ ವಿರುದ್ಧ ಇಲಾಖಾ ವಿಚಾರಣೆ-ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 109 ಎಸ್‌ಇಎನ್ 2003, ದಿನಾಂಕ 05-10-2005.
2. ಶ್ರೀ ಸೈಯದ್ ನಿಸಾರ್ ಅಹಮದ್, ನಿವೃತ್ತ ನ್ಯಾಯದೀಶರ ವಿಚಾರಣಾ ವರದಿ ದಿನಾಂಕ : 13-03-2007.
3. ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ ಸಿಆಸುಇ 109 ಎಸ್‌ಇಎನ್ 2003, ದಿನಾಂಕ 25-04-2007.
4. ಶ್ರೀ ಪಿ. ಪ್ರಕಾಶ್, ನಿವೃತ್ತ ಮುಖ್ಯ ಇಂಜಿನಿಯರ್, ಅವರ ಉತ್ತರ ದಿನಾಂಕ 23-08-2007.
5. ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 109 ಎಸ್‌ಇಎನ್ 2003, ದಿನಾಂಕ 13-02-2008.
6. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ ಅವರ ಪತ್ರ ಸಂಖ್ಯೆ ಪಿಎಸ್‌ಸಿ 288 ಸಿಎನ್‌ಎಸ್ 2007, ದಿನಾಂಕ 01-12-2009.

ಪ್ರಸ್ತಾವನೆ :

ಶ್ರೀ ಪಿ. ಪ್ರಕಾಶ್, ನಿವೃತ್ತ ಮುಖ್ಯ ಇಂಜಿನಿಯರ್ ಇವರು ದಿನಾಂಕ 08-05-1997 ರಿಂದ 21-05-1999 ರ ಅವಧಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆ (ಕೆ.ಹೆಚ್.ಎಸ್.ಡಿ.ಪಿ.)

ಧಾರವಾಡ, ಈ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಧಾರವಾಡ ಜಿಲ್ಲಾ ಆಸ್ಪತ್ರೆ, ಹಾವೇರಿ ಸಬ್‌ಡಿವಿಜನ್ ಆಸ್ಪತ್ರೆ ಹಾಗೂ ಹಳಿಯಾಳ ತಾಲ್ಲೂಕ್ ಆಸ್ಪತ್ರೆಗಳ ನವೀಕರಣ ಮತ್ತು ವಿಸ್ತರಣೆ ಯೋಜನೆಯನ್ನು ಕಾರ್ಯಗತಗೊಳಿಸುವ ಸಮಯದಲ್ಲಿ ಎಲ್ಲಾ ನಿಬಂಧನೆಗಳನ್ನು ಉಲ್ಲಂಘಿಸಿ ದುರುದ್ದೇಶ ಪೂರ್ವಕವಾಗಿ ಗುತ್ತಿಗೆದಾರರಿಗೆ ಸರ್ಕಾರದ ಹಣ ರೂ.1,78,31,672/-ಗಳನ್ನು ಬಿಡುಗಡೆ ಮಾಡುವ ಮೂಲಕ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿದ ಆರೋಪಕ್ಕಾಗಿ ಮೇಲೆ (1) ರಲ್ಲಿ ಓದಲಾದ ದಿನಾಂಕ 05-10-2005ರ ಸರ್ಕಾರಿ ಆದೇಶದಲ್ಲಿ ಇಲಾಖಾ ವಿಚಾರಣೆಯನ್ನು ಆದೇಶಿಸಿ, ಶ್ರೀ ಸೈಯದ್ ನಿಸಾರ್ ಅಹಮದ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಯಿತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ 13-03-2007ರ ವಿಚಾರಣಾ ವರದಿ ಸಲ್ಲಿಸಿ ಆರೋಪ ಕುರಿತಂತೆ ಈ ಕೆಳಕಂಡ ನಿರ್ಣಯ ನೀಡಿದರು.

ವಿಚಾರಣೆ ಸಮಯದಲ್ಲಿ ಹಾಜರುಪಡಿಸಲ್ಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ ಧಾರವಾಡ ಜಿಲ್ಲಾ ಆಸ್ಪತ್ರೆಯ ನವೀಕರಣ ಮತ್ತು ವಿಸ್ತರಣೆಗಾಗಿ ದಿನಾಂಕ 23-03-1999 ರಂದು ಬೆಂಗಳೂರಿನಲ್ಲಿ ಗುತ್ತಿಗೆದಾರರಿಗೆ ಪ್ರಧಾನ ಇಂಜಿನಿಯರ್ ಅವರಿಂದ ವರ್ಕ್ ಆರ್ಡರ್ ನೀಡಲ್ಪಟ್ಟಿದೆ. ಗುತ್ತಿಗೆದಾರರು ಧಾರವಾಡದಲ್ಲಿಯ ಆರೋಪಿಗೆ ದಿನಾಂಕ 24-03-1999 ರಂದು ರೂ.99.71 ಲಕ್ಷಗಳಿಗೆ ಆರ್.ಎ. ಬಿಲ್ ಸಿದ್ದಪಡಿಸಿ ಸಲ್ಲಿಸಿದ್ದಾರೆ. ಸದರಿ ಮೊತ್ತವನ್ನು ಆರೋಪಿಯು ದಿನಾಂಕ 25-03-1999 ರಂದು ಪಾವತಿ ಮಾಡಿದ್ದಾರೆ. ವರ್ಕ್ ಆರ್ಡರ್ ಪಡೆದ ಕೇವಲ 3 ದಿನಗಳಲ್ಲಿ ರೂ.99.71 ಲಕ್ಷಗಳ ಮೊತ್ತದ ನಿರ್ಮಾಣ ಸಾಮಗ್ರಿಗಳನ್ನು ಗುತ್ತಿಗೆದಾರರು ಸಂಗ್ರಹಿಸಿದ್ದರು ಎಂಬ ವಾದವನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಆರೋಪಿ ತನ್ನ ವಾದದಲ್ಲಿ ಗುತ್ತಿಗೆದಾರರಿಗೆ ಕಾಮಗಾರಿಯು ಬಗ್ಗೆ ಆದಾಗಲೇ ತಿಳಿದಿತ್ತು. ಹಾಗೂ ಅವರು ಸಾಮಗ್ರಿಗಳನ್ನು ಮುಂಚಿತವಾಗಿಯೇ ಸಂಗ್ರಹಿಸಲು ಪ್ರಾರಂಭಿಸಿದ್ದರೆಂದು ತಿಳಿಸುತ್ತಾರೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಹಾವೇರಿ ಉಪ ವಿಭಾಗೀಯ ಆಸ್ಪತ್ರೆಯ ನವೀಕರಣ ಹಾಗೂ ವಿಸ್ತರಣೆ ಪ್ರಕರಣದಲ್ಲೂ ಸಹ ವರ್ಕ್ ಆರ್ಡರ್ ದಿನಾಂಕ 16-03-1998 ರಂದು ನೀಡಲ್ಪಟ್ಟಿದೆ. ಆ ದಿನವೇ ಆರ್.ಎ. ಬಿಲ್ ಸಿದ್ದಪಡಿಸಿ ಸಲ್ಲಿಸಲಾಗಿದೆ. ಹಣವನ್ನು ದಿನಾಂಕ 17-03-1999 ರಂದು ಪಾವತಿ ಮಾಡಲಾಗಿದೆ. ಹಣವನ್ನು ತ್ವರಾ ಮಾಡಿ ಪಾವತಿ ಮಾಡಲು ತೋರಿದ ಆತುರವನ್ನು ಗಮನಿಸಿದಲ್ಲಿ ಸರ್ಕಾರಿ ಹಣವನ್ನು ದುರ್ಬಳಕೆ ಮಾಡುವ ಉದ್ದೇಶವನ್ನು ಆರೋಪಿಯು ಹೊಂದಿದ್ದು, ನಿಚ್ಚಳವಾಗುತ್ತದೆ. ಹಳಿಯಾಳ ತಾಲ್ಲೂಕ್ ಆಸ್ಪತ್ರೆಯ ನವೀಕರಣ ಹಾಗೂ ವಿಸ್ತರಣೆಯ ಪ್ರಸರಣದಲ್ಲಿ ದಿನಾಂಕ 23-03-1999 ರಂದು ವರ್ಕ್ ಆರ್ಡರ್ ನೀಡಲಾಗಿದೆ. ಗುತ್ತಿಗೆದಾರರು ರೂ.25.00 ಲಕ್ಷಗಳ ಮೊದಲ ಆರ್.ಎ. ಬಿಲ್ ಸಿದ್ದಪಡಿಸಿ ದಿನಾಂಕ 25-03-1999 ರಂದು ಸಲ್ಲಿಸಿದ್ದಾರೆ. ಆರೋಪಿಯು ದಿನಾಂಕ 27-03-1999 ರಂದು ಹಣವನ್ನು ಪಾವತಿ ಮಾಡಿದ್ದಾರೆ. ಕೇವಲ 4 ದಿನಗಳಲ್ಲಿ ಇಷ್ಟು ಮೊತ್ತದ ಸಾಮಗ್ರಿಗಳನ್ನು ಗುತ್ತಿಗೆದಾರರು ಸಂಗ್ರಹಿಸಿದ್ದರು ಎಂಬ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲದೆ ಆರೋಪಿಯೇ ಈ ಪ್ರಕರಣದಲ್ಲಿ ಅಳತೆ ಪುಸ್ತಕ ಸಂಖ್ಯೆ ಎಂ.ಬಿ. 7602ರ ಪುಟ 2 ರಿಂದ 8ರವರೆಗೆ ಅಳತೆಯನ್ನು ದಾಖಲಿಸಿದ್ದಾರೆ. ಕೆ.ಪಿ.ಡಬ್ಲ್ಯೂ.ಡಿ ಕೋಡ್‌ನ ಸಂಪುಟ 2ರ ಅಪೆಂಡಿಕ್ಸ್ 3 ರಲ್ಲಿ ನಿಗದಿಪಡಿಸಿರುವಂತೆ ಅಳತೆ ಪುಸ್ತಕಗಳಲ್ಲಿ ಸಹಾಯಕ ಇಂಜಿನಿಯರ್ ಮಟ್ಟದ ಅಧಿಕಾರಿಯು ದಾಖಲಿಸಬೇಕು. ಏನಾದರೂ ತಿದ್ದುಪಡಿ ಇದ್ದಲ್ಲಿ ಅದನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅಥವಾ ಕಾರ್ಯಪಾಲಕ ಇಂಜಿನಿಯರ್ ಅವರು ದೃಢೀಕರಿಸಬೇಕು. ಸಹಾಯಕ ಇಂಜಿನಿಯರ್ ಇದ್ದರೂ ಸಹ ಕಾರ್ಯಪಾಲಕ ಇಂಜಿನಿಯರ್ ಆಗಿದ್ದ ಆರೋಪಿಯೇ ನಮೂದುಗಳನ್ನು ಮಾಡಿದ್ದಾರೆ. ಹಾವೇರಿ ಆಸ್ಪತ್ರೆ ಪ್ರಕರಣ ಕುರಿತಂತೆ ಮಹಾಲೇಖಪಾಲರ ಕಛೇರಿಯಿಂದ ತಪಾಸಣೆ ನಡೆಸಲ್ಪಟ್ಟಿದ್ದು, ವಿವೇಚನಾ ರಹಿತವಾಗಿ ಸೆಕ್ಯೂರ್ಡ್ ಅಡ್ವಾನ್ಸ್ ಬಿಡುಗಡೆ ಮಾಡಿರುವುದನ್ನು ಪತ್ತೆ ಹಚ್ಚಲಾಗಿದೆ. ಇನ್‌ವಾಯ್ಸ್ ಬಿಲ್ ಉಪ ವಿಭಾಗೀಯ ಕಛೇರಿಗಳಿಂದ ಕೋರಿಕೆ ಗುತ್ತಿಗೆದಾರರಿಂದ ಪಾವತಿಗೆ ಕೋರಿಗೆ ಇದಾವುದೂ ಇಲ್ಲದೆ ಸೆಕ್ಯೂರ್ಡ್ ಅಡ್ವಾನ್ಸ್ ಬಿಡುಗಡೆ ಮಾಡಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿದ 3 ಆರೋಪಗಳು ಸಾಬೀತಾಗಿವೆ.

ವಿಚಾರಣಾ ವರದಿಯ ಪ್ರತಿಯೊಡನೆ, ಮೇಲೆ (3)ರಲ್ಲಿ ಓದಲಾದ ದಿನಾಂಕ 25-04-2007ರ 2ನೇ ಕಾರಣ ಕೇಳುವ ನೋಟೀಸನ್ನು ಆರೋಪಿತ ಅಧಿಕಾರಿಯವರಿಗೆ ಜಾರಿ ಮಾಡಿ ವಿಚಾರಣಾ ವರದಿ ಕುರಿತು ಅಹವಾಲು ಇದ್ದಲ್ಲಿ ಅದನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಆರೋಪಿತ ಅಧಿಕಾರಿಯವರು ಮೇಲೆ (4) ರಲ್ಲಿ ಓದಲಾದ ದಿನಾಂಕ 23-08-2007ರ ಹೇಳಿಕೆಯನ್ನು ಸಲ್ಲಿಸಿ, ಮುಖ್ಯ ಇಂಜಿನಿಯರ್ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆ (ಕೆ.ಹೆಚ್.ಎಸ್.ಡಿ.ಪಿ.) ಇವರ ನಿರ್ದೇಶನ, ವಿಶ್ವ ಬ್ಯಾಂಕ್ ಯೋಜನೆಯ ಟೆಂಡರ್ ನಿಯಮಗಳ ಅನುಸಾರ ಕಾರ್ಯನಿರ್ವಹಿಸಿದ್ದೇನೆ. ಸದರಿ ಕಾಮಗಾರಿಗಳು ವಿಶ್ವ ಬ್ಯಾಂಕ್ ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗಿದ್ದು ಅವುಗಳಿಗೆ ಕೆ.ಪಿ.ಡಬ್ಲ್ಯೂ.ಡಿ. ನಿಯಮಗಳು ಅನ್ವಯಿಸುವುದಿಲ್ಲ. ನಾವು ಬಿಡುಗಡೆ ಮಾಡಿದ ಎಲ್ಲಾ ಮೊತ್ತವು ಸಮರ್ಥವಾಗಿ ಉಪಯೋಗಿಸಲ್ಪಟ್ಟಿದ್ದು. ಉನ್ನತ ಸಮಿತಿಯಾದ ಸ್ಟೀರಿಂಗ್ ಕಮಿಟಿಯು ಇವುಗಳಿಗೆ ಅನುಮೋದನೆ ನೀಡಿದೆ. ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ.

ಕಾಮಗಾರಿಗಳಿಗೆ ಹೆಚ್ಚಾಗಿ ಖರ್ಚಾಗಿರುವ ಹಣವನ್ನು ಸರ್ಕಾರವು ಪರಿಷ್ಕೃತ ಅಂದಾಜಿನ ರೂಪದಲ್ಲಿ ಅನುಮೋದನೆ ನೀಡಿರುವುದರಿಂದ ನನ್ನಿಂದ ಯಾವುದೇ ಅಕ್ರಮ ನಡೆಸಲ್ಪಟ್ಟಿರುವುದಿಲ್ಲ. ವಿಚಾರಣಾಧಿಕಾರಿಗಳು ಕೇವಲ ಊಹಾಪೋಹಗಳ ಆಧಾರದ ಮೇಲೆ ವರದಿ ಸಲ್ಲಿಸಿ ನೀಡಿರುವ ನಿರ್ಣಯ ಸರಿಯಾದುದಲ್ಲ. ಈ ಪ್ರಕರಣದಲ್ಲಿ ಗಮನಿಸಲ್ಪಟ್ಟ ಲೋಪಗಳಿಗೆ ನಾನೊಬ್ಬನೇ ಕಾರಣವಾಗುವುದಿಲ್ಲ. ವಿಚಾರಣೆ ಸಮಯದಲ್ಲಿ ಯಾವುದೇ ಸಾಕ್ಷಿಯೂ ಸಹ ನನ್ನ ವಿರುದ್ಧ ಸಾಕ್ಷ್ಯ ನುಡಿದಿರುವುದಿಲ್ಲ. ಈ ಬಗ್ಗೆ ಈಗಾಗಲೇ ಡಿಸೆಂಬರ್ 1999ರಲ್ಲಿ ಪ್ರಶ್ನಿತ ಕಾಮಗಾರಿಗಳ ಬಗ್ಗೆ ಯೋಜನಾ ನಿರ್ದೇಶಕರಿಂದ ನಿಯೋಜಿಸಲ್ಪಟ್ಟ ಮುಖ್ಯ ಇಂಜಿನಿಯರ್ ಅವರು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಸಲ್ಲಿಸಿದ ವರದಿ ಮೇರೆಗೆ ತನ್ನನ್ನು ದೋಷಮುಕ್ತಗೊಳಿಸಲಾಗಿದೆ. ಆದ್ದರಿಂದ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳದೇ ತನ್ನನ್ನು ಆರೋಪದಿಂದ ಮುಕ್ತರನ್ನಾಗಿಸುವಂತೆ ಕೋರಿದ್ದಾರೆ.

ಆರೋಪಿಯ ಹೇಳಿಕೆಯನ್ನು ಸಂಬಂಧಪಟ್ಟ ದಾಖಲೆಗಳೊಡನೆ ಪರಿಶೀಲಿಸಲಾಗಿ, ರಾಜ್ಯ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯ ಯೋಜನಾ ನಿರ್ದೇಶಕರು 2003 ರಲ್ಲಿ ಸಲ್ಲಿಸಿದ ವರದಿ ಮೇರೆಗೆ ಈ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಯಿತು. ಆದ್ದರಿಂದ ಅದರ ಹಿಂದಿನ ಯಾವುದೇ ಬೆಳವಣಿಗೆಗಳು ಆರೋಪಿಯ ಸಹಾಯಕ್ಕೆ ಬರುವುದಿಲ್ಲ. ವಿಚಾರಣೆಯಲ್ಲಿ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನ ಕಾಮಗಾರಿಗಳಿಗೂ ಸಹ ಲೋಕೋಪಯೋಗಿ ಇಲಾಖೆ ಸಂಹಿತೆ ಅನ್ವಯಿಸುತ್ತದೆ. ಅದರಲ್ಲೂ ವರ್ಕ್ ಆರ್ಡರ್ ನೀಡಲ್ಪಟ್ಟ 3-4 ದಿನಗಳಲ್ಲಿ ಗುತ್ತಿಗೆದಾರರು ಕೋಟ್ಯಾಂತರ ರೂ.ಗಳ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸಿದ್ದರು ಎಂಬ ಆರೋಪಿಯ ನಿಲುವನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಶ್ರೀ ಪಿ. ಪ್ರಕಾಶ್, ನಿವೃತ್ತ ಮುಖ್ಯ ಇಂಜಿನಿಯರ್ ಅವರ ವಾದವನ್ನು ಒಪ್ಪದೇ ಆರೋಪಗಳು ಸಾಬೀತಾಗಿವೆ ಹಾಗೂ ಆರೋಪಿಯ ದುರ್ನಡತೆಯಿಂದ ಸರ್ಕಾರಕ್ಕೆ ರೂ.1,77,71,000/- ನಷ್ಟ ಉಂಟಾಗಿದೆ ಎಂಬ ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿಕೊಂಡ ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯೊಡನೆ ದಂಡನೆ ವಿಧಿಸಲು ನಿರ್ಣಯಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 109 ಎಸ್‌ಇಎನ್ 2003, ಬೆಂಗಳೂರು, ದಿನಾಂಕ 2ನೇ ಫೆಬ್ರವರಿ 2010

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214ನೇ ನಿಯಮದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಪಿ. ಪ್ರಕಾಶ್. ನಿವೃತ್ತ ಮುಖ್ಯ ಇಂಜಿನಿಯರ್ ಅವರ ಮಾಸಿಕ ವಿಶ್ರಾಂತಿ ವೇತನದ ಶೇಕಡಾ 33ರಷ್ಟು ಮೊತ್ತವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ನಿರಂತರವಾಗಿ ಕಡಿತಗೊಳಿಸಬೇಕೆಂದು ಹಾಗೂ ಅವರ ನಿವೃತ್ತಿ ಸೌಲಭ್ಯಗಳಾದ ಡಿ.ಸಿ.ಆರ್.ಜಿ., ವಿಶ್ರಾಂತಿ ವೇತನದ ಪರಿವರ್ತಿತ ಮೊತ್ತ ಮತ್ತು ಗಳಿಕೆ ರಜೆ ನಗದೀಕರಣ ಸೌಲಭ್ಯಗಳನ್ನು ಸರ್ಕಾರಕ್ಕೆ ಉಂಟಾದ ನಷ್ಟಕ್ಕಾಗಿ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆದೇಶಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-3).

ಪಿ.ಆರ್.332

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ವಿವಿಧ ವರ್ಗಗಳ ಮಾರಾಟಗಾರರ ನಮೂದಿತ ಪಟ್ಟಿಯ (Empanelment) ಕುರಿತು.

ಓದಲಾಗಿದೆ :-

1. ದಿನಾಂಕ:29-9-2009ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ನಡವಳಿ.
2. ದಿನಾಂಕ 3.10.2009ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 30 ವಿಮಾಆ 2008.
3. ದಿನಾಂಕ 16.10.2009ರ ಟೆಂಡರ್ ಪ್ರಕಟಣೆ ಸಂಖ್ಯೆ ಸಿಆಸುಇ 30 ವಿಮಾಆ 2008.
4. ದಿನಾಂಕ 01.01.2010ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪಸಮಿತಿಯ ನಡವಳಿ.
5. ದಿನಾಂಕ 27.01.2010ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ನಡವಳಿ

ಪ್ರಸ್ತಾವನೆ :

ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್, (ಪ್ರಭಾರ)
ಮಂಡ್ಯ ಜಿಲ್ಲೆ, ಮಂಡ್ಯ.

ಪಿರ್ಯಾದುದಾರರು	**ಆರೋಪಿ**
ಆರಕ್ಷಕ ನಿರೀಕ್ಷಕರು ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ ವಿಶೇಷ ಪೋಲೀಸ್ ಠಾಣೆ, ಮಂಡ್ಯ.	ಕೆ.ಎಸ್.ಚೇತನ್ ಬಿನ್ ಕುಮಾರ, 21 ವರ್ಷ, ಒಕ್ಕಲಿಗರು, ಕೆ.ಶೆಟ್ಟಿಹಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:31-05-2009 ರಂದು ಸಾಯಂಕಾಲ 04-30 ರ ಸಮಯದಲ್ಲಿ ಮೈಸೂರು ಹೆದ್ದಾರಿಯ ತೂಬಿನಕೆರೆ ಬಸ್ ನಿಲ್ದಾಣದ ಬಳಿ ಅಕ್ರಮವಾಗಿ 25.380 ಲೀ ಮದ್ಯವನ್ನು ಒಂದು ಹಳೆಯ ಸೈಕಲ್‌ನಲ್ಲಿ ಹೊಂದಿ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆಮಾಡಿದ ಪಿರ್ಯಾದುದಾರರು, ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 32,34 ಮತ್ತು 43(ಎ)ರ ರೀತ್ಯಾ ಅಪರಾಧವಾದ್ದರಿಂದ ಮೇಲ್ಕಂಡ ಮದ್ಯ ಮತ್ತು ಸೈಕಲ್‌ನ್ನು ಪಂಚನಾಮೆ ಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಅಪರಾಧ ಸಂಖ್ಯೆ:01/2009 ರಂತೆ ಮೊಕದ್ದಮೆಯನ್ನು ದಾಖಲು ಮಾಡಿ ವಶಪಡಿಸಿಕೊಂಡಿರುವ ವಸ್ತುಗಳನ್ನು ಅಬಕಾರಿ ನಿರೀಕ್ಷಕರು, ಮಂಡ್ಯ ವಲಯ, ಮಂಡ್ಯ ಇವರಿಗೆ ದಿನಾಂಕ:16-06-2009 ರಂದು ಹಸ್ತಾಂತರಿಸಿರುತ್ತಾರ.

ಪ್ರಕರಣದ ತನಿಖೆಯನ್ನು ಮುಂದುವರೆಸಿದ ತನಿಖಾಧಿಕಾರಿಗಳು ಜಪ್ತುಪಡಿಸಿದ ಮದ್ಯ ಹಾಗೂ ಸೈಕಲ್‌ನ್ನು ತಮ್ಮದೆಂದು ಯಾರು ಹಕ್ಕು ಚಲಾಯಿಸಿರುವುದಿಲ್ಲವಾದ್ದರಿಂದ ಮೇಲ್ಕಂಡ ಮದ್ಯ ಮತ್ತು ಸೈಕಲ್‌ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿನಾಂಕ:10-03-2010 ರ ಪತ್ರದ ಮೂಲಕ ಕೋರಿರುತ್ತಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರಕರಣದಲ್ಲಿ ಜಪ್ತುಪಡಿಸಿರುವ ಸೈಕಲ್‌ನಲ್ಲಿ ದಿನಾಂಕ:31-05-2009 ರಂದು ಅಕ್ರಮವಾಗಿ ಮದ್ಯಸಾರಯುಕ್ತ ದ್ರವವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಜಪ್ತುಪಡಿಸಿರುವ ಮದ್ಯ ಮತ್ತು ಸೈಕಲ್‌ನ್ನು ತನ್ನದೆಂದು ಕೋರಿ ಈವರೆವಿಗೂ ಪ್ರಾಧಿಕಾರದ ಮುಂದೆ ಯಾರು ಹಾಜರಾಗದೇ ಇರುವ ಹಿನ್ನೆಲೆಯಲ್ಲಿ ಸೈಕಲ್‌ನ್ನು ಚಾಲನೆಯಿಲ್ಲದೇ ಹೆಚ್ಚು ಸಮಯ ಇಟ್ಟುಕೊಂಡಲ್ಲಿ ಹವಾಮಾನದ ವೈಪರೀತ್ಯಕ್ಕೆ ಹಾಳಾಗುವ ಮತ್ತು ಬಿಡಿ ಭಾಗಗಳು ತುಕ್ಕು ಹಿಡಿಯುವ ಸಂಭವವಿರುವುದರಿಂದ, ಸರ್ಕಾರದ ಆದಾಯದ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಳ್ಳಬಹುದಾದ ಅಧಿಕಾರ ಪ್ರಾಧಿಕಾರಕ್ಕೆ ದತ್ತವಾಗಿರುವುದರಿಂದ ಮೇಲ್ಕಂಡ ಮದ್ಯ ಮತ್ತು ಸೈಕಲ್‌ನ್ನು ವಾರಸು ದಾರರಿಲ್ಲದ ಸ್ವತ್ತು ಎಂದು ಪರಿಗಣಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟು ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/387/2009-10, ದಿನಾಂಕ:18ನೇ ಮಾರ್ಚ್, 2010

ಡಾ: ವೈ.ಮಂಜುನಾಥ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ (ಪ್ರಭಾರ) ಮಂಡ್ಯ ಜಿಲ್ಲೆ, ಮಂಡ್ಯ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 43 (ಸಿ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ಘಟಕ, ವಿಶೇಷ ಪೋಲೀಸ್ ಠಾಣೆ, ಮಂಡ್ಯ ಜಿಲ್ಲೆ ಇವರ ಅಪರಾಧ ಸಂಖ್ಯೆ:01/2009, ದಿನಾಂಕ:31-05-2009 ರ ಪ್ರಕರಣದಲ್ಲಿ ಜಪ್ತುಪಡಿಸಿರುವ 25.380 ಲೀ ಮದ್ಯ (ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿ ಹೊರತು ಪಡಿಸಿ). ಒಂದು ಹಳೆಯ ಸೈಕಲ್ ಮತ್ತು ಇತರೇ ವಸ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ಇಂದು ಅಂದರೆ 2010 ನೇ ಇಸವಿ ಮಾರ್ಚ್ ತಿಂಗಳ 18 ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತ ಲೇಖಿನ ನೀಡಿ, ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿದ ಪ್ರತಿಯಲ್ಲಿನ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿ ಹಾಗೂ
ಪಿ.ಆರ್.420 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಮಂಡ್ಯ ಜಿಲ್ಲೆ, ಮಂಡ್ಯ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆ ವಿಭಾಗ, ಇವರ ನ್ಯಾಯಾಲಯ, ವಿರಾಜಪೇಟೆ

ಸಂಖ್ಯೆ:ಎಲ್ಎನ್‌ಡಿ ಕೇಸ್ ನಂ/101/2006-07, ದಿನಾಂಕ:18ನೇ ಫೆಬ್ರವರಿ, 2010

ಉಪಸ್ಥಿತರು ಹೆಚ್.ಸಿ. ಕಾಂತರಾಜುಭಾ.ಅ.ಸೇ.
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ವಿರಾಜಪೇಟೆ ವಿಭಾಗ, ವಿರಾಜಪೇಟೆ.

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಸಿದ್ದಾಪುರ ಪೊಲೀಸ್ ಠಾಣೆ, ಸಿದ್ದಾಪುರ.

ಅರ್ಜಿದಾರರು : ಪಿ.ಎ. ಬಾವಾ ತಂದೆ:ಅಬ್ಬೂ
ನೆಲ್ಲಿಹುದಿಕೇರಿ ಗ್ರಾಮ ಮತ್ತು ಅಂಚೆ, ಸಿದ್ದಾಪುರ.

ಮೊಕದ್ದಮೆ : ಸಿದ್ದಾಪುರ ಪೊಲೀಸ್ ಠಾಣೆ, ಮೊ.ಸಂ. 101/06-07
ದಿನಾಂಕ 18-12-2006

ಪ್ರಸ್ತಾವನೆ:

ದಿನಾಂಕ: 18-12-2006 ರಂದು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಠಾಣಾ ಉಸ್ತುವಾರಿಯಲ್ಲಿದ್ದ ಸಹಾಯಕ ಉಪ ನಿರೀಕ್ಷಕರಾದ ಶ್ರೀ ಎ.ಎಂ. ದೇವಯ್ಯರವರಿಗೆ ಮಧ್ಯಾಹ್ನ 12.45 ಗಂಟೆಗೆ ಮಡಿಕೇರಿ ಉಪ ವಿಭಾಗದ ಡಿವೈ ಎಸ್ಪಿರವರು ನಿಸಂತ್ತು ಕರೆಯಲ್ಲಿ ಸಿದ್ದಾಪುರದ ಹಳೇ ಸಿದ್ದಾಪುರದಿಂದ ಒಂದು ಬಿಳಿ ಬಣ್ಣದ ಪಿಕ್‌ಅಪ್ ಜೀಪು ಪ್ಲಾಸ್ಟಿಕ್ ಮುಚ್ಚಿಕೊಂಡು ಹೋಗುತ್ತಿದ್ದು ಸದರಿ ವಾಹನವನ್ನು ಪರಿಶೀಲಿಸಿ ತಿಳಿಸಿದ ಮೇರೆ ಸದ್ರಿ ಠಾಣಾ ಹೆಡ್ ಕಾನ್‌ಸ್ಟೇಬಲ್ ಹಾಗೂ ಪೇದೆಯೊಬ್ಬರನ್ನು ಧಾವಿಸಿ ಹೋಗಿ ವಾಹನವನ್ನು ಪರಿಶೀಲಿಸಲು ತಿಳಿಸಲಾಗಿ ಅವರುಗಳು ತಮ್ಮ ಮೋಟಾರ್ ಸೈಕಲ್‌ನಲ್ಲಿ ಹೋಗಿ ಪುಲಿಯೇರಿ ಹತ್ತಿರ ಹೋಗುತ್ತಿದ್ದ ಜೀಪನ್ನು ನಿಲ್ಲಿಸಲು ಸೂಚನೆ ನೀಡಿದಾಗ ಮಾನವವಿಯ ಪ್ರಾಣಕ್ಕೆ ದಕ್ಕೆಯಾಗುವಂತೆ ಜೀಪನ್ನು ಅದರ ಚಾಲಕ ಓಡಿಸಿಕೊಂಡು ಕನ್ನಿಕೋಡು ಕಾಫಿ ತೋಟದ ಒಳಗೆ ಹೋಗಿ ಜೀಪನ್ನು ನಿಲ್ಲಿಸಿರುವುದಾಗಿ ಹಾಗೂ ಜೀಪಿನಲ್ಲಿದ್ದ ಭಾವಪತ್ತಾಕ್ ರವರು ಜೀಪಿನಿಂದ ಇಳಿದು ಕಾಫಿ ತೋಟದ ಒಳಗೆ ಓಡಿ ಹೋದರೆಂದು ಕಳುಹಿಸಿದ್ದ ಸಿಬ್ಬಂದಿಯವರು ಮೊಬೈಲ್ ಫೋನ್ ಮೂಲಕ 1-00 ಗಂಟೆಗೆ ತಿಳಿಸಿದ ಮೇರೆ ಸಹಾಯಕ ನಿರೀಕ್ಷಕರು ಇಲಾಖಾ ಜೀಪು ಕೆಎ 12 ಜಿ-233ರಲ್ಲಿ ಚಾಲಕ ಹಾಗೂ ಸಿಬ್ಬಂದಿಗಳೊಡನೆ ಘಟನೆಯ ಸ್ಥಳಕ್ಕೆ ಪಂಚರೊಂದಿಗೆ ಬಂದು ಸ್ಥಳ ಕನ್ನಿಕೋಡ್ ಕಾಫಿ, ತೋಟದ ಒಳಗಡೆ ಬಿಳಿಬಣ್ಣದ ಪಿಕ್‌ಅಪ್ ಜೀಪು ನಿಂತಿದ್ದು ಪಂಚರ ಸಮಕ್ಷಮ ಸದರಿ ಜೀಪನ್ನು ಅಜಮಾಹಿಸಲಾಗಿ ಜೀಪು ಬಿಳಿ ಬಣ್ಣದಿಂದ ಕೂಡಿದ್ದು, ನೊಂದಾಣಿ ಸಂಖ್ಯೆ:ಕೆ-18-5733 ಆಗಿದ್ದು ಮಹೇಂದ್ರ ಪಿಕ್‌ಅಪ್ ಜೀಪು ಆಗಿರುತ್ತದೆ. ಹಿಂಬಾಗದ ಬಾಡಿಗೆ ಹೊದಿಸಿದ್ದ ಬಿಳಿ ಹಾಗೂ ನೀಲಿ ಬಣ್ಣದ ಹಳೇಯ ಟಾರ್ಪಾಲ್‌ನ್ನು ತೆಗೆದು ನೋಡಲಾಗಿ ಅದರೊಳಗೆ ತೊಗಟೆ ತೆಗೆದ 6 ಬೀಟೆ ಮರದ ತುಂಡುಗಳಿದ್ದು, ವಾಹನ ಮತ್ತು ಸ್ವತ್ತನ್ನು ವಶಕ್ಕೆ ತೆಗೆದುಕೊಂಡು ಠಾಣಾ ಮೊಕದಮ್ಮೆ ಸಂಖ್ಯೆ 101/2006 ನ್ನು 1969 ರ ಕರ್ನಾಟಕ ಅರಣ್ಯ ಕಾನೂನು 144,104,165 ಹಾಗೂ 1963 ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ 71 ಎ ಹಾಗೂ ಐ.ಎಂ.ವಿ. ಎಕ್ಟ್ 183 ರನ್ವಯ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಪ್ರಕರಣದ ಮುಂದಿನ ತನಿಖೆಗೆ ಪ್ರಕರಣವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ವಾಹನ ಮತ್ತು ಬೀಟೆ ವಿವಿಧ ಅಳತೆಯ ಮರದ 6 ನಾಟಗಳನ್ನು ಕರ್ನಾಟಕ 71(ಎ) ಅಡಿಯಲ್ಲಿ ವ್ಯವಹರಿಸಬೇಕಾಗಿರುವುದರಿಂದ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆರವರ ಮುಂದೆ ಹಾಜರುಪಡಿಸಿರುತ್ತಾರೆ. ದಿನಾಂಕ:13-6-07 ರಂದು ಸ್ವತ್ತು ಬೀಟೆ ನಾಟ 6 ಸಂಖ್ಯೆಯನ್ನು ಹಾಗೂ ವಾಹನ ಸಂಖ್ಯೆ:ಕಎ18-5733 ನ್ನು ವಲಯ ಅರಣ್ಯ ಅಧಿಕಾರಿ ವಿರಾಜಪೇಟೆರವರ ಸುಪರ್ಧಿಗೆ ಸುರಕ್ಷಿತವಾಗಿ ಇಡಲು ಆದೇಶಿಸಲಾಗಿದೆ.

ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ (ಜೂ.ವಿ) ವಿರಾಜಪೇಟೆ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ 101/06 ರಲ್ಲಿ ವಾಹನವನ್ನು ಮಧ್ಯಂತರ ವಶಕ್ಕೆ ನೀಡುವ ಬಗ್ಗೆ ನ್ಯಾಯಾಲಯಕ್ಕೆ 13-8-2007 ರ ಒಳಗಾಗಿ ವರದಿ ಸಲ್ಲಿಸುವಂತೆ

ಆದೇಶವಾಗಿರುತ್ತದೆ. ಈ ಬಗ್ಗೆ ವಾಹನವನ್ನು ಮಧ್ಯಂತರ ವಶಕ್ಕೆ ನೀಡುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ:16-8-2007 ರಂದು ವರದಿ ಸಲ್ಲಿಸಲಾಯಿತು.

ನಂತರ ಮೊಕದ್ದಮೆಯ ಬಗ್ಗೆ ವಿಚಾರಣೆಗೆ ಹಾಜರಾಗುವಂತೆ ದಿನಾಂಕ:22-11-2007,29-11-2007, 03-01-2008 ರಂದು ದಿನಾಂಕ ನಿಗಧಿಪಡಿಸಲಾಗಿ ದಿನಾಂಕ 3-1-2008 ರಂದು ಅರ್ಜಿದಾರರ ಪರವಾಗಿ ವಕೀಲರು ಹಾಜರಾಗಿರುತ್ತಾರೆ. ದಿನಾಂಕ:07-02-2008 ಹಾಗೂ 28-2-2008 ರಂದು ವಿಚಾರಣೆ ಇರುವುದಾಗಿ ನೊಂದಾಣಿ ಅಂಚೆಯಲ್ಲಿ ನೋಟಿಸು ಜಾರಿ ಮಾಡಲಾಗಿ ಅರ್ಜಿದಾರರು ನೋಟಿಸು ಸ್ವೀಕರಿಸಿರುತ್ತಾರೆ. ದಿನಾಂಕ:28-02-2008 ರಂದು ಅರ್ಜಿದಾರರ ಪರವಾಗಿ ವಕೀಲರು ಹಾಜರಾಗಿರುತ್ತಾರೆ. ದಿನಾಂಕ:29-05-2008 ರಂದು ಸರ್ಕಾರಿ ವಕೀಲರು ಹಾಗೂ ಅರ್ಜಿದಾರರ ಪರ ವಕೀಲರು ಹಾಜರಾಗಿರುತ್ತಾರೆ. ದಿನಾಂಕ:14-08-2008 ರಂದು ಅರ್ಜಿದಾರರು ಅಥವಾ ಅವರ ವಕೀಲರು ವಿಚಾರಣೆಗೆ ಹಾಜರಾಗದ ಕಾರಣ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ರಾಜ್ಯಪತ್ರದಲ್ಲಿ ಪ್ರಕಟಣೆ ಹೊರಡಿಸುವ ಬಗ್ಗೆ ತೀರ್ಮಾನಿಸಲಾಯಿತು.

ಈ ಪ್ರಕರಣದ ಬಗ್ಗೆ ಅರಣ್ಯ ಕಾಯಿದೆ 1963 ರ ಸೆಕ್ಷನ್ 71 ಎ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಬೇಕಾದ ಪ್ರಯುಕ್ತ ಕರ್ನಾಟಕ ಅರಣ್ಯ ಕಾಯ್ದೆ 1963 ರ 71 (ಎ) ಯಿಂದ (ಜಿ)ಯ ಅನ್ವಯ ಉತ್ಪನ್ನಗಳ ಸಾಗಾಣಿಕೆಯ ಹಕ್ಕು ಭಾಧ್ಯತೆ ಹಾಗೂ ವಾಹನದ ಮಾಲೀಕತ್ವದ ರುಜುವಾತುಪಡಿಸುವ ಮೂಲಕ ದಾಖಲಾತಿಗಳನ್ನು ಹಾಜರುಪಡಿಸಲು 30 ದಿನಗಳ ಕಾಲಾವಕಾಶ ನೀಡಿ ವಾಹನದ ಮಾಲೀಕರು ಖುದ್ದಾಗಿ ಅಥವಾ ನ್ಯಾಯಾವಾದಿಗಳ ಮುಖಾಂತರ ಅರ್ಜಿ ಸಲ್ಲಿಸುವಂತೆ, ತಪ್ಪಿದಲ್ಲಿ ಸದರಿ ವಾಹನ ಮತ್ತು ಸೊತ್ತನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳಲಾಗುವುದೆಂದು ಈ ನ್ಯಾಯಾಲಯದ ಆದೇಶ ಸಂಖ್ಯೆ ಎಲ್ಎನ್ಡಿ: ಅರಣ್ಯ ಮೊಕದ್ದಮೆಸಂಖ್ಯೆ 101/2006-07 ದಿನಾಂಕ:23-08-2008 ರಂದು ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯು ದಿನಾಂಕ:04-09-2008 ರ ಕರ್ನಾಟಕ ರಾಜ್ಯ ಪತ್ರ ಭಾಗ 6(ಎ) ಪುಟ ಸಂಖ್ಯೆ 226 ರಲ್ಲಿ ಪ್ರಕಟಗೊಂಡಿರುತ್ತದೆ.ಸದರಿ ಪ್ರಕಟಣೆಯು ಉದಯವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ:30-10-2008 ರಲ್ಲಿ ಪ್ರಕಟವಾಗಿರುತ್ತದೆ.

ನಂತರ ದಿನಾಂಕ:23-07-2009 ರಂದು ವಿಚಾರಣೆಗೆ ಹಾಜರಾಗಲು ನೋಟಿಸು ಜಾರಿ ಮಾಡಲಾಗಿ ಯಾರೂ ವಿಚಾರಣೆಗೆ ಹಾಜರಾಗಿರುವುದಿಲ್ಲ.

ಮೇಲಿನ ಪ್ರಕಟಣೆಯಲ್ಲಿ ನೀಡಲಾಗಿದ್ದ 30 ದಿನಗಳ ಕಾಲಾವಕಾಶವು ದಿನಾಂಕ 22-9-2008 ಕ್ಕೆ ಮುಗಿದಿದ್ದು ಸದರಿ ವಾಹನಕ್ಕೆ ಸಂಬಂಧಿಸಿದಂತೆ ಮಾಲೀಕತ್ವದ ಬಗ್ಗೆ ಯಾರಿಂದಲೂ ಯಾವುದೇ ಅಹವಾಲುಗಳ ಸ್ವೀಕೃತವಾಗಿರುವುದಿಲ್ಲ. ಪುನಃ 30 ದಿನಗಳ ಕಾಲಾವಕಾಶವನ್ನು ನೀಡಿ ವಾಹನದ ಮಾಲೀಕರು ಖುದ್ದಾಗಿ ಅಥವಾ ನ್ಯಾಯಾವಾದಿಗಳ ಮುಖಾಂತರ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಸದರಿ ವಾಹನ ಮತ್ತು ಸೊತ್ತನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಏಕಪಕ್ಷೀಯವಾಗಿ ಕ್ರಮಕೈಗೊಳ್ಳಲಾಗುವುದೆಂದು ಈ ನ್ಯಾಯಾಲಯದ ಆದೇಶ ಸಂಖ್ಯೆ ಎಲ್ಎನ್ಡಿ: ಅರಣ್ಯ ಮೊಕದ್ದಮೆಸಂಖ್ಯೆ 101/2006-07 ದಿನಾಂಕ 14-9-2009 ರಂದು ಪ್ರಕಟಣೆ ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯು ದಿನಾಂಕ:01-10-2009 ರ ಕರ್ನಾಟಕ ರಾಜ್ಯ ಪತ್ರ ಭಾಗ 6(ಎ) ಪುಟ ಸಂಖ್ಯೆ 2745 ರಲ್ಲಿ ಪ್ರಕಟಗೊಂಡಿರುತ್ತದೆ. ಹಾಗೂ ಈ ಪ್ರಕಟಣೆಯು ಶಕ್ತಿ ಹಾಗೂ ರಾಷ್ಟ್ರ ಬಂಧು ದಿನ ಪತ್ರಿಕೆಯಲ್ಲಿ ದಿನಾಂಕ:09-10-2009 ರಂದು ಪ್ರಕಟವಾಗಿರುತ್ತದೆ.

ಮೇಲಿನ ಪ್ರಕಟಣೆಯಲ್ಲಿ ನೀಡಲಾಗಿದ್ದ 30 ದಿನಗಳ ಕಾಲಾವಕಾಶವು ದಿನಾಂಕ:14-10-2009 ಕ್ಕೆ ಮುಗಿದಿದ್ದು ಕೊನೆಯದಾಗಿ ದಿನಾಂಕ:28-01-10 ರಂದು ಯಾರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ಸದರಿ ವಾಹನಕ್ಕೆ ಸಂಬಂಧಿಸಿದಂತೆ ಮಾಲೀಕತ್ವದ ಬಗ್ಗೆ ಯಾರಿಂದಲೂ ಅಹವಾಲುಗಳ ಸ್ವೀಕೃತವಾಗಿರುವುದಿಲ್ಲ. ಆದುದರಿಂದ, ವಾಹನ ಪಿಕ್.ಅಪ್ ಜೀಪು ನೋಂದಣಿ ಸಂಖ್ಯೆ ಕೆ 18-5733 ಮತ್ತು ವಿವಿಧ ಅಳತೆಯ ಬೀಟೆ ಮರದ 6ನಾಟಗಳ ಸೊತ್ತನ್ನು ಅಕ್ರಮವಾಗಿ ಸಾಗಿಸುವಂತಹ ಕಾನೂನು ಬಾಹಿರ ಕೃತ್ಯದಲ್ಲಿ ಭಾಗಿಯಾಗಿರುವುದು ಸಾಭೀತಾಗಿರುತ್ತದೆ.

ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ಸೊತ್ತು ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 80 ರ ಪ್ರಕಾರ ಸರ್ಕಾರದ್ದಾಗಿರುತ್ತದೆ.

ಆದುದರಿಂದ, ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರಿ ಸೊತ್ತಾದ ಬೀಟೆ ಮರದ ನಾಟ ಹಾಗೂ ಅವುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ವಾಹನ ಪಿಕ್ಅಪ್ ಜೀಪು ನೊಂದಾಣಿ ಸಂಖ್ಯೆ ಕೆಎ 18-5733 ನ್ನು ಸರ್ಕಾರದ ಪರವಾಗಿ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಮೇಲೆ ವಿವರಿಸಿದ ಸಾಕ್ಷ್ಯಾಧಾರಗಳ ಆಧಾರದ ಮೇರೆಗೆ ಹೆಚ್.ಸಿ. ಕಾಂತರಾಜು ಭಾ.ಅ.ಸೇ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆ ವಿಭಾಗ, ವಿರಾಜಪೇಟೆ ಆದ ನಾನು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 71(ಎ) ಯಿಂದ (ಜಿ)ಯುವರೆಗೆ ಹಾಗೂ ಈ ವರೆಗಿನ ತಿದ್ದುಪಡಿಯ ಅನುಸಾರ ದತ್ತವಾದ ಅಧಿಕಾರದ ಮೇರೆಗೆ ಸಿದ್ದಾಪುರ ನಗರ ಪ್ರೋಲೀಸ್ ಠಾಣೆ.ರವರು ದಾಖಲಿಸಿದ ಮೊಕದ್ದಮೆ ಸಂಖ್ಯೆ 101/2006–07 ದಿನಾಂಕ:18–12–2006 ರಲ್ಲಿ ಸರ್ಕಾರದ ಪರ ಅಮಾನತ್ತು ಪಡಿಸಿದ ಈ ಕೆಳಕಂಡ ವಾಹನ ಮತ್ತು ಸೊತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ.

1) ವಾಹನದ ಮಾದರಿ	:	ಪಿಕ್‌ಅಪ್ ಜೀಪು
2) ವಾಹನದ ನೊಂದಾಣಿ ಸಂಖ್ಯೆ	:	ಕೆಎ –18–5733
3) ಇಂಜಿನ್ ಸಂಖ್ಯೆ	:	ACVIJ 26273
4) ಚಾಸೀಸ್ ಸಂಖ್ಯೆ	:	MAIRC 4 AC-YIJ 17328
5) ಸ್ವತ್ತು ಸಂಖ್ಯೆ	:	ಬೀಟೆ ಮರದ ನಾಟ 6 ಸಂಖ್ಯೆ 0.823

ಈ ಆದೇಶವನ್ನು ದಿನಾಂಕ:18–02–2010 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರು ಹಾಕಿ ಬಿಡುಗಡೆ ಮಾಡಿರುತ್ತೇನೆ.

ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಸಂಬಂಧಿಸಿದವರು ಯಾವುದೇ ಮೇಲ್ಮನವಿಯನ್ನು ಸಲ್ಲಿಸದೆ ಇದ್ದ ಪಕ್ಷದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ. ಅಲ್ಲದೆ ಮೇಲ್ಮನವಿಯ ಅವಧಿ ಮೀರಿದ ಬಳಿಕ ವಾಹನ ಮತ್ತು ಅರಣ್ಯ ಉತ್ಪನ್ನಗಳನ್ನು ಕಾನೂನು ರೀತ್ಯಾ ವಿಲೇ ಮಾಡಲು ಕೂಡ ಆದೇಶಿಸಿದೆ.

ಹೆಚ್.ಸಿ. ಕಾಂತರಾಜು ಭಾ.ಅ.ಸೇ
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ವಿರಾಜಪೇಟೆ ವಿಭಾಗ, ವಿರಾಜಪೇಟೆ.

ಪಿ.ಆರ್.326

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆ ವಿಭಾಗ, ಇವರ ನ್ಯಾಯಾಲಯ,, ವಿರಾಜಪೇಟೆ

ಸಂಖ್ಯೆ ಎಲ್‌ಎನ್‌ಡಿ ಮೊ:ಸಂಖ್ಯೆ 54/2002–03, ದಿನಾಂಕ:28ನೇ ಜನವರಿ, 2010

ಉಪಸ್ಥಿತರು ಹೆಚ್.ಸಿ. ಕಾಂತರಾಜು ಭಾ.ಅ.ಸೇ.
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ವಿರಾಜಪೇಟೆ ವಿಭಾಗ, ವಿರಾಜಪೇಟೆ.

ಪಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕುಟ್ಟಾ ಪೊಲೀಸ್ ಠಾಣೆ, ಕುಟ್ಟಾ.

ಅರ್ಜಿದಾರರು : ಬಿ.ಬಿ. ಕಾರ್ಯಪ್ಪ
ತಂದೆ ಲೇಟ್ ಬೋಪಯ್ಯ ತೆರಾಲು ಗ್ರಾಮ,
ಬಿರುನಾಣಿ ಅಂಚೆ, ವಿರಾಜಪೇಟೆ.

ಮೊಕದಮ್ಮೆ : ಕುಟ್ಟಾ ಪೊಲೀಸ್ ಠಾಣೆ ಮೊ.ಸಂ. 54/02, ದಿನಾಂಕ:19–11–2002

ಪ್ರಸ್ತಾವನೆ:

ಆರಕ್ಷಕ ಉಪ ನಿರೀಕ್ಷಕರು ಕುಟ್ಟಾ ಪೊಲೀಸ್ ಠಾಣೆ ಕುಟ್ಟಾ ಹಾಗೂ ಸಿಬ್ಬಂದಿ ವರ್ಗದವರು ದಿನಾಂಕ:19–11–2002 ರಂದು ಅಕ್ರಮವಾಗಿ ಬೀಟೆ ಮರದ ಸೈಜುಗಳನ್ನು ಟಾಟಾ 709 ಲಾರಿ ನೊಂದಾಣಿ ಸಂಖ್ಯೆ ಕೆಎ–12–3652ರಲ್ಲಿ ಕಳ್ಳ ಸಾಗಾಣಿಕೆ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ 1969ರ ಕರ್ನಾಟಕ ಅರಣ್ಯ ಕಾಯ್ದೆ 71(ಎ) ಮತ್ತು 1963 ರ ಕರ್ನಾಟಕ ಅರಣ್ಯ ಕಾನೂನು ನಿಯಮ 127,144,130,165 ಪ್ರಕಾರ ಮೊಕದ್ದಮೆ ಸಂಖ್ಯೆ 54/2002 ನ್ನು ದಾಖಲು ಮಾಡಿಕೊಂಡು ವಾಹನ ಮತ್ತು ಸ್ವತ್ತನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆರವರ ಸಮ್ಮುಖದಲ್ಲಿ ಹಾಜರುಪಡಿಸಿರುತ್ತಾರೆ.

ವಾಹನವನ್ನು ವಲಯ ಅರಣ್ಯ ಅಧಿಕಾರಿ ತಿತಿಮತಿರವರಿಗೆ ಹಾಗೂ ವಿವಿಧ ಅಳತೆಯ ಬೀಟೆ 37 ಸೈಜುಗಳನ್ನು ವಲಯ ಅರಣ್ಯ ಅಧಿಕಾರಿ ತಿತಿಮತಿ ನಾಟಾ ಸಂಗ್ರಹಾಲಯದಲ್ಲಿ ನ್ಯಾಯಾಂಗ ಅಭಿರಕ್ಷೆಯಲ್ಲಿಡಲು ಆದೇಶಿಸಲಾಯಿತು.

ವಾಹನದ ಮಾಲೀಕರಾದ ಶ್ರೀ.ಬಿ.ಬಿ. ಕಾರ್ಯಪ್ಪ ತೆರಾಲು ಗ್ರಾಮ ಬಿರುನಾಣಿ ಅಂಚೆ, ವಿರಾಜಪೇಟೆ ತಾಲ್ಲೂಕು ರವರು ದಿನಾಂಕ:11-12-2002 ರಂದು ಅರ್ಜಿ ಸಲ್ಲಿಸಿ ವಾಹನವನ್ನು ಮಧ್ಯಂತರ ವಶಕ್ಕೆ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ದಿನಾಂಕ:9-11-2001 ರಂದು ಪೊನ್ನಂಪೇಟೆ ವೃಕ್ಷ ಘಟಕದ ಅರಣ್ಯ ವಲಯ ಅಧಿಕಾರಿ ಹಾಗೂ ಸಿಬ್ಬಂದಿಯವರು ಅಕ್ರಮ ಬೀಟೆ ನಾಟಾ=3-1.621 ಘ.ಮೀ ಕಳ್ಳ ಸಾಗಾಣಿಕೆ ಸಂಬಂಧ ಲಾರಿ ಸಂಖ್ಯೆ ಕೆಎ 12 3652 ನ್ನು ಅಮಾನತ್ತುಪಡಿಸಿ ಮೊಕದ್ದಮೆ ಸಂಖ್ಯೆ 52/01-02 ನ್ನು ದಾಖಲಿಸಿ ವಾಹನ ಮತ್ತು ಸೊತ್ತನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರ 71 (ಎ) ಯಿಂದ (ಜಿ)ಯ ಪ್ರಕಾರ ಕ್ರಮ ಕೈಗೊಳ್ಳದ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆರವರ ಸಮಕ್ಷಮ ಹಾಜರುಪಡಿಸಿದ್ದು, ಸದ್ರಿ ವಾಹನ ಮತ್ತು ಸೊತ್ತನ್ನು ನ್ಯಾಯಾಂಗ ಅಭಿರಕ್ಷೆಗಾಗಿ ವಲಯ ಅರಣ್ಯ ಅಧಿಕಾರಿ ಪೊನ್ನಂಪೇಟೆರವರ ಸುಪರ್ಧಿಗೆ ನೀಡಲಾಗಿತ್ತು.

ಈ ಪ್ರಕರಣವು ತನಿಖಾ ಹಂತದಲ್ಲಿದ್ದು ಸೊತ್ತಿನ ಒಡೆತನದ ಬಗ್ಗೆ ತನಿಖೆ ಬಾಕಿ ಇರುವುದರಿಂದ ದಿನಾಂಕ:21-02-2002 ರಂದು ಅರ್ಜಿದಾರರ ಪರ ಅವರ ವಕೀಲರು ವಾದಿಸಿದ ಕೆಲವು ವಾಸ್ತವಾಂಶಗಳನ್ನು ವಿಶ್ಲೇಷಿಸಿ ಅಮಾನತ್ತುಪಡಿಸಿದ ಸದ್ರಿ ವಾಹನವನ್ನು ಕೆಲವು ಷರತ್ತಿಗೆ ಒಳಪಟ್ಟು ರೂ 1,25,000-00 ಬ್ಯಾಂಕ್ ಗ್ಯಾರಂಟಿ ಪಡೆದು ಅರ್ಜಿದಾರರಾದ ಶ್ರೀ ಬಿ.ಬಿ. ಕಾರ್ಯಪ್ಪ ತೆರಾಲು ಗ್ರಾಮ ಬಿರುನಾಣಿ ಅಂಚೆ ವಿರಾಜಪೇಟೆ ತಾಲ್ಲೂಕುರವರಿಗೆ ಈ ನ್ಯಾಯಾಲಯದ ಆದೇಶ ಸಂಖ್ಯೆ 52/01-02 ದಿನಾಂಕ:05-03-2002 ರಂದು ಮಧ್ಯಂತರ ವಶಕ್ಕೆ ನೀಡಲಾಗಿತ್ತು.

ವಾಹನದ ಮಾಲೀಕರು ಈ ನ್ಯಾಯಾಲಯದ ಆದೇಶ ದಿನಾಂಕ:05-03-2002 ರಂತೆ ಮಧ್ಯಂತರ ವಶಕ್ಕೆ ಬಿಡುಗಡೆ ಮಾಡಲಾಗಿರುವ ವಾಹನ ಕೆಎ12-3652ನ್ನು ಪುನಃ ಅಕ್ರಮ ಬೀಟೆ ಕಳ್ಳಸಾಗಾಣಿಕೆಯಲ್ಲಿ ತೊಡಗಿಸಿದ್ದು ಕುಟ್ಟಾ ಆರಕ್ಷಕ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿರುವುದರಿಂದ ಲಾರಿ ಸಂಖ್ಯೆ ಕೆಎ12-3652 ರಲ್ಲಿ ಅಕ್ರಮ ಸಾಗಾಟ ಮಾಡಲಾದ ಸೊತ್ತಿನ ಬಗ್ಗೆ ವಿವರಣೆ ನೀಡುವಂತೆ ದಿನಾಂಕ:27-12-2002 ರಂದು ಈ ನ್ಯಾಯಾಲಯದಿಂದ ಶೋಕಾಸ್ ನೋಟಿಸು ಜಾರಿ ಮಾಡಲಾಗಿತ್ತು. ಅರ್ಜಿದಾರರು ನೋಟಿಸನ್ನು ಸ್ವೀಕರಿಸಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ತಿತಿಮತಿ ಉಪ ವಿಭಾಗ ತಿತಿಮತಿರವರು ತನಿಖೆ ನಡೆಸಿ ನೀಡಿದ ತನಿಖಾ ವರದಿಯಲ್ಲಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸೊತ್ತುಗಳು ಖಾಸಗಿಯವರದಾಗಿರದೆ ಸರ್ಕಾರಕ್ಕೆ ಸೇರಿದ ಸೊತ್ತಾಗಿದೆ ಎಂದು ವರದಿ ಮಾಡಿರುತ್ತಾರೆ. ಅರ್ಜಿದಾರರು ಈ ನ್ಯಾಯಾಲಯದಿಂದ ದಿನಾಂಕ:26-5-03 ರಂದು ನೀಡಲಾದ ಶೋಕಾಸ್ ನೋಟಿಸಿಗೂ ಉತ್ತರಿಸದ ಕಾರಣ ಅರ್ಜಿದಾರರು ತಪ್ಪನ್ನು ಒಪ್ಪಿಕೊಂಡಂತೆ ಆಗಿರುತ್ತದೆ.

ಅರ್ಜಿದಾರರಾದಂತಹ ಶ್ರೀ ಬಿ.ಬಿ. ಕಾರ್ಯಪ್ಪ ತೆರಾಲು ಗ್ರಾಮ ಬಿರುನಾಣಿ ಅಂಚೆ ವಿರಾಜಪೇಟೆ ತಾಲ್ಲೂಕು ರವರಿಗೆ ಈ ನ್ಯಾಯಾಲಯದ ಆದೇಶ ಸಂಖ್ಯೆ 52/01-2002 ದಿನಾಂಕ:05-03-2002 ರಲ್ಲಿ ಕೆಲವು ಷರತ್ತುಗಳಿಗೆ ಒಳಪಡಿಸಿ ಮಧ್ಯಂತರ ವಶಕ್ಕೆ ಬಿಡುಗಡೆ ಮಾಡಿದ್ದು ವಾಹನವನ್ನು ಪುನಃ ಅಕ್ರಮ ಬೀಟೆ ಸೈಜುಗಳ ಸಾಗಾಣಿಕೆಗೆ ಬಳಸಿದ್ದು ಅರ್ಜಿದಾರರು ಅಪರಾಧ ಮಾಡುವ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದಾರೆಂಬುದು ಸಾಭೀತಾದ ಕಾರಣ ವಾಹನದ ಮಾಲೀಕರು ಮಧ್ಯಂತರ ವಶಕ್ಕೆ ನೀಡುವಾಗ ವಿಧಿಸಿದ ಷರತ್ತುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವುದು ಸಾಭೀತಾದ್ದರಿಂದ ಅರಣ್ಯ ಮೊಕದ್ದಮೆ ಸಂಖ್ಯೆ 52/2001-02 ರಲ್ಲಿ ವಶಪಡಿಸಿಕೊಂಡ ವಾಹನ ಲಾರಿ ಕೆಎ 12-3652 ಮತ್ತು ಸೊತ್ತು ಬೀಟೆ ನಾಟಾ 6 ಸಂಖ್ಯೆ 3.016 ಘ.ಮೀನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ದಿನಾಂಕ:26-02-2003 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಅರಣ್ಯ ಮೊಕದ್ದಮೆ ಸಂಖ್ಯೆ 52/2001-02 ದಿನಾಂಕ:26-6-2003 ರಲ್ಲಿ ಹೊರಡಿಸಲಾದ ಮುಟ್ಟುಗೋಲು ಆದೇಶವನ್ನು ಪ್ರಶ್ನಿಸಿ ಶ್ರೀ ಬಿ.ಬಿ. ಕಾರ್ಯಪ್ಪರವರು ಸೆಷನ್ ನ್ಯಾಯಾಲಯ ಮಡಿಕೇರಿಯಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ 68/03ನ್ನು ದಾಖಲಿಸಿರುತ್ತಾರೆ.ಈ ಬಗ್ಗೆ ವಿಚಾರಣೆ ನಡೆದು ಮಾನ್ಯ ನ್ಯಾಯಾಲಯವು ದಿನಾಂಕ:30-1-2004 ರಂದು ತೀರ್ಪು ನೀಡಿ ರೂ 30,000-00 ಬ್ಯಾಂಕ್ ಗ್ಯಾರಂಟಿ ಪಡೆದು ವಾಹನವನ್ನು ಮಧ್ಯಂತರ ವಶಕ್ಕೆ ನೀಡಲು ಆದೇಶಿಸಲಾಗಿರುತ್ತದೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ವಾಹನ ಲಾರಿ ಸಂಖ್ಯೆ ಕೆಎ 12 3652 ನ್ನು ಷರತ್ತುಗೊಳಪಟ್ಟು ರೂ 30.000-00 ಬ್ಯಾಂಕ್ ಗ್ಯಾರಂಟಿ ಪಡೆದು ಮಧ್ಯಂತರ ವಶಕ್ಕೆ ದಿನಾಂಕ:12-11-2003 ರಂದು ಬಿಡುಗಡೆಗೊಳಿಸಲಾಯಿತು.

ಪ್ರಕರಣವನ್ನು ಅಂತಿಮವಾಗಿ ಇತ್ಯರ್ಥಪಡಿಸುವ ಸಲುವಾಗಿ ವಿಚಾರಣೆಯನ್ನು ಈ ಅಧಿಕೃತ ನ್ಯಾಯಾಲಯದಲ್ಲಿ ದಿನಾಂಕ:11-09-2003, 9-10-2003 ರಂದು ಕರೆಯಲಾಯಿತು. ದಿನಾಂಕ:09-10-2003 ಸಾಕ್ಷಿದಾರರು ಇರಲಿಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರು ಹಾಜರಿದ್ದರು. ದಿನಾಂಕ:02-11-2007 ರಂದು ವಿಚಾರಣೆ ಕರೆಯಲಾಗಿ ದಿನಾಂಕ:06-12-2007ರಂದು ಸಾಕ್ಷಿಗಾರರಿಗೆ ಹಾಜರಾಗಲು ಅಂತಿಮ ನೋಟಿಸು ಜಾರಿ ಮಾಡಲಾಯಿತು. ದಿನಾಂಕ:27-12-2007 ರಂದು ಸಹಾಯಕ ಸರ್ಕಾರಿ ಅಭಿಯೋಜಕರು, ಅರ್ಜಿದಾರರ ವಕೀಲರು ಹಾಜರಿದ್ದು, ವಾಹನವನ್ನು ಮುಂದಿನ ವಿಚಾರಣೆ ದಿನಾಂಕದಲ್ಲಿ ಹಾಜರುಪಡಿಸುವುದಾಗಿ ವಕೀಲರು ತಿಳಿಸಿರುತ್ತಾರೆ. ದಿನಾಂಕ:28-02-2008 ರಂದು ವಿಚಾರಣೆಗೆ ಕರೆಯಲಾಗಿ ಅರ್ಜಿದಾರರ ಪರ ವಕೀಲರು ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸುವುದಾಗಿ, ವಾಹನವನ್ನು ಹಾಜರುಪಡಿಸುವುದಾಗಿ ಕೋರಿದ ಮೇರೆ ಸಾಕ್ಷಿ ವಿಚಾರಣೆ ನಡೆಸಲು ದಿನಾಂಕ:13-03-2008 ರಂದು ನಿಗಧಿಪಡಿಸಲಾಯಿತ್ತು. ದಿನಾಂಕ:29-05-08 ರಂದು ವಿಚಾರಣೆಯನ್ನು ದಿನಾಂಕ:12-06-2008 ಕ್ಕೆ ಮುಂದೂಡಲಾಯಿತ್ತು. ದಿನಾಂಕ:31-07-2008 ರಂದು ವಿಚಾರಣೆ ನಡೆಸಿ 21-08-2008ಕ್ಕೆ ಮುಂದೂಡಲಾಯಿತು.

ದಿನಾಂಕ:21-08-2008 ರಂದು ಸಹಾಯಕ ಸರ್ಕಾರಿ ವಕೀಲರು ಹಾಗೂ ಅರ್ಜಿದಾರರ ಪರ ವಕೀಲರು ಹಾಜರಾಗಿರುತ್ತಾರೆ. ವಿಚಾರಣೆಯನ್ನು ದಿನಾಂಕ:11-09-2008 ಕ್ಕೆ ಮುಂದೂಡಲಾಯಿತ್ತು.

ಅರ್ಜಿದಾರರ ಶ್ರೀ ಬಿ.ಬಿ. ಕಾರ್ಯಪ್ಪರವರು ಪೌತರಾಗಿರುವುದಾಗಿ ಅವರ ವಾರಸುದಾರರು ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸಲು ಆಸಕ್ತಿವಹಿಸುತ್ತಿಲ್ಲವೆಂದು ವ್ಯವಸ್ಥಾಪಕರು ಕಾರ್ಪೊರೇಶನ್ ಬ್ಯಾಂಕ್‌ರವರು ದಿನಾಂಕ:20-02-2009 ರಂದು ಈ ಕಛೇರಿಗೆ ತಿಳಿಸಿರುತ್ತಾರೆ.

ಅರ್ಜಿದಾರರ ಪುತ್ರರಾದ ಶ್ರಿ.ಬಿ.ಕೆ.ನಾಣಯ್ಯರವರು ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸಲು ಸಹಕರಿಸದ ಕಾರಣ ವಾಹನ ಲಾರಿ ಸಂಖ್ಯೆ ಕೆಎ 12-3652ನ್ನು ಜಪ್ತಿ ಮಾಡಿ ವರದಿ ಸಲ್ಲಿಸುವಂತೆ ವಲಯ ಅರಣ್ಯ ಅಧಿಕಾರಿ ಪೊನ್ನಂಪೇಟೆರವರಿಗೆ ತಿಳಿಸಲಾಯಿತು.

ವಲಯ ಅರಣ್ಯ ಅಧಿಕಾರಿ ಪೊನ್ನಂಪೇಟೆರವರು ಅರ್ಜಿದಾರರಾದ ಪೌತಿ ಬಿ.ಬಿ. ಕಾರ್ಯಪ್ಪ ರವರ ಪುತ್ರ ಬಿ.ಕೆ. ನಾಣಯ್ಯರವರನ್ನು ಸಂಪರ್ಕಿಸಿ ವಾಹನವನ್ನು ಫೈನಾನ್ಸ್‌ರವರು ತೆಗೆದುಕೊಂಡು ಹೋಗಿರುವುದಾಗಿ ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸಿಕೊಟ್ಟಲ್ಲಿ ಮೊಕದ್ದಮೆಯನ್ನು ನಡೆಸಬಾರದಾಗಿ ತಿಳಿಸಿರುವುದಾಗಿ ವರದಿ ಸಲ್ಲಿಸಿರುತ್ತಾರೆ. ಆದ್ದುದರಿಂದ ಅರ್ಜಿದಾರರು ದಿನಾಂಕ:12-11-2003ರ ಮಧ್ಯಂತರ ಆದೇಶದ ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ಮತ್ತು ಅರ್ಜಿದಾರರು ಪೌತರಾಗಿರುವುದರಿಂದ ವಾಹನವನ್ನು ನ್ಯಾಯಾಲಯಕ್ಕೆ ಹಾಜರುಪಡಿಸದ ಕಾರಣ ಸದ್ರಿಯವರು ನೀಡಿರುವ ಬ್ಯಾಂಕ್ ಗ್ಯಾರಂಟಿ ರೂ. 30,000-00 ವನ್ನು ಹಾಗೂ ಸ್ವತ್ತು ಬೀಟೆ ಸೈಜು 37 ಸಂಖ್ಯೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಕಂಡಂತೆ ಆದೇಶ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮೇಲ್ಕಂಡ ವಿದ್ಯಮಾನಗಳ ಪ್ರಕಾರ ಹೆಚ್.ಸಿ. ಕಾಂತರಾಜು (ಭಾಅ.ಸೇ) ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿರಾಜಪೇಟೆ ವಿಭಾಗ, ವಿರಾಜಪೇಟೆ ಆದ ನಾನು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 71(ಎ)ಯಿಂದ (ಜ)ಯವರೆಗೆ ಹಾಗೂ ಈ ವರೆಗಿನ ತಿದ್ದುಪಡಿಯನುಸಾರ ದತ್ತವಾದ ಅಧಿಕಾರವನ್ನು ಚಲಾಯಿಸಿ ಅರಕ್ಷಕ ಉಪ ನಿರೀಕ್ಷಕರು ಕುಟ್ಟಾರವರ ಮೊಕದ್ದಮೆ ಸಂಖ್ಯೆ 54/2002-03 ರಲ್ಲಿ ಅಮಾನತ್ತು ಪಡಿಸಲಾದ ಬೀಟೆಸೈಜು 37 ಸಂಖ್ಯೆ ಸೊತ್ತನ್ನು ಹಾಗೂ ಕಾರ್ಪೊರೇಶನ್ ಬ್ಯಾಂಕ್ ಪೊನ್ನಂಪೇಟೆ ರವರು ನೀಡಿರುವ ಬ್ಯಾಂಕ್ ಗ್ಯಾರಂಟಿ ರೂ.30,000-00 (ಮೂವತ್ತು ಸಾವಿರ) ಸಂಖ್ಯೆ 2/2003 ದಿನಾಂಕ:07-11-2003ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸುವುದಾದರೆ ಇನ್ನೂ 30 ದಿನಗಳ ಒಳಗಾಗಿ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತು ಮತ್ತು ಬ್ಯಾಂಕ್ ಗ್ಯಾರಂಟಿ ವಿವರ.

1) ಸ್ವತ್ತು ಸಂಖ್ಯೆ	ಬೀಟೆ ಸೈಜು 37
2) ಬ್ಯಾಂಕ್ ಗ್ಯಾರಂಟಿ	ರೂ 30,000-00 ಗ್ಯಾರಂಟಿ ಸಂಖ್ಯೆ 2/03 ದಿನಾಂಕ 7-11-03 ಕಾರ್ಪೋರೇಷನ್ ಬ್ಯಾಂಕ್, ಪೊನ್ನಂಪೇಟೆ.

ಈ ಆದೇಶವನ್ನು ದಿನಾಂಕ:28-01-2010 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರು ಹಾಕಿ ಬಿಡುಗಡೆ ಮಾಡಿರುತ್ತೇನೆ.

ಹೆಚ್.ಸಿ. ಕಾಂತರಾಜು ಭಾ.ಅ.ಸೇ
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ವಿರಾಜಪೇಟೆ ವಿಭಾಗ, ವಿರಾಜಪೇಟೆ.

ಪಿ.ಆರ್.327

OFFICE OF THE DEPUTY COMMISSIONER, HASSAN DISTRICT, HASSAN

NOTIFICATION

No.RRT/Bhoomi/67/09-10, Dated:23rd March, 2010

Sub: Issue of certificates with manual signature by Tahsildar, Channarayapatna during period 23.03.2010 to 29.03.2010 due to technical problem of Nemmadi RDS application version 2.2

Ref: Circular No.EDCS/NMC/02/REV/2007, Dated:23.03.2010.

It has been noted that there is an intermittent problem in the generation of final copy of the certificate at telecentre level in Nemmadi RDS 2.2 version installed at Channarayapatna Taluka from 23.03.2010.

It is informed by the Directorate vide circular cited above, that the problem is being attended by the Project Management team in co-ordination with Microsoft. In order to tide over the technical problem till it is resolved and to ensure that the citizens are not put into inconvenience, I, Naveen Raj Singh, I.A.S., Deputy Commissioner, Hassan after applying my mind, order that Tahsildar, Channarayapatna is empowered to sign the fair copy of RDS certificate at the case worker level itself manually from 23.03.2010 to 29.03.2010 or till the issue is resolved which ever is earlier.

The various authorities, to whom any certificate is presented, issued during the above period by Tahsildar, Channarayapatna should accept manually signed certificate.

This notification shall automatically expired on 29.03.2010.

No manual certificate, issue by Tahsildar Channarayapatna During the period not covered by the above notification should be accepted by any authority.

NAVEEN RAJ SINGH

PR-647

Deputy Commissioner,

Hassan District, Hassan.

ವಾಣಿಜ್ಯ ತೆರಿಗೆ ಇಲಾಖೆ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ರ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡಾವಳಿಗಳು

ವಿಷಯ: ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003-'ಪ್ರಿ ಕುಕ್ಡ್ ಮತ್ತು ಪ್ರೋಸೆಸ್ಡ್ ವ್ಹೆಟ್‌ಓಟ್ಸ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಶ್ರೀ ಶ್ರೀನಾಥ್, ಮಾಲೀಕರು, ಮೆ.ಸಿ.ಪಿ. ಏಜೆನ್ಸೀಸ್, ನಂ.36, 19ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560027, ಇವರ ಅರ್ಜಿ ದಿನಾಂಕ:24.08.2009.

ಅರ್ಜಿದಾರರಾದ ಶ್ರೀ ಶ್ರೀನಾಥ್, ಮಾಲೀಕರು, ಮೆ.ಸಿ.ಪಿ. ಏಜೆನ್ಸೀಸ್, ನಂ.36, 19ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು-560027, ಇವರು ಮೇಲ್ಕಂಡ ಅರ್ಜಿಯಲ್ಲಿ ಪ್ರಿ ಕುಕ್ಡ್ ಮತ್ತು ಪ್ರೋಸೆಸ್ಡ್ ವ್ಹೆಟ್‌ಓಟ್ಸ್' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಪ್ರಕರಣಗಳಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

ಸ್ಪಷ್ಟೀಕರಣ ಆದೇಶ ಸಂಖ್ಯೆ: ಸಿಎಲ್‌ಆರ್/ಸಿಆರ್-95/09-10, ದಿನಾಂಕ:20ನೇ ಜನವರಿ, 2010

'ಟಿ ಕಟ್ಸ್ ಮತ್ತು ಪ್ರೋಸೆಸ್ಡ್ ವೈಟ್‌ಟೀಟ್ಸ್' 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)ರಂತೆ ಶೇಕಡಾ 12.5ರಂತೆ ತೆರಿಗೆಗೊಳಪಡುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ಪ್ರದೀಪ್ ಸಿಂಗ್ ಖರೋಲ
ಪಿ.ಆರ್.182 **ವಾಣಿಜ್ಯ ತೆರಿಗೆಗಳ ಆಯುಕ್ತರು,**
(ಕರ್ನಾಟಕ), ಬೆಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ ರವರ ನ್ಯಾಯಾಲಯ

ಸಂಖ್ಯೆ:ಇಎಕ್ಸ್‌ಇ:ಸಿಆರ್‌ಎಂ:333/2001-02, ದಿ:29ನೇ ಡಿಸೆಂಬರ್, 2009

ಉಪಸ್ಥಿತರು: ಶ್ರೀ.ಸಿ.ಎಲ್. ಜಯರಾಮ್
ಅಧಿಕೃತ ಅಧಿಕಾರಿ ಹಾಗೂ
ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ.

ಫಿರ್ಯಾದುದಾರರು	ವಿರುದ್ಧ	ಆರೋಪಿಗಳು
ಆರಕ್ಷಕ ಉಪ ನಿರೀಕ್ಷಕರು, ಗೋಣಿಕೊಪ್ಪ		1) ದೇವಣಿಮಾಡ ಪಿ.ದಿನೇಶ್, ಅರ್ವತ್ತೋಕ್ಲು, 2) ಎಸ್. ಕೃಷ್ಣ, ಅರ್ವತ್ತೋಕ್ಲು, 3) ಅತಾವುಲ್ಲಾ, ಮಾಪಿಳ್ಳೆ ತೋಡು, 4) ತುಳಸಿ ರೈ, ಜೋಡುಬಿಟೀ 5) ಶ್ರೀಮತಿ ಮುಕ್ಕಾಟಿರ ಇಂದಿರಾ ಅರ್ವತ್ತೋಕ್ಲು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:18-10-2001 ರಂದು ಗೋಣಿಕೊಪ್ಪ ಆರಕ್ಷಕ ಉಪ ನಿರೀಕ್ಷಕರಿಗೆ ದೊರೆತ ವರ್ತಮಾನದ ಮೇರೆಗೆ ಠಾಣಾ ಸಿಬ್ಬಂದಿಯವರೊಂದಿಗೆ ಹಾಗೂ ಪಂಚಾಯಿತಿದಾರರೊಂದಿಗೆ ನಡೆದುಕೊಂಡು ಮಹೇಂದ್ರರವರ ವಾಸದ ಮನೆ ಮುಂಭಾಗದ ದಾರಿಯಲ್ಲಿ ಪಾರ ಕಾಯ್ದು ನಿಂತಿದ್ದಾಗ ಸಮಯ 11.00 ಗಂಟೆಗೆ ಅರುವತ್ತೊಕ್ಲು ಗ್ರಾಮದ ಕಡೆಯಿಂದ ಗೋಣಿಕೊಪ್ಪ ಕಡೆಗೆ ಬರುತ್ತಿದ್ದ ಅಟೋರಿಕ್ಷಾ ಸಂಖ್ಯೆ:ಕೆಎ-12-4006ನ್ನು ಅವರು ತಡೆದು ನಿಲ್ಲಿಸಿ ಪಂಚಾಯಿತಿದಾರರೊಂದಿಗೆ ಅಟೋರಿಕ್ಷಾದೊಳಗಡೆ ಪರಿಶೀಲಿಸಿದಾಗ ಚಾಲಕ ಅಟೋರಿಕ್ಷಾದಲ್ಲಿದ್ದು ಹಿಂಭಾಗದ ಸೀಟಿನಲ್ಲಿ ಎರಡು ಜನರು ಕುಳಿತಿದ್ದು ರಿಕ್ಷಾದ ಒಳಗಡೆ ಸೀಟಿನ ಹಿಂಬಾಗ ಸಾರಾಯಿ ಪ್ಯಾಕೇಟುಗಳು ಕಂಡುಬಂದಿದ್ದು ಹಿಂಭಾಗ ಕುಳಿತ್ತಿದ್ದವರನ್ನು ಸಾರಾಯಿ ಪ್ಯಾಕೇಟುಗಳ ಬಗ್ಗೆ ವಿಚಾರಣೆ ಮಾಡಿದಾಗ ಸಾರಾಯಿ ಪ್ಯಾಕೇಟುಗಳನ್ನು ಸಾಗಿಸಿ ಮಾರಾಟ ಮಾಡಲು ಯಾವುದೇ ಸರ್ಕಾರದ ರಹದಾರಿ ಇರುವುದಿಲ್ಲ. ಈ ಸಾರಾಯಿ ಪ್ಯಾಕೇಟುಗಳನ್ನು ಅರ್ವತ್ತೋಕ್ಲು ಗ್ರಾಮದ ವಾಸಿ ಶ್ರೀಮತಿ ಮುಕ್ಕಾಟೀರ ಇಂದಿರಾರವರ ಮನೆಯಲ್ಲಿ ನಾವು ಮತ್ತು ಇಂದಿರಾ ಹಾಗೂ ಭಂಟರ ತುಳಸಿರವರು ಸೇರಿ ತಯಾರಿಸಿದ್ದು, ಮಾರಾಟ ಮಾಡಲು ರಿಕ್ಷಾದಲ್ಲಿ ಸಾಗಾಟ ಮಾಡುತ್ತಿರುವುದಾಗಿದೆ. ಇಂದಿರಾರವರ ಮನೆಯೊಳಗೆ ಬಾಕಿ ಸಾರಾಯಿ ಪ್ಯಾಕೇಟುಗಳನ್ನು ಇಟ್ಟಿದ್ದು, ನಮ್ಮನ್ನು ಕರೆದುಕೊಂಡು ಹೋದರೆ ತೋರಿಸಿ ಕೊಡುತ್ತೇವೆಂದು ತಿಳಿಸಿದ ಮೇರೆಗೆ ಸದರಿಯವರ ಹೆಸರು ವಿಳಾಸ ವಿಚಾರ ಮಾಡಿದಾಗ ರಿಕ್ಷಾದ ಹಿಂಭಾಗದಲ್ಲಿ ಕುಳಿತ್ತಿದ್ದವನು ದೇವಣಿಮಾಡ ಪಿ ದೀನೇಶ್, ತಂದೆ ಪೂವಯ್ಯ, ಹಾತೂರು, ಮಡಿಕೇರಿ ತಾಲ್ಲೂಕು ಹಾಲಿ c/o ಮುಕ್ಕಾಟಿರ ಇಂದಿರಾ ಅರ್ವತ್ತೋಕ್ಲು ಗ್ರಾಮ ಎಂದು ತಿಳಿಸಿದನು ಮತ್ತೊಬ್ಬನನ್ನು ವಿಚಾರಣೆ ಮಾಡಿದಾಗ ಎಸ್. ಕೃಷ್ಣ, ತಂದೆ ಸುಬ್ಬಾಚಾರಿ. ಚಾಲಕ ಗರಿಕೇರಿ ಪೈಸಾರಿ ವಾಸ ಅರವತ್ತೋಕ್ಲು ಎಂದು ತಿಳಿಸಿದ್ದು, ಆಟೋರಿಕ್ಷಾ ಓಡಿಸುತ್ತಿದ್ದವನು ಅತಾವುಲ್ಲಾ ಅಲಿಯಾಸ್ ಅಲ್ತಾಫ್ ತಂದೆ ಆಫೀಜ್‌ಖಾನ್, ಆಟೋ ರಿಕ್ಷಾ ಕೆಎ-12-4006 ರ ಚಾಲಕ ಮಾಪಿಳ್ಳೆತೋಡು ವಾಸ ಪೊನ್ನಂಪೇಟೆ ಎಂದು ತಿಳಿಸಿದ್ದು, ಸದರಿಯವರ ಸ್ವ ಇಚ್ಛಾ ಹೇಳಿಕೆ ಪಡೆದುಕೊಂಡು ಪಂಚಾಯತುದಾರರ ಸಮಕ್ಷಮ ರಿಕ್ಷಾದೊಳಗಡೆ ಇದ್ದ ಸಾರಾಯಿ ಪ್ಯಾಕೇಟುಗಳನ್ನು ಎಣಿಸಿದಾಗ ಒಟ್ಟು 200 ಪ್ಯಾಕೇಟುಗಳಿದ್ದು, ಸದರಿ ಸಾರಾಯಿ ಪ್ಯಾಕೇಟುಗಳ ಮೇಲೆ 100 ಮಿಲಿ, 35 ಯುಪಿ, ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಾಗಿದೆ ಮೈಸೂರು ಶುಗರ್ ಕಂಪೆನಿ ಲಿ. ಮೈಸೂರು ಜಿಲ್ಲೆ ಎಂದು ಬರೆದಿರುವುದು ಕಂಡು ಬಂದಿದ್ದು, ಮೇಲ್ಕಂಡ ಪ್ಯಾಕೇಟುಗಳ ಪೈಕಿ ಒಂದನ್ನು ಸ್ಯಾಂಪಲ್‌ತೆಗೆದು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿದ್ದು ಅರಗಿನಿಂದ ಸೀಲು ಮಾಡಿರುತ್ತಾರೆ. ಬಾಕಿ ಸಾರಾಯಿ ಪ್ಯಾಕೇಟುಗಳನ್ನು ಮತ್ತು ಆಟೋರಿಕ್ಷಾ

ಸಂ.ಕೆಎ-12-4006 ರನ್ನು ವಶಕ್ಕೆ ತೆಗೆದುಕೊಂಡು ಸದರಿ ಸಾರಾಯಿ ಪ್ಯಾಕೇಟುಗಳನ್ನು ಸಾಗಾಣಿಕೆ ಮಾಡಲು ಯಾವುದೇ ರಹದಾರಿ ಇಲ್ಲದಿರುವುದರಿಂದ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965 ರ ಕಲಂ 32, 34, 43ಎ ರ ಪ್ರಕಾರ ಆರಕ್ಷಕ ಉಪ ನಿರೀಕ್ಷಕರು. ಗೋಣಿಕೊಪ್ಪ ಠಾಣೆ ಇವರು ಮೊಕದ್ದಮೆ.ಸಂ.167/2001 ದಿ:18-10-2001 ರಂತೆ ಪ್ರಕರಣ ದಾಖಲಿಸಿಕೊಂಡು ನಂತರ ಮುಂದಿನ ಕ್ರಮಕ್ಕಾಗಿ ಅಬಕಾರಿ ಉಪ ನಿರೀಕ್ಷಕರು, ವಿರಾಜಪೇಟೆ ಉಪ ವಲಯ ಇವರಿಗೆ ವರ್ಗಾಯಿಸಿರುತ್ತಾರೆ.

ದಿನಾಂಕ:29-10-2001ರಂದು ವಾಹನದ ಮಾಲೀಕರೆಂದು ಶ್ರೀ.ಕೆ.ಜಿ.ನಾರಾಯಣ, ತಂದೆ ಕೆ.ಪಿ.ಗೋಪಾಲ, ಪಾಲಿಬೆಟ್ಟ ರಸ್ತೆ, ಗೋಣಿಕೊಪ್ಪ ಟೌನ್, ಕೊಡಗು ಜಿಲ್ಲೆರವರು ಅವರ ಪರ ವಕೀಲರಿಂದ ಅರ್ಜಿಯನ್ನು ಸಲ್ಲಿಸಿ, ವಾಹನದ ಮಾಲೀಕರು ಆಟೋವನ್ನು ಚಾಲಕನನ್ನು ನೇಮಿಸಿ ಬಾಡಿಗೆಗೆ ಓಡಿಸುತ್ತಿದ್ದು, ಚಾಲಕನಿಗೆ ಪ್ರಯಾಣಿಕರು ಸಾರಾಯಿ ಪ್ಯಾಕೇಟುಗಳನ್ನು ರಿಕ್ಷಾದಲ್ಲಿ ತೆಗೆದುಕೊಂಡಿರುವುದು ತಿಳಿದಿರುವುದಿಲ್ಲ. ಮತ್ತು ಕಾನೂನಿನ ಅರಿವಿಲ್ಲದೆ, ತಿಳುವಳಿಕೆ ಇಲ್ಲದೆ ಈ ಅಪರಾಧ ನಡೆದಿರುತ್ತದೆ. ಆಟೋರಿಕ್ಷಾ ಬಾಡಿಗೆಯಿಂದ ಬರುವ ಹಣದಿಂದ ವಾಹನದ ಮಾಲೀಕರ ಜೀವನ ಅವಲಂಬಿಸಿರುತ್ತದೆ. ಸದರಿ ವಾಹನವನ್ನು ಚಾಲನೆ ಇಲ್ಲದೆ ನಿಲ್ಲಿಸಿದಲ್ಲಿ ವಾಹನದ ಬಿಡಿ ಭಾಗಗಳು ಹಾಳಾಗುವ ಸಾಧ್ಯತೆ ಇರುವುದರಿಂದ ಸದರಿ ವಾಹನವನ್ನು ಮಧ್ಯಂತರ ಬಿಡುಗಡೆಗೊಳಿಸಿಕೊಡಬೇಕಾಗಿ ಹಾಗೂ ತಾವು ವಿಧಿಸುವ ಎಲ್ಲಾ ಷರತ್ತುಗಳಿಗೂ ಬದ್ಧರಾಗುವುದಾಗಿ ಮತ್ತು ಭದ್ರತೆಯನ್ನು ನೀಡುವುದಾಗಿ ಕೋರಿಕೊಂಡಿರುತ್ತಾರೆ.

ಈ ಸಂಬಂಧ ಈ ಪ್ರಾಧಿಕಾರದ ಪತ್ರ ಸಮ ಸಂಖ್ಯೆ ದಿ:27-11-2001 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರಿಗೆ ಪತ್ರ ಬರೆಯಲಾಗಿದ್ದು, ಸದರಿ ವಾಹನಕ್ಕೆ ಇಂದಿನ ಮಾರ್ಕೆಟ್ ಮೌಲ್ಯವನ್ನು ನಿಗದಿಪಡಿಸಲು ಕೋರಲಾಗಿತ್ತು. ಅದರಂತೆ ಹಿರಿಯ ಮೋಟಾರು ವಾಹನ ತನಿಖಾಧಿಕಾರಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೊಡಗು ಜಿಲ್ಲೆ ಇವರು ಪರಿಶೀಲಿಸಿ ರೂ.24,000/- ಮೌಲ್ಯವನ್ನು ನಿಗದಿಪಡಿಸಿ ದಿ:3-12-2001 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಬಗ್ಗೆ ದಿ:19-1-2002 ರಂದು ಪ್ರಾಧಿಕಾರದಲ್ಲಿ ವಿಚಾರಣೆಯನ್ನು ಕರೆಯಲಾಗಿದ್ದು ಈ ದಿನ ಸಹಾಯಕ ಸರ್ಕಾರಿ ಅಭಿಯೋಗ ನಿರ್ದೇಶಕರು, ವಾಹನದ ಮಾಲೀಕರು ಅವರ ಪರ ವಕೀಲರು ಹಾಜರಿದ್ದು, ಪ್ರಾಧಿಕಾರದಲ್ಲಿ ತೀರ್ಮಾನಿಸಿ ಪ್ರಾದೇಶಿಕ ಅಧಿಕಾರಿಗಳು ವಾಹನಕ್ಕೆ ನಿಗಧಿಪಡಿಸಿದ ಮೌಲ್ಯಕ್ಕೆ ಸಮನಾದ ಬ್ಯಾಂಕ್ ಗ್ಯಾರೆಂಟಿಯನ್ನು ಸಲ್ಲಿಸಿದಲ್ಲಿ ವಾಹನವನ್ನು ಬಿಡುಗಡೆಗೊಳಿಸುವುದಾಗಿ ತೀರ್ಮಾನಿಸಲಾಗಿತ್ತು.

ಸದರಿ ಆದೇಶವನ್ನು ವಾಹನದ ಮಾಲೀಕರು ಒಪ್ಪಿಕೊಂಡು ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್, ಗೋಣಿಕೊಪ್ಪ ಶಾಖೆ ಇವರಿಂದ ಬ್ಯಾಂಕ್ ಗ್ಯಾರೆಂಟಿ ಸಂ.ಒಆರ್/045/1073/ಬಿಜಿ/01/2001-02 ದಿ:26-12-01ರನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಆದೇಶ ಸಂ:ಇಎಕ್ಸ್ಇ:3:ಸಿಆರ್ಎಂ:333/2001-02, ದಿ:11-2-2002 ರಂದು ಷರತ್ತು ಬದ್ಧವಾದ ಆದೇಶವನ್ನು ನೀಡಿ ವಾಹನವನ್ನು ಬಿಡುಗಡೆ ಮಾಡಲಾಗಿರುತ್ತದೆ. ತದನಂತರ ವಾಹನದ ಮಾಲೀಕರು ಬ್ಯಾಂಕ್ ಗ್ಯಾರೆಂಟಿ ವಾಯಿದೆಯನ್ನು ಸಮಯಕ್ಕೆ ಸರಿಯಾಗಿ ವಿಸ್ತರಿಸುತ್ತಾ ಬಂದಿರುತ್ತಾರೆ. ನಂತರ ದಿ:26-11-2005, 7-01-2006, 2-02-2006, 16-02-2006, 01-02-2007, 1-03-2007, 19-04-2007, 05-05-2007, 4-08-2008, 14-08-2008, 26--08-2008, 9-09-2008, 22-11-2008, 2-12-2008, 24-01-2009, 4-07-2009, 28-07-2009, 17-07-2009ರಂದು ವಿಚಾರಣೆಯನ್ನು ನಡೆಸಲಾಗಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತವೆ.

ಮೊದಲನೆ ವಿವಾದಾಂಶ: ದಿ:18-10-2001 ರಂದು ಆಟೋ ರಿಕ್ಷಾ ಸಂ:ಕೆಎ-12-4006 ರಲ್ಲಿ ಅಕ್ರಮ ಸಾರಾಯಿ ಪ್ಯಾಕೆಟ್ ಸಾಗಾಣಿಕೆಯಾಗಿದೆಯೇ ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯ ಉಲ್ಲಂಘನೆಗೆ ಬಳಸಲಾಗಿದೆಯೇ

ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನದ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನದ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ ಅಥವಾ ಇಲ್ಲವೇ,

ಮೂರನೇ ವಿವಾದಾಂಶ: ಜಪ್ತು ಪಡಿಸಲಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಇಲ್ಲವೇ?

ಒಂದನೇ ಅಂಶವನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ ಪರಿಗಣಿಸಲು ಕೆಳಕಂಡಂತೆ ಉಲ್ಲೇಖಿಸಲಾಗಿದೆ.ದಿ:5-05-2007ರಂದು ಅಭಿಯೋಗ ಪರ

ಸಾಕ್ಷಿದಾರರಾದ ಪ್ರಾ.ಸ. 1: ಶ್ರೀ ಹೆಚ್. ಗುರುಬಸವರಾಜ್, ಆರಕ್ಷಕ ಉಪ ನಿರೀಕ್ಷಕರು ಇವರು ಪ್ರಕರಣ ದಾಖಲು ಮಾಡಿದ ಅಧಿಕಾರಿಯಾಗಿದ್ದು, ಇವರು ದಿ:5-5-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ. ನಾನು ಜುಲೈ-2001 ರಿಂದ ಜನವರಿ 2002 ರವರೆಗೆ ಗೋಣಿಕೊಪ್ಪ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನೇಶ, ಕೃಷ್ಣ ಹಾಗೂ ಅತಾವುಲ್ಲಾ ಎಂಬ ಆರೋಪಿಗಳನ್ನು ನೋಡಿರುತ್ತೇನೆ.

ದಿ:18-10-2001ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸುಮಾರು 10.30 ಗಂಟೆಯ ಸಮಯದಲ್ಲಿ ಗೋಣಿಕೊಪ್ಪದ ಅರ್ವತ್ತೋಕ್ಲು ಗ್ರಾಮದ ಕಡೆಯಿಂದ ಯಾರೋ ವ್ಯಕ್ತಿಗಳು ಡ್ಯೂಪ್ಲಿಕೇಟ್ ಸಾರಾಯಿ ಪ್ಯಾಕೇಟುಗಳನ್ನು ಮಾರಾಟ ಮಾಡಿ ಅಟೋ ರಿಕ್ಷಾದಲ್ಲಿ ತರುತ್ತಿದ್ದರೆಂಬ ಮಾಹಿತಿ ಮೇರೆಗೆ ನಾನು ನಮ್ಮ ಸಿಬ್ಬಂದಿಗಳಾದ ಕ್ರೈಂ ಪಿ.ಎಸ್.ಐ ಉತ್ತಯ್ಯ, ಮುಖ್ಯ ಪೇದೆ ಲಿಂಗರಾಜು, ಪಿ.ಸಿ ಕುಟ್ಟಪ್ಪ ಹಾಗೂ ಉದಯ ಕುಮಾರ್, ಸೋಮೇಶ್, ಮೈನಾ ಕುಮಾರಿ ಇವರುಗಳನ್ನು ಕರೆದುಕೊಂಡು ಅರ್ವತ್ತೋಕ್ಲು ಗ್ರಾಮದ ಮಹೇಂದ್ರರವರ ಮನೆಯ ಹತ್ತಿರ ಕಾಯುತ್ತ ಕುಳಿತುಕೊಂಡಿದ್ದೇನು ಸಮಯ ಸುಮಾರು 10.30 ಗಂಟೆಗೆ ಗೋಣಿಕೊಪ್ಪ ಕಡೆಯಿಂದ ಒಂದು ಅಟೋರಿಕ್ಷಾ ಬರುತ್ತಿದ್ದು, ಅದನ್ನು ನಾವು ಗಮನಿಸಿ ತಡೆದು ನಿಲ್ಲಿಸಿ ನೋಡಿದಾಗ ಅದರ ಸಂ: ಕೆಎ-12-4006 ಅಗಿದ್ದು ಅದನ್ನು ಪರಿಶೀಲಿಸಿದಾಗ ಮುಂದುಗಡೆ ಒಬ್ಬ ಚಾಲಕನಿದ್ದು, ಹಿಂಬದಿ ಇಬ್ಬರು ಅಸಾಮಿಗಳು ಕುಳಿತುಕೊಂಡಿದ್ದರು, ನಂತರ ಸದರಿಯವರನ್ನು ವಿಚಾರಿಸಿದಾಗ ಸದರಿ ವಾಹನವು ಪೊನ್ನಂಪೇಟೆಯಿಂದ ಬರುತ್ತಿದ್ದುದಾಗಿ ಅದನ್ನು ಪರೀಕ್ಷಿಸಿದಾಗ ಅಟೋ ಹಿಂಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಸಾರಾಯಿ ಪ್ಯಾಕೇಟ್ ಇದ್ದದ್ದನ್ನು ತೆಗೆದು ನೋಡಲಾಗಿ 200 ಸಾರಾಯಿ ಪ್ಯಾಕೇಟ್ ಇದ್ದದ್ದು ಕಂಡು ಬಂದಿತ್ತು. ಆರೋಪಿಗಳನ್ನು ವಿಚಾರ ಮಾಡಿದಾಗ ದಿನೇಶ, ಕೃಷ್ಣ ಮತ್ತು ಅತಾವುಲ್ಲಾ ಎಂಬುದಾಗಿ ತಿಳಿಸಿರುತ್ತಾರೆ. ನಂತರ ವಿಚಾರ ಮಾಡಲಾಗಿ ಮುಕ್ಕಾಟೀರ ಇಂದಿರಾರವರ ಮನೆಯಲ್ಲಿ ತಯಾರು ಮಾಡಿ ಮಾರಾಟ ಮಾಡಲು ನಾವುಗಳೇ ಸ್ವತ: ತಂದಿದ್ದು, ಅದರ ಬಗ್ಗೆ ಯಾವುದೇ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆ. ಉಗ್ರಾಣದಲ್ಲಿ ತಯಾರಿಸಲಾದ 100 ಮಿಲಿಯ ಆರೋಗ್ಯಕ್ಕೆ ಹಾನಿಕರ ಇನ್ನು ಮುಂತಾದ ಮುದ್ರಿತ ಪದಗಳಿದ್ದು, ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸಾರಾಯಿ ಪ್ಯಾಕೇಟುಗಳನ್ನು ಅಮಾನತ್ತು ಪಡಿಸಿಕೊಂಡು ಸ್ಯಾಂಪಲ್‌ಗಾಗಿ ಒಂದು ಪ್ಯಾಕೇಟನ್ನು ತೆಗೆದುಕೊಳ್ಳಲಾಯಿತು. ಅದನ್ನು ಒಂದು ಬಿಳಿ ಬಟ್ಟೆಯಲ್ಲಿ ಕಟ್ಟಿ, ಅರಗಿನಿಂದ ಸೀಲು ಮಾಡಿ ಸಹಿ ಕೂಡ ಮಾಡಿರುತ್ತೇನೆ. ಪಂಚನಾಮೆ ಕಾಲದಲ್ಲಿ ಪೂರ್ಣವಾಗಿ ವರದಿಯಲ್ಲಿ ನಮೂದು ಮಾಡಿರುತ್ತೇನೆ. ಅನಂತರ ಠಾಣೆಗೆ ಹಾಜರಾಗಿ ನಾನೇ ಸ್ವತ: ವರದಿ ಬರೆದು ಅ ವರದಿಯ ಆಧಾರದ ಮೇಲೆ ಪ್ರ.ವ.ವ.ಯನ್ನು ಗುನ್ನೆ ಸಂ:167:2001ರಂತೆ ನೋಂದಾಯಿಸಿಕೊಂಡು ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೂ ಸಲ್ಲಿಸಿರುತ್ತೇನೆ. ಪಂಚನಾಮೆ ಕಾಲದಲ್ಲಿ ಹರೀಶ್, ಹನೀಫ್ ಎಂಬ ವ್ಯಕ್ತಿಗಳ ಸಹಿಯನ್ನು ಕೂಡ ಪಡೆದುಕೊಂಡಿರುತ್ತೇನೆ. ಅ ಸಮಯದಲ್ಲಿ ಅಂದರೆ ತನಿಖಾ ಕಾಲದಲ್ಲಿ ಘಟನೆಗೆ ಸಂಬಂಧಪಟ್ಟಂತೆ 2 ಮಹಜರುಗಳನ್ನು ಮಾಡಿದ್ದು ಅದರ ನಿಶಾನೆ ಅಂದರೆ ದೂರನ್ನು ನಿಶಾನೆ ಪಿ.1 ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ಅದೇ ರೀತಿ 2 ಮಹಜರುಗಳನ್ನು ಅಂದರೆ ದಿ:18-10-2001 ರಂದು ಅರ್ವತ್ತೋಕ್ಲು ಮತ್ತು ಗೋಣಿಕೊಪ್ಪ ಮಧ್ಯದಲ್ಲಿರುವ ಜಾಗದಲ್ಲಿ ಮಹಜರು ಮಾಡಿ ಅ ಸಮಯದಲ್ಲಿ ಒಂದು ಅಟೋರಿಕ್ಷಾವನ್ನು ಹಾಗೂ ಸಾರಾಯಿ ಪ್ಯಾಕೇಟನ್ನು ವಶಪಡಿಸಿಕೊಂಡು ಅದರ ನಿಶಾನೆ ಪಿ-1 ಸಾಕ್ಷಿಯ ಸಹಿ ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ಅದೇ ರೀತಿ ದಿ:18-10-2001 ರಂದು ನಾಪೋಕ್ಲು ವ್ಯಾಪ್ತಿಗೆ ಸೇರುವ ಮುಕ್ಕಾಟೀರ ಇಂದಿರಾ ರವರ ಮನೆಯ ಹತ್ತಿರ ಮಹಜರು ಮಾಡಿ ಆರೋಪಿ ಹಾಜರು ಪಡಿಸಿದ ಮೇಲೆ 175 ಸಾರಾಯಿ ಪ್ಯಾಕೇಟ್‌ಗಳನ್ನು ಹಾಗೂ ಚೀಲವನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಅದನ್ನು ನಿಶಾನೆ ಪಿ-3 ಎಂದು ಸಹಿಯನ್ನು ನಿಶಾನೆ 3-ಎ ಎಂದು ಗುರುತಿಸಲಾಯಿತು. ನಂತರ ಅಲ್ಲಿ ಆರೋಪಿಗಳ ಸ್ವಇಚ್ಛೆ ಹೇಳಿಕೆಗಳನ್ನು ಪಡೆದುಕೊಂಡು ಅದನ್ನು ಈಗ ನೋಡಿದ್ದು ನಿಶಾನೆ-4 ರಿಂದ 6 ಮತ್ತು 4ಎ, 5ಎ ಮತ್ತು 6ಎ ಸಾಕ್ಷಿಯ ಸಹಿಗಳನ್ನು ಗುರುತಿಸಲಾಯಿತು.

ಪ್ರ.ವ.ವ. ಯನ್ನು ನೋಡಿದ್ದು ಅದನ್ನು ನಿಶಾನೆ ಪಿ-7 ಎಂದು ಗುರುತಿಸಲಾಯಿತು. ನಂತರ ಎಲ್ಲಾ ಆರೋಪಿಗಳನ್ನು ದಸ್ತಗಿರಿ ಮಾಡಿ (1, 2, 3) ರಿಮ್ಯಾಂಡ್ ಅರ್ಜಿ ಬರೆದು ಸಿಬ್ಬಂದಿ ಜೊತೆಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ನಂತರ ಒಂದು ವರದಿಯನ್ನು ತಯಾರಿಸಿ ನ್ಯಾಯಾಲಯದ ಆದೇಶ ಹಾಗೂ ಅಬಕಾರಿ ಅಧೀಕ್ಷಕರ ಆದೇಶವನ್ನು ಪಡೆದು ವ್ಯಾಪ್ತಿ ಆಧಾರದ ಮೇಲೆ ಪ್ರಕರಣವನ್ನು ವಿರಾಜಪೇಟೆ ಅಬಕಾರಿ ನಿರೀಕ್ಷಕರವರಿಗೆ ವಹಿಸಿ ಕೊಟ್ಟಿರುತ್ತೇನೆ.

ಪಾಟಿ ಸವಾಲು- ಕೆ.ಎಂ.ವಕೀಲರಿಂದ

ಈ ಮೊಕದ್ದಮೆಯಲ್ಲಿ ನಾನೇ ಸ್ವತ: ಫಿರ್ಯಾದುದಾರರಾಗಿದ್ದು, ಹಾಗೂ ಪಂಚಾಯಿತುದಾರರ ಸಮಕ್ಷಮ ಕೂಡ ನಾನೇ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಅಮಾನತುಪಡಿಸಿಕೊಂಡು ವಿದ್ಯಾಮಾನಗಳು ಈ ನ್ಯಾಯಾಲಯದ ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಹಾಜರುಪಡಿಸಿರುವುದಿಲ್ಲ. ಸದರಿ ನ್ಯಾಯಾಲಯದ ಮುಂದೆ ಎಲ್ಲಾ ಪ್ರತಿಗಳು

ನಕಲುಗಳಾಗಿರುತ್ತವೆ. ಪಂಚನಾಮೆ ಕಾಲದಲ್ಲಿ ಮಹೇಂದ್ರನ ಮನೆಯವರಾಗಲಿ ಇತರೆಯವರಾಗಲಿ ಸಾಕ್ಷಿದಾರರಾಗಿರಲಿ ಮಾಡಿರುವುದಿಲ್ಲ.

ಮಾಹಿತಿ ಬಂದ ಮೇಲೆ ಯಾರಿಂದ ಬಂದಿರುತ್ತದೆ ಎಂಬ ಬಗ್ಗೆ ನಿಖರವಾಗಿ ನನ್ನ ಫಿರ್ಯಾದಿಯಲ್ಲಿ ತಿಳಿಸಿರುವುದಿಲ್ಲ. ಮಹಜರು ಮುಗಿದ ನಂತರ ಠಾಣೆಗೆ ಹಾಜರಾಗಿ ಕೇಸು ನೊಂದಾಯಿಸಿ ಕೊಂಡು ನಂತರ ಆರೋಪಿಗಳ ಸಹಿ ಸ್ವ-ಇಚ್ಛೆ ಹೇಳಿಕೆಯನ್ನು ಮಾಡಿಕೊಳ್ಳಲಾಯಿತು. ಪಂಚಾಯಿತುದಾರರುಗಳು ಸದರಿ ಗ್ರಾಮದ ಆಸುಪಾಸಿನ ವ್ಯಕ್ತಿಗಳಾಗಿರುತ್ತಾರೆ. ನಾವು ಸ್ಥಳಕ್ಕೆ ಹೋಗುವ ಮೊದಲೇ ಪಂಚಾಯಿತುದಾರರುಗಳು ಹಾಜರಿರುತ್ತಾರೆ. ಚಾಲಕ ಮತ್ತು ಆರೋಪಿಗಳಿಬ್ಬರು ಸೇರಿ ಸಾರಾಯಿ ಮಾರಾಟ ಮಾಡುವ ವ್ಯಕ್ತಿಗಳಾಗಿರುತ್ತಾರೆ. ಹಾಗೂ ಸದರಿ ವ್ಯಕ್ತಿಗಳು ಈ ದಂದೆಯಲ್ಲಿ ಪಾಲುಗೊಂಡಿರುತ್ತಾರೆ ಎಂದು ನಮೋದಿಸಿರುತ್ತೇನೆ. ನನಗೆ ಮಹಜರಿನ ಚಕ್ಕುಬಂದಿ ಬಗ್ಗೆ ಹೇಳಲು ಸಾಧ್ಯವಿಲ್ಲ. ಆದಿನ ಮಹಜರನ್ನು ನಮ್ಮ ಠಾಣಾ ಸಿಬ್ಬಂದಿ ಬರೆದಿರುತ್ತಾರೆ. ಅದರೆ ಅವರು ಯಾರೆಂದು ನನಗೆ ನೆನಪಿರುವುದಿಲ್ಲ. ಯಾವುದೇ ಚಾಲಕ ಸಾಮಾನ್ಯವಾಗಿ ಪ್ರಯಾಣಿಕರನ್ನು ತಮ್ಮ ಆಟೋದಲ್ಲಿ ಹತ್ತಿಸಿಕೊಳ್ಳುತ್ತಾರೆಂಬುದು ಸರಿ. ಅಮಾನತು ಪಡಿಸಿಕೊಂಡ ಮುದ್ದೆ ಮಾಲೀನ ಮೇಲೆ ಮುದ್ರಿಸಿರುವ ಅಕ್ಷರಗಳು ಅಸಲಿಯೋ ಅಥವಾ ನಕಲಿಯೋ ಎಂದು ಹೇಳಲು ಸಾಧ್ಯವಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಂಲಿಲ್ಲ. ಯಾವುದೇ ತನಿಖೆಯನ್ನು ಕೈಗೊಂಡಿರಲಿಲ್ಲ, ಆರೋಪಿಗಳ ಮೇಲೆ ಸುಳ್ಳು ಮೊಕದ್ದಮೆ ಮಾಡಿರುವುದು ಸರಿಯಲ್ಲ. ಅದೇ ರೀತಿ ನಗರದಲ್ಲಿ ಸಂಚರಿಸುತ್ತಿದ್ದ ಆಟೋವನ್ನು ಮೊಕದ್ದಮೆಗೋಸ್ಕರ ನಿಗದಿಮಾಡಿದ್ದಾನೆಂದರೆ ಸರಿಯಲ್ಲ. ಆದಿನ ಆಟೋ ಚಾಲಕ ಯಾವುದೇ ಸಾರಾಯಿ ಪ್ಯಾಕೇಟುಗಳನ್ನು ಸಾಗಿಸುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿಗಳು ನಿಮ್ಮ ಮುಂದೆ ಸ್ವಇಚ್ಛೆ ಹೇಳಿಕೆಗಳನ್ನು ಕೊಟ್ಟಿದ್ದಾರೆಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಪಟ್ಟ ಸುಳ್ಳು ಆರೋಪಗಳನ್ನು ಸೃಷ್ಟಿಸುತ್ತಿರುವುದು ಸರಿಯಲ್ಲ.

ಪ್ರಾ. ಸಾ 2: ಶ್ರೀ. ಸಿ.ಎಂ. ಧನಂಜಯ, ಪಿ.ಸಿ.ಸಂ:232, ಗೋಣಿಕೊಪ್ಪ ಠಾಣೆ ಇವರು ಪ್ರಕರಣದ ಮಹಜರು ಸಾಕ್ಷಿದಾರರು, ಇವರು ದಿ:26-11-2005 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ನುಡಿದಿರುತ್ತಾರೆ. ತಾನು ಗೋಣಿಕೊಪ್ಪ ಠಾಣೆಯಲ್ಲಿ ಜೂನ್-2000 ದಿಂದ ಆರಕ್ಷಕ ರಕ್ಷಕರಾಗಿ ಸೇವೆಯಲ್ಲಿ ಇರುತ್ತೇನೆ. ನಾನು ದಿ:18-10-2001ರಂದು ಗೋಣಿಕೊಪ್ಪ ಪೋಲಿಸ್ ಠಾಣೆ ಅಪರಾಧ ಸಂ:167/2001 ರ ಎಫ್.ಐ.ಆರ್‌ನ್ನು ಠಾಣಾಧಿಕಾರಿ ಶ್ರೀ.ಗುರುಬಸವರಾಜ್ ಇವರಿಂದ ಪಡೆದು ಅವರ ಸೂಚನೆ ಮೇರೆಗೆ ವಿರಾಜಪೇಟೆ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಒಪ್ಪಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸದರಿ ಸ್ವೀಕೃತಿ ಪ್ರತಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು ಅದನ್ನು ನಾನು ಗುರುತಿಸಿದ್ದು "ಡಿಪ್ಲು.1" ಎಂದು ಗುರುತಿಸಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಇತರೆ ಯಾವುದೇ ವಿಚಾರಗಳನ್ನು ನಾನು ತಿಳಿಸಿರುವುದಿಲ್ಲ.

ಪಾಟೀ ಸವಾಲು:

ಶ್ರೀ. ಕೆ.ಡಿ.ಡಿ. ವಕೀಲರು (ದಯಾನಂದ) ಇವರಿಂದ

ದಿನಾಂಕ:18-10-2001ರಂದು ಸಂಜೆ 5.00 ಗಂಟೆಗೆ ಸದರಿ ಅಪರಾಧದ ವರದಿಯನ್ನು ಠಾಣಾಧಿಕಾರಿಯವರಿಂದ ನ್ಯಾಯಾಲಯಕ್ಕೆ ಒಪ್ಪಿಸಲು ಪಡೆದಿರುತ್ತೇನೆ. ನಂತರ 6 ಗಂಟೆಗೆ 5 ನಿಮಿಷಕ್ಕೆ ಮಾನ್ಯ ನ್ಯಾಯಾದೀಶರ ಮುಂದೆ ಹಾಜರಾಗಿ ಸದರಿ ಅಪರಾದ ವರದಿಯನ್ನು ಒಪ್ಪಿಸಿ ನಾನು ಆದಿನ ಕೋರ್ಟ್ ಪಿ.ಸಿ. ಕರ್ತವ್ಯದಲ್ಲಿ ಇರುತ್ತೇನೆ. ನಾನು ಅಲ್ಲದೇ ಇತರೆ ಪೋಲೀಸ್ ಸಿಬ್ಬಂದಿಯವರು ಠಾಣೆಯಲ್ಲಿ ಇರುತ್ತಾರೆ. ನಾನು ಸದರಿ ವರದಿಯನ್ನು ಪಡೆದು ನ್ಯಾಯಾಲಯಕ್ಕೆ ಒಪ್ಪಿಸುವಲ್ಲಿ ಯಾವುದೇ ವಿಳಂಬ ಮಾಡಿರುವುದಿಲ್ಲ.

ರಕ್ಷಣಾ ಸಾಕ್ಷಿ ಮುಖ್ಯವಿಚಾರಣೆ :ಕೆ.ಡಿ.ಡಿ. ವಕೀಲರಿಂದ (ದಯಾನಂದ ವಕೀಲರು)

ಕೆ.ಜಿ.ನಾರಾಯಣ ತಂದೆ ಗೋಪಾಲನ್, ಗ್ರಾಮ ಲೆಕ್ಕಾಧಿಕಾರಿ ಕೈಕೇರಿ, ಆದ ನಾನು ಪ್ರಕರಣದಲ್ಲಿ ಜಪ್ತಾದ ವಾಹನ ಸಂ.ಕೆಎ-12-4006 ಆಟೋ ರಿಕ್ಷಾದ ಮಾಲೀಕರಾಗಿರುತ್ತೇನೆ. ನಾನು 1998 ಅಕ್ಟೋಬರ್ ತಿಂಗಳಿನಿಂದ ಆಟೋರಿಕ್ಷಾವನ್ನು ಇಟ್ಟುಕೊಂಡಿರುತ್ತೇನೆ. ಆಟೋವನ್ನು ಪ್ರಯಾಣಿಕರನ್ನು ಸಾಗಿಸುವ ಉದ್ದೇಶಕ್ಕಾಗಿ ಡ್ರೈವರ್‌ನನ್ನು ನೇಮಕ ಮಾಡಿಕೊಂಡು ಓಡಿಸುತ್ತಿದ್ದೆ. 2001ರಲ್ಲಿ ಅತಾವುಲ್ಲಾ ಎಂಬ ಡ್ರೈವರ್‌ನು ಸದರಿ ಆಟೋವನ್ನು ಓಡಿಸುತ್ತಿದ್ದನು ಬೆಳಿಗ್ಗೆ 8.00 ಗಂಟೆಗೆ ಆಟೋವನ್ನು ತೆಗೆದುಕೊಂಡು ಹೋಗಿ ರಾತ್ರಿ 8.00 ಗಂಟೆ ಒಳಗಡೆ ಆಟೋವನ್ನು ನನ್ನ ಮನೆಗೆ ತಂದು ನಿಲ್ಲಿಸಬೇಕು ಹಾಗೂ ದಿನ ಒಂದಕ್ಕೆ ರೂ.100/-ರಂತೆ ಬಾಡಿಗೆಯನ್ನು ನೀಡಿ ಮೌಖಿಕ ಒಪ್ಪಂದದಂತೆ ಚಾಲಕನನ್ನು ನೇಮಕ ಮಾಡಿಕೊಂಡಿರುತ್ತೇನೆ. ಅಂದಾಜು 1 ವರ್ಷದಿಂದ ಸದರಿ ಚಾಲಕನು ಸದರಿ ಆಟೋವನ್ನು ಓಡಿಸುತ್ತಿರುತ್ತಾರೆ. ಕಾನೂನು ಬಾಹಿರವಾಗಿ ಯಾವುದೇ ಕೆಲಸವನ್ನು ಮಾಡದೇ ಜನ ಸಾಮಾನ್ಯರ ಸಾಗಾಣಿಕೆಗೆ ಮಾತ್ರ ಬಳಸುವಂತೆ ಸದರಿ ಚಾಲಕನಿಗೆ ಮೌಖಿಕವಾಗಿ ನಿರ್ದೇಶನ ನೀಡಿ ಮೌಖಿಕ ಷರತ್ತಿನ ಮೇಲೆ ನೇಮಕ ಮಾಡಿಕೊಂಡಿರುತ್ತೇನೆ. ಈ ಘಟನೆ ನಡೆಯುವ ಮೊದಲು ಸದರಿ ಚಾಲಕನ ಮೇಲೆ ಯಾವುದೇ ಅಪವಾದವಿರುವುದಿಲ್ಲ. ಚಾಲಕನ ಬಗ್ಗೆ ನನಗೆ 2ವರ್ಷದಿಂದ ಪರಿಚಯವಿದ್ದುದರಿಂದ ಇವನನ್ನು ಸದರಿ ಆಟೋದ

ಚಾಲಕನಾಗಿ ನೇಮಿಸಿಕೊಂಡಿರುತ್ತೇನೆ. ನನಗೆ ಗೊತ್ತಿರುವಂತೆ ಆತನ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ನಡೆದಿರುವುದು ಗೊತ್ತಿರುವುದಿಲ್ಲ.

ಸದರಿ ಘಟನೆ ಬಗ್ಗೆ ನನಗೆ ಯಾವುದು ಗೊತ್ತಿಲ್ಲ ಮೊಕದ್ದಮೆ ದಾಖಲಾದ ನಂತರ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಪ್ರಕರಣದ ಬಗ್ಗೆ ಚಾಲಕನನ್ನು ವಿಚಾರಿಸಲಾಗಿ ಇದರ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ನಾನು ಪ್ರಯಾಣಿಕರನ್ನು ಕರೆದುಕೊಂಡು ಹೋಗಿ ವಾಪಸ್ಸು ಕರೆದುಕೊಂಡು ಬಂದಿರುತ್ತೇನೆ. ಆ ಸಂದರ್ಭದಲ್ಲಿ ಪೋಲಿಸರು ಆಟೋರಿಕ್ಷಾವನ್ನು ತಡೆದು ನಿಲ್ಲಿಸಿ ಅಕ್ರಮ ಸಾರಾಯಿ ಪ್ಯಾಕೇಟು ಸಾಗಾಣಿಕೆ ಮಾಡುತ್ತಿರುವುದಾಗಿ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಇದರ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ.

ನನ್ನ ಕುಟುಂಬದಲ್ಲಿ 12 ಜನ ಸದಸ್ಯರಿದ್ದು, ಸದರಿ ಆಟೋವನ್ನು ಇವರ ಜೀವನ ನಿರ್ವಹಣೆಗಾಗಿ ಆಟೋವನ್ನು ಬಾಡಿಗೆಗೆ ಓಡಿಸಲು ಚಾಲಕನಿಗೆ ಕೊಟ್ಟಿರುತ್ತೇನೆ. ಘಟನೆ ನಡೆಯುವ ಸಮಯದಲ್ಲಿ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ, ಹುದಿಕೇರಿ ಹೋಬಳಿ, ಬಿರುನಾಣಿ ವೃತ್ತದ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ಆ ಸಂದರ್ಭದಲ್ಲಿ ನಾನು ಗೋಣಿಕೊಪ್ಪ ಟೌನಿನ ಪಾಲಿಬೆಟ್ಟ ರಸ್ತೆಯಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದೇನು. ನಾನು ದಿನಾ ಬೆಳಿಗ್ಗೆ 9.00 ಗಂಟೆಗೆ ಹೊರಟು ಕರ್ತವ್ಯ ನಿರ್ವಹಿಸಿ ಸಂಜೆ 6.00 ಗಂಟೆಗೆ ಮನೆಗೆ ಹಿಂದಿರುಗುತ್ತಿದ್ದೆನು. ಸದರಿ ಘಟನೆ ನಡೆಯುವ ಸಂದರ್ಭದಲ್ಲಿ ನನ್ನ ತಮ್ಮನ ವಿವಾಹ ನಿಶ್ಚಯ ಕಾರ್ಯಕ್ರಮಕ್ಕಾಗಿ ದಿ:17-10-2001 ರಂದು ಕೇರಳಕ್ಕೆ ಹೋಗಿದ್ದು, ದಿ:19-10-2001 ರಂದು ವಾಪಸು ಬಂದಿರುತ್ತೇನೆ. ದಿ:18-10-2001 ರಂದು ನಡೆದ ಘಟನೆ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ನಿರ್ದೋಷಿಯಾಗಿದ್ದು, ನನ್ನ ಆಟೋರಿಕ್ಷಾವನ್ನು ನನಗೆ ಬಿಡುಗಡೆಗೊಳಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ.

ಪಾಟಿ ಸವಾಲು: ಎ.ಡಿ.ಪಿ. ರವರಿಂದ

ನಾನು 1994 ರಿಂದ ಅಮ್ಮತ್ತಿಯಲ್ಲಿ 1997 ನೇ ಮೇ ತಿಂಗಳ ವರೆಗೆ ಗ್ರಾಮ ಲೆಕ್ಕಾದಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ನನ್ನ ಸಂಸಾರ ಬೇರೆಯಾಗಿ 3 ವರ್ಷವಾಗಿರುತ್ತದೆ. ಪ್ರತಿ ವರ್ಷವೂ ಸರ್ಕಾರಕ್ಕೆ ಆಸ್ಥಿ ಮತ್ತು ಋಣ ಪಟ್ಟಿ ತಖ್ತೆಯನ್ನು ಸಲ್ಲಿಸುತ್ತಿದ್ದೇನೆ. ನಾನು ಸರ್ಕಾರಿ ನೌಕರನಾಗಿದ್ದು ಯಾವುದೇ ಗೃಹುಪಯೋಗಿ, ವಾಹನಗಳಾಗಲಿ ಅಥವಾ ಇತರ ವಸ್ತುಗಳಾಗಲಿ ತೆಗೆದುಕೊಳ್ಳಬೇಕಾದರೆ ಸರ್ಕಾರದ ಅನುಮತಿ ಪಡೆದು ಕೊಳ್ಳಬೇಕೆಂದು ವಿದ್ಯಾವಂತರಾದ ನನಗೆ ತಿಳುವಳಿಕೆ ಇರುತ್ತದೆ. ವಾಹನವನ್ನು ಖರೀದಿಸಿದ ಬಗ್ಗೆ ಹಾಗೂ ಚಾಲಕನಿಗೆ ನೀಡಿದ ಬಗ್ಗೆ ಪ್ರತಿದಿನ ನಾನೂ ಯಾವುದೇ ಲೆಕ್ಕ ಜಮಾ ಮಾಡಿರುವುದಿಲ್ಲ. ನಾನೂ ಯಾವುದೇ ರಜೆ ಘೋಷಣೆ ಮಾಡಿಕೊಳ್ಳಲು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನನ್ನ ಚಾಲಕನು ಯಾವುದೇ ಕಾನೂನು ಬಾಹಿರವಾಗಿ ಚಟುವಟಿಕೆಗಳನ್ನು ನಡೆಸಿರುವುದಿಲ್ಲ, ಹಾಗೂ ಸದರಿ ವಿಚಾರ ನನ್ನ ಗಮನಕ್ಕೆ ಬಂದಿದೆ ಎಂದರೆ ಸರಿಯಲ್ಲ. ವಾಹನದ ಮಾಲೀಕ ನಾನೇ ಎಂದು ಘೋಷಿಸಿಕೊಳ್ಳಲು ಮಾಲಿಕತ್ವದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

ಆನಂತರ ಎ.ಡಿ.ಸಿ.ರವರ ಕೋರಿಕೆ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಗಿದೆ.

ಪ್ರಕರಣವನ್ನು ಮತ್ತೆ ದಿ:22-11-2008, 2-12-2008 ರಂದು ಕರೆಯಲಾಯಿತು. ವಾಹನದ ಮಾಲೀಕರಾಗಲಿ ಅವರ ಪರ ವಕೀಲರಾಗಲಿ ಹಾಜರಿಲ್ಲದ ಕಾರಣ ವಾಹನದ ಮಾಲೀಕರಿಗೆ ಅಂತಿಮ ನೋಟಿಸ್ ನೀಡಲು ಪ್ರಾಧಿಕಾರದಲ್ಲಿ ತೀರ್ಮಾನಿಸಲಾಯಿತು ಸದರಿಯವರು ನೀಡಿರುವ ಬ್ಯಾಂಕ್ ಗ್ಯಾರೆಂಟಿ ಹಣವನ್ನು ಇನ್‌ವೋಕ್ ಮಾಡಿಕೊಂಡು ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್, ಗೋಣಿಕೊಪ್ಪ ಇವರಿಂದ ದಿ:23-7-2009 ರಂದು ಡಿ.ಡಿ.ಯನ್ನು ತರೆಸಿಕೊಂಡು ದಿ:29-7-2009 ರಂದು ಆರ್.ಡಿ. ಖಾತೆಯಲ್ಲಿಡಲಾಗಿದೆ. ಪ್ರಕರಣವನ್ನು ದಿ:17-09-2009 ಕರೆಯಲಾಯಿತು. ವಾಹನದ ಮಾಲೀಕರು ಸಮಯಾವಕಾಶವನ್ನು ಕೋರಿರುತ್ತಾರೆ. ನಂತರ ದಿ:9-10-2009 ರಂದು ವಾಹನದ ಮಾಲೀಕರು ಮನವಿಯನ್ನು ಸಲ್ಲಿಸಿ ತಾನು ಆರ್ಥಿಕವಾಗಿ ತುಂಬಾ ಹಿಂದುಳಿದ ಕಾರಣ ಕೇಸು ನಡೆಸಲು ಶಕ್ತನಾಗಿರುವುದಿಲ್ಲ. ಆದುದರಿಂದ ಈಗಾಗಲೇ ಬ್ಯಾಂಕ್ ಗ್ಯಾರೆಂಟಿ ಹಣವನ್ನು ಇನ್‌ವೋಕ್ ಮಾಡಿರುವುದರಿಂದ ಇದೇ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನನ್ನ ಕೇಸನ್ನು ಮುಕ್ತಾಯಗೊಳಿಸಿಕೊಡಬೇಕೆಂದು ಕೋರಿರುತ್ತಾರೆ.

ಈ ಮೇಲ್ಕಂಡ ಹಿನ್ನೆಲೆಯಲ್ಲಿ ಪ್ರಾಧಿಕಾರದಲ್ಲಿ ವಿಮರ್ಶಿಸಲಾಗಿ ವಾಸ್ತವವಾಗಿ ಸದರಿ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ವಾಹನವನ್ನು ಇಲಾಖೆಯ ವಶಕ್ಕೆ ತೆಗೆದುಕೊಂಡು ವಿಲೇವಾರಿ ಮಾಡಿದ್ದಲ್ಲಿ ವಾಹನದ ಮಾಲೀಕರು ಈಗಾಗಲೇ ನೀಡಿರುವ ಬ್ಯಾಂಕ್‌ಗ್ಯಾರೆಂಟಿ ಮೌಲ್ಯವು ದೊರೆಯುವ ಸಾಧ್ಯತೆ ಇರುವುದಿಲ್ಲ. ಸದರಿ ಆಟೋರಿಕ್ಷಾವು 1998 ರ ಮಾದರಿಯಾಗಿದ್ದು, ಅಂದಿನಿಂದ ವಾಹನದ ಡಿಪ್ರಿಸಿಯೇಶನ್ ಬೆಲೆಯನ್ನು ಲೆಕ್ಕಾಚಾರ ಮಾಡಿ ರೂ.24,000/- ಕ್ಕೆ ನಿಗದಿಪಡಿಸಿರುತ್ತಾರೆ. ಅದರಂತೆ ಬ್ಯಾಂಕ್ ಗ್ಯಾರೆಂಟಿಯನ್ನು ಪಡೆದುಕೊಳ್ಳಲಾಗಿರುತ್ತದೆ. ಆದುದರಿಂದ ಸದರಿ ಬ್ಯಾಂಕ್‌ಗ್ಯಾರೆಂಟಿ ಹಣ (ಆರ್.ಡಿ. ಖಾತೆ)ವನ್ನು

ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವಾಗಿರುತ್ತದೆ. ಏಕೆಂದರೆ ಸದರಿ ವಾಹನದ ಮಾಲೀಕರಿಗೆ ಸೇರಿದ ಆಟೋರಿಕ್ಷಾದಲ್ಲಿ ಚಾಲಕನು ಅಕ್ರಮ ಸಾರಾಯಿ ಪ್ಯಾಕೇಟುಗಳನ್ನು ತೆಗೆದುಕೊಂಡು ಹೋಗಿರುವುದು ಧೃಡಪಟ್ಟಿರುತ್ತದೆ. ಆದುದರಿಂದ ವಾಹನದ ಮಾಲೀಕರು ನೀಡಿರುವ ಬ್ಯಾಂಕ್ ಗ್ಯಾರಂಟಿ (ಆರ್.ಡಿ.ಖಾತೆ) ಹಣವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತ ಹಾಗೂ ಯೋಗ್ಯವೆಂದು ತೀರ್ಮಾನಿಸಿ ಈ ಕೆಳಗಿನಂತೆ ಆದೇಶ.

ಆದೇಶ ಸಂ: ಇಎಕ್ಸ್ ಇ: 3:ಡಿಟಿಸಿಆರ್ ಎಂ:333:2001-02, ದಿ:29-12-2009

ಸಿ.ಎಲ್.ಜಯರಾಮ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್. ಕೊಡಗು ಜಿಲ್ಲೆ, ಮಡಿಕೇರಿಯಾದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ 43 ಬಿ ರಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ 43ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರಕ್ಷಕ ಉಪ ನಿರೀಕ್ಷಕರು, ಗೋಣಿಕೊಪ್ಪ ಠಾಣೆ ಇವರ ಮೊ.ಸಂ:167/2001, ದಿ:18-10-2001 ರಲ್ಲಿ ಅಕ್ರಮವಾಗಿ 375 X 100 ಮಿಲಿ ಸಾರಾಯಿ ಪ್ಯಾಕೇಟುಗಳನ್ನು ಮಾಡುತ್ತಿದ್ದ ಆಟೋರಿಕ್ಷಾ ಸಂ: ಕೆಎ-12-4006 ರಲ್ಲಿ ಸಾಗಾಣಿಕೆ ಮಾಡಿರುವುದರಿಂದ ಕಾನೂನು ವಿರುದ್ಧವಾಗಿ ಈ ಕೃತ್ಯದಲ್ಲಿ ಬಳಸಿದ ಆಟೋ ರಿಕ್ಷಾ ಸಂ: ಕೆಎ-12-4006 ರ ಮಧ್ಯಂತರ ಬಿಡುಗಡೆ ಸಮಯದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿಗದಿ ಪಡಿಸಿದ ಮೌಲ್ಯಕ್ಕೆ ಸಮನಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ (ಆರ್.ಡಿ.ಖಾತೆಯಲ್ಲಿ) ರೂ.24000/ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಲಾಗಿದೆ.

ಈ ಆದೇಶವನ್ನು ದಿ:23-12-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು. ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ಸಿ.ಎಲ್.ಜಯರಾಮ್,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಅನುಬಂಧ

ಅನುಬಂಧ-1

ಪಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪಿ.ಸಾ.1:ಶ್ರೀ ಹೆಚ್.ಗುರುಬಸವರಾಜು ಆರಕ್ಷಕ ಉಪನಿರೀಕ್ಷಕರು, ಗೋಣಿಕೊಪ್ಪ ಠಾಣೆ
ಪ್ರಾ.ಸಾ.2:ಶ್ರೀ ಧನಂಜಯ, ಪಿ.ಸಿ-232 , ಗೋಣಿಕೊಪ್ಪ ಠಾಣೆ.

ಅನುಬಂಧ-2

ಪಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು

1)ನಿಶಾನೆ ಪಿ1:ಮಹಜರು ಪ್ರತಿಯೊಂದಿಗಿನ ನಿವೇದನ ಪತ್ರ.
2) ನಿಶಾನೆ ಪಿ1ಎ:ಅದರ ಮೇಲಿನ ಸಹಿ
1) ನಿಶಾನೆ ಪಿ2: ಸ್ಥಳ ಮಹಜರು
4) ನಿಶಾನೆ ಪಿ2ಎ:ಅದರ ಮೇಲಿನ ಸಹಿ
5) ನಿಶಾನೆ ಪಿ3:ಸ್ವೊತು ಸ್ವಾದೀನ ಮಹಜರು
6) ನಿಶಾನೆ ಪಿ3ಎ:ಅದರ ಮೇಲಿನ ಸಹಿ
7) ನಿಶಾನೆ ಪಿ4 ರಿಂದ 6ಎ:ಆರೋಪಿಗಳ ಹೇಳಿಕೆ ಮತ್ತು ಅದರಲ್ಲಿನ ಸಹಿ
8) ನಿಶಾನೆ ಪಿ7:ಪ್ರಥಮ ವರ್ತಮಾನ ವರದಿ
9) ನಿಶಾನೆ ಪಿ7ಎ:ಅದರಲ್ಲಿನ ಸಹಿ

ಅನುಬಂಧ-3

ವಾಹನದ ಮಾಲೀಕರ ಪರವಾಗಿ ಗುರುತಿಸಲಾದ ದಾಖಲಾತಿಗಳು

ಯಾವುದು ಇಲ್ಲ

ಸಿ.ಎಲ್.ಜಯರಾಮ್,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್.36

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ ಮಡಿಕೇರಿರವರ ನ್ಯಾಯಾಲಯ

ಆದೇಶ ಸಂ:ಇಎಕ್ಸ್‌ಇ:ಡಿಟಿಸಿಆರ್:29/08-09, ದಿನಾಂಕ:19ನೇ ಜನವರಿ, 2010

ಸಿ.ಎಲ್.ಜಯರಾಮ್,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್‌ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿರ್ಯಾದುದಾರರು	ವಿರುದ್ಧ	ಅರ್ಜಿದಾರರು/ಆರೋಪಿಗಳು
ಆರಕ್ಷಕ ಉಪ ನಿರೀಕ್ಷಕರು,		ಕುಟ್ಟಂಡ ನಂದ ತಂದೆ ಉತ್ತಯ್ಯ,
ನಾಪೋಕ್ಲು ಠಾಣೆ,		ಆಟೋ ಚಾಲಕ,
ಮಡಿಕೇರಿ ಗ್ರಾಮಾಂತರ.		ಕುಂಬಳದಾಳು ಗ್ರಾಮ, ಮಡಿಕೇರಿ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು: ದಿನಾಂಕ21-04-08ರಂದು ಸಮಯ 17.15 ಗಂಟೆಗೆ ಆರಕ್ಷಕ ಉಪ ನಿರೀಕ್ಷಕರು ನಾಪೋಕ್ಲು ಠಾಣೆಯಲ್ಲಿರುವಾಗ್ಗೆ ನಾಪೋಕ್ಲು ಕಡೆಯಿಂದ ಕುಂಬಳದಾಳು ಕಡೆಗೆ ಒಂದು ಆಟೋ ರಿಕ್ಷಾದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ದೊರೆತ ಖಚಿತ ವರ್ತಮಾನದ ಮೇರೆಗೆ ಆರಕ್ಷಕ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಗಳೊಂದಿಗೆ ಪಂಚರನ್ನು ಕರೆದುಕೊಂಡು ಹೋಗುತ್ತಿರುವಾಗ್ಗೆ ಚೆರಿಯಪರಂಬು ಜಂಕ್ಷನ್ ಬಳಿ ಒಂದು ಆಟೋ ಮುಂದೆ ಹೋಗುತ್ತಿದ್ದು, ಇದನ್ನು ಬೆನ್ನಟ್ಟಿ ಹಿಡಿದು ನಿಲ್ಲಿಸಿ ಆಟೋವನ್ನು ಪರಿಶೀಲನೆ ಮಾಡಲಾಗಿ ಆಟೋ ನಂ.CRQ-9033 ಆಗಿದ್ದು, ಆಟೋರಿಕ್ಷಾದೊಳಗಡೆ ಒಂದು ಬಿಳಿಬಣ್ಣದ ಎರಡು ಪ್ಲಾಸ್ಟಿಕ್ ಬ್ಯಾಗ್ ಇದ್ದು, ಬ್ಯಾಗನ್ನು ಪರಿಶೀಲಿಸಲಾಗಿ ಅದರ ಒಳಗಡೆ ವಿಸ್ಕಿ ಹಾಗೂ ರಮ್‌ನ ಕ್ವಾಟರ್ ಬಾಟಲ್‌ಗಳಿದ್ದು ಈ ಬಗ್ಗೆ ಚಾಲಕನಾದ ಕುಟ್ಟಂಡ ನಂದ ಅಲಿಯಾಸ್ ನಾಣಯ್ಯ, ಪ್ರಾಯ 53/08ವರ್ಷ ಕುಂಬಳದಾಳು ಗ್ರಾಮರವರನ್ನು, ಇದನ್ನು ಸಾಗಿಸಲು ಸರ್ಕಾರದ ಪರವಾನಿಗೆ ಇದೆಯೋ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿದ ಮೇರೆ ಸದರಿ ಬಾಟಲಿಗಳನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಲಾಗಿ 16 ಕ್ವಾರ್ಟರ್ ಬಾಟಲಿಗಳಲ್ಲಿ ಶಾಟ್ ವಿಸ್ಕಿ ಮತ್ತು 24x180ml ನ US.XXX ರಮ್‌ಗಳ ಬಾಟಲಿಗಳಿದ್ದು ಒಟ್ಟು 40x180 ಎಂಎಲ್ ಮದ್ಯವಿದ್ದು ಇವುಗಳ ಮುಚ್ಚಳದ ಮೇಲೆ ಕರ್ನಾಟಕ ಅಬಕಾರಿ ಕಮೀಷನರ್ ಎಂದು ಲೇಬಲ್ ಅಂಟಿಸಿರುತ್ತದೆ. ಸದರಿ ಒಂದೊಂದು ಬಾಟಲಿಗಳನ್ನು ತೆಗೆದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡುವ ಬಗ್ಗೆ ಮಾದರಿಗಾಗಿ ತೆಗೆದು ಬಾಟಲಿನ ಮುಚ್ಚಳದ ಮೇಲೆ ಬಿಳಿಬಟ್ಟೆ ಸುತ್ತಿ ಎನ್‌ಡಿಪಿಎಸ್ ಎಂದು ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಗಿ ಉಳಿದ ಬಾಟಲಿಗಳನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಆರೋಪಿಯು ರಹದಾರಿ ಇಲ್ಲದೆ ಮದ್ಯವನ್ನು ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದುದು ಕಲಂ 34,43(ಎ) ಕೆಇ ಆಕ್ಟ್ ಪ್ರಕಾರ ಅಪರಾಧವಾಗಿರುವುದರಿಂದ ಆರೋಪಿ ಕುಟ್ಟಂಡ ನಂದ ಅಲಿಯಾಸ್ ನಾಣಯ್ಯ ಇವರ ವಿರುದ್ಧ ಆರಕ್ಷಕ ಉಪ ನಿರೀಕ್ಷಕರ ಪ್ರಕರಣ ಸಂಖ್ಯೆ:45/2008 ದಿನಾಂಕ21-4-08ರಂತೆ ಪ್ರಕರಣ ದಾಖಲು ಮಾಡಿಕೊಂಡು ಆರೋಪಿಯನ್ನು ದಸ್ತಗಿರಿ ಮಾಡಿ ಮದ್ಯ ಮತ್ತು ಆಟೋರಿಕ್ಷಾ ನಂ.CRQ-9033ರನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ. ನಂತರ ಮುಂದಿನ ಕ್ರಮದ ಬಗ್ಗೆ ಅಬಕಾರಿ ನಿರೀಕ್ಷಕರು, ಮಡಿಕೇರಿ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಸದರಿ ಪ್ರಕರಣದ ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು, ಮಡಿಕೇರಿ ವಲಯರವರು ತನಿಖೆಯನ್ನು ಪ್ರಾರಂಭಿಸಿ ವಶಪಡಿಸಿಕೊಂಡ 23 x 180ml UAS XXX ರಮ್‌ನಿಂದ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಉಳಿದ ಮದ್ಯವನ್ನು ಸರ್ಕಾರದ ಅಧಿಸೂಚನೆ ಸಂ:FD.06. ಪಿಇಎಸ್/2007 ದಿನಾಂಕ13-07-07ರಲ್ಲಿ ವಶಪಡಿಸಿಕೊಂಡ ಅಬಕಾರಿ ಮಾದಕ ಪದಾರ್ಥಗಳನ್ನು ನಾಶಪಡಿಸಲು ಸೂಚಿಸಿರುವುದರಿಂದ ಸದರಿ 23 x180ml ಮದ್ಯದಿಂದ ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಯನ್ನು ಹೊರತುಪಡಿಸಿ ಉಳಿದ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಬೇಕಾಗಿ ಅಬಕಾರಿ ನಿರೀಕ್ಷಕರ ಪತ್ರ ಸಂ:ಇಎಕ್ಸ್‌ಇ:ಎಂಡಿಕೆ:ಸಿಆರ್‌ಎಂ:8/08-09 ದಿನಾಂಕ14-5-2009ರಂದು ಕೋರಿಕೊಂಡ ಮೇರೆ ದಿನಾಂಕ15-6-2009ರಂದು ಆದೇಶ ಸಂ:ಇಎಕ್ಸ್‌ಇ:ಸಿಆರ್‌ಎಂ:19/08-09ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಲಾಗಿರುತ್ತದೆ.

ದಿನಾಂಕ17-12-2008ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಕೊಡಗು ಜಿಲ್ಲೆ ಮಡಿಕೇರಿ ಇವರಿಗೆ ಈ ಕಛೇರಿಯ ಸಮಸಂಖ್ಯೆಯಲ್ಲಿ ಪತ್ರ ಬರೆಯಲಾಗಿದ್ದು ಅವರಿಂದ ವಾಹನದ ಅಧಿಕೃತ ಮಾಲೀಕರ ವಿಳಾಸವನ್ನೊಳಗೊಂಡ ಬಿ-ಎಕ್ಸ್‌ಟ್ರಾಕ್ಟ್‌ನ್ನು ಕೋರಲಾಗಿದ್ದು ಅವರಿಂದ ದಿನಾಂಕ22-12-08ರ ಪತ್ರ ಸಂ:ಪ್ರ.ಸ.ಅ.ಮ:ಸಿಆರ್‌ಕ್ಯೂ: 9033/08-09ರ ಪತ್ರದಲ್ಲಿ

ಸದರಿ ವಾಹನವು ಸೇರ್ಪಡೆಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಅಬಕಾರಿ ನಿರೀಕ್ಷಕರು ಸದರಿ ವಾಹನದ ಮಾಲೀಕರನ್ನು ಪತ್ತೆಹಚ್ಚಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪುತ್ತೂರು ಮತ್ತು ಮಂಗಳೂರು ಇವರಿಗೆ ದಿನಾಂಕ6-2-09ರಂದು ಪತ್ರ ಮುಖೇನ ಬಿ-ಎಕ್ಸ್‌ಟ್ರಾಕ್ಟ್ ಕೋರಿರುತ್ತಾರೆ. ಅವರಿಂದ ಯಾವುದೇ ವರದಿಯು ಬಂದಿರುವುದಿಲ್ಲ. ಮತ್ತೊಮ್ಮೆ ಅವರಿಗೆ ದಿನಾಂಕ10-11-09ರಂದು ಪತ್ರ ಬರೆಯಲಾಗಿದ್ದು ಅವರಿಂದ ಯಾವುದೇ ಉತ್ತರ ಬಾರದಿರುವ ಕಾರಣ ಮತ್ತು ಸದರಿ ಪ್ರಕರಣದ ಕಡತದಲ್ಲಿ ಪ್ರಕರಣದ ಆರೋಪಿಯು ವಾಹನದ ಚಾಲಕ ಹಾಗೂ ಮಾಲೀಕ ಎಂದು ಪೋಲೀಸ್ ಅಧಿಕಾರಿಗಳು ನಮೂದಿಸಿದ್ದು ಈ ಬಗ್ಗೆ ಆರೋಪಿಯ ಬಳಿ ಅಬಕಾರಿ ನಿರೀಕ್ಷಕರು ಖುದ್ದಾಗಿ ಹೋಗಿ ವಿಚಾರಿಸಲಾಗಿ ತಾನು ಸದರಿ ವಾಹನವನ್ನು ಬಾಡಿಗೆ ಪಡೆದಿರುವುದಾಗಿಯೂ, ತನಗೂ ವಾಹನಕ್ಕೂ ಯಾವುದೇ ಸಂಬಂಧವಿಲ್ಲವೆಂದು ಮೌಖಿಕವಾಗಿ ತಿಳಿಸಿರುವುದಾಗಿ ಈ ಬಗ್ಗೆ ಆತನಲ್ಲಿ ಲಿಖಿತವಾಗಿ ವರದಿ ಸಲ್ಲಿಸಲು ಸೂಚಿಸಿದರೂ ಈವರೆಗೆ ಆತನು ಲಿಖಿತ ವರದಿ ನೀಡಿರುವುದಿಲ್ಲವಾಗಿ ತಿಳಿಸಿರುತ್ತಾರೆ. ಅಲ್ಲದೆ ಆಟೋರಿಕ್ಷಾವನ್ನು ಸ್ವಾಧೀನಪಡಿಸಿಕೊಂಡು ಅಂದಾಜು ಒಂದು ವರ್ಷ ಮೇಲಾಗಿದ್ದು ಈವರೆಗೂ ವಾಹನದ ಮಾಲೀಕತ್ವವನ್ನು ಸಾಭೀತುಪಡಿಸುವಲ್ಲಿ ಮಾಲೀಕರಾಗಲಿ/ ಸಂಬಂಧಪಟ್ಟವರಾಗಲಿ ಮುಂದೆ ಬಾರದ ಕಾರಣ ಸದರಿ ವಾಹನವನ್ನು ಅಕ್ರಮವಾಗಿ ಮದ್ಯವನ್ನು ಸಾಗಿಸಲು ಬಳಸಲಾಗಿತ್ತೆಂದು ಮೇಲ್ನೋಟಕ್ಕೆ ಸಾಭೀತಾಗಿರುವುದರಿಂದ ಹಾಗೂ ಸದರಿ ವಾಹನವನ್ನು ತೆರೆದ ಪ್ರದೇಶದಲ್ಲಿ ಯಾವುದೇ ಭದ್ರತೆ ಇಲ್ಲದೆ ನಿಲ್ಲಿಸಿರುವುದರಿಂದ ಇದರ ಮೌಲ್ಯವು ದಿನದಿಂದ ದಿನಕ್ಕೆ ಕಡಿಮೆಯಾಗುವ ಸಾಧ್ಯತೆಯಿರುವುದರಿಂದ ಸದರಿ ವಾಹನವನ್ನು ವಾರಸುದಾರರಿಲ್ಲದ ವಾಹನವೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯಾವುದೇ ಪ್ರಕರಣವನ್ನು ದಾಖಲು ಮಾಡುವಲ್ಲಿ ಆರೋಪಿಗಳು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಗಳು ಇಲ್ಲದಿದ್ದಲ್ಲಿ ಹಾಗೂ ವಾಹನವನ್ನು ಜಪ್ತು ಮಾಡಲಾದ ಒಂದು ತಿಂಗಳೊಳಗಾಗಿ ಯಾವುದೇ ವ್ಯಕ್ತಿಯು ವಾಹನಕ್ಕೆ ಸಂಬಂಧಿಸಿದ ಕಾನೂನುಬದ್ಧ ದಾಖಲಾತಿಗಳೊಂದಿಗೆ ನಿರೀಕ್ಷಕರ ಕಛೇರಿಗಾಗಲಿ, ಅಥವಾ ಪ್ರಾಧಿಕಾರಕ್ಕಾಗಲಿ ಅರ್ಜಿ ಸಲ್ಲಿಸದಿದ್ದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ಆದುದರಿಂದ 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಲು ಸಾಧ್ಯವಾಗದ ಕಾರಣ ಸದರಿ ಆಟೋ ರಿಕ್ಷಾ ಸಂಖ್ಯೆ CRQ-9033ರನ್ನು ವಾರಸುದಾರರಿಲ್ಲದ ಸ್ವತ್ತೆಂದು ಪರಿಗಣಿಸಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ ಮತ್ತು ಅಬಕಾರಿ ನಿರೀಕ್ಷಕರ ಕೋರಿಕೆಯಂತೆ ಸದರಿ ವಾಹನವನ್ನು ಯಾವುದೇ ಭದ್ರತೆಯಿಲ್ಲದೆ ತೆರೆದ ಪ್ರದೇಶದಲ್ಲಿ ನಿಲ್ಲಿಸಿದ್ದು ಕೊಡಗಿನ ಹವಾಮಾನದ ವೈಪರೀತ್ಯಕ್ಕೆ ಇನ್ನೂ ಹೆಚ್ಚುಸಮಯ ನಿಲ್ಲಿಸಿದಲ್ಲಿ ಸರ್ಕಾರಕ್ಕೆ ಬರುವ ಆದಾಯವು ಕಡಿಮೆಯಾಗುವ ಸಾಧ್ಯತೆಯಿರುವುದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ತೀರ್ಮಾನಿಸಲಾಗಿ ಈ ಕೆಳಕಂಡ ಆದೇಶ.

ಆದೇಶ ಸಂ:ಇಎಕ್ಸ್‌ಇ:ಡಿಟಿಸಿಆರ್:29/08-09 ದಿನಾಂಕ:19ನೇ ಜನವರಿ, 2010

ಸಿ.ಎಲ್.ಜಯರಾಮ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ 43(ಎ)ನಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಲು ಸಾಧ್ಯವಾಗದ ಕಾರಣ ಆರಕ್ಷಕ ಉಪ ನಿರೀಕ್ಷಕರು ನಾಪೋಕ್ಲು ಠಾಣೆ ಇವರ ಮೊಕದ್ದಮೆ ಸಂ:45/08 ದಿನಾಂಕ21-04-08ರಲ್ಲಿ ಜಪ್ತು ಪಡಿಸಿರುವ ವಾಹನ ಆಟೋ ರಿಕ್ಷಾ ಸಂಖ್ಯೆ CRQ-9033ರನ್ನು ವಾರಸುದಾರರಿಲ್ಲದ ಸ್ವತ್ತೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965ರ 43(ಸಿ)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದರಿ ಮುಟ್ಟುಗೋಲಾದ ವಾಹನವನ್ನು ಈ ಆದೇಶದ 30 ದಿನಗಳ ನಂತರ ಕರ್ನಾಟಕ ಅಬಕಾರಿ(ಮುಟ್ಟುಗೋಲು ಸ್ವತ್ತುಗಳ ವಿಲೇವಾರಿ) ನಿಯಮ 1967ರ ಅನುಸಾರ ಬಹಿರಂಗ ಹರಾಜು ಮೂಲಕ ವಿಲೇಗೊಳಿಸುವುದಾಗಿ ಇಂದು ಅಂದರೆ 19-01-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್.146

III -F12-(0)

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ ಮಡಿಕೇರಿರವರ ನ್ಯಾಯಾಲಯ

ಆದೇಶ ಸಂ:ಇಎಕ್ಸ್‌ಇ:ಡಿಟಿಸಿಆರ್:47/08-09, ದಿನಾಂಕ:24ನೇ ಫೆಬ್ರವರಿ, 2010

ಸಿ.ಎಲ್.ಜಯರಾಮ್,
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್‌ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿರ್ಯಾದುದಾರರು — ವಿರುದ್ಧ — **ಅರ್ಜಿದಾರರು/ಆರೋಪಿಗಳು**

ಆರಕ್ಷಕ ಉಪ ನಿರೀಕ್ಷಕರು,
ಶನಿವಾರಸಂತೆ ಪೋಲೀಸ್ ಠಾಣೆ,
ಶನಿವಾರಸಂತೆ.

1) ಡಿ.ಎಸ್.ನಟೇಶ@ನಟ ತಂದೆ ಪೌತಿ ಸಣ್ಣಪ್ಪಶೆಟ್ಟಿ ಜಾಗೇನಹಳ್ಳಿ ಗ್ರಾಮ,
2) ನವೀನ ತಂದೆ ಡೋಬಿ ಪ್ರಕಾಶ್, ಮಾರುತಿ ಓಮ್ನಿ ಚಾಲಕ ಸಂ: ಕೆಎ-20 ಎಂ-8484, ಒಡೆಯನಪುರ ಗ್ರಾಮ.
3) ವಿ.ಪಿ.ಮಹೇಶ್ ತಂದೆ ಪುಟ್ಟಶೆಟ್ಟಿ, ಚಾಲಕ ವೃತ್ತಿ, ಗೋಪಾಲಪುರ ಗ್ರಾಮ.
4) ಕೃಷ್ಣಪ್ಪ, ವಿಳಾಸ ತಿಳಿದಿರುವುದಿಲ್ಲ.
5) ಡಿ.ಎಸ್.ಸುರೇಶ್ ತಂದೆ ಪೌತಿ ಸಣ್ಣಪ್ಪ ಶೆಟ್ಟಿ ವ್ಯವಸಾಯ ವೃತ್ತಿ, ಜಾಗೇನಹಳ್ಳಿ ಗ್ರಾಮ.

ಪ್ರಕರಣದ ಮುಖ್ಯಾಂಶಗಳು: ದಿನಾಂಕ17-01-08ರಂದು ಸಮಯ ಸಂಜೆ 6.45 ಗಂಟೆಗೆ ಶನಿವಾರಸಂತೆ ಪೋಲೀಸ್ ಠಾಣಾ ಸರಹದ್ದಿನ ಮುಳ್ಳೂರು ಗ್ರಾಮದ 'ಕೆರೆಯ ಹತ್ತಿರ ಶನಿವಾರಸಂತೆ ಕಡೆಯಿಂದ ಕೆಎ-13 ಹೆಚ್-1878ರ ಸುಝುಕಿ ಮೋಟಾರು ಬೈಕಿನಲ್ಲಿ ಮುಳ್ಳೂರು ಗ್ರಾಮದ ವಾಸಿ ಸಂತೋಷ್ ಎಂಬುವವರು ಮನೆಗೆ ಹೋಗುತ್ತಿರುವಾಗ ಮುಳ್ಳೂರು ಕಡೆಯಿಂದ ಶನಿವಾರಸಂತೆ ಕಡೆಗೆ ಕೆಎ-20 ಎಂ-8484ರ ಮಾರುತಿ ಓಮ್ನಿ ಕಾರನ್ನು ಅದರ ಚಾಲಕ ಅತೀ ವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಬೈಕಿಗೆ ಡಿಕ್ಕಿಹೊಡೆಸಿ ಬೈಕ್ ಸವಾರ ಸಂತೋಷ್ ಎಂಬುವವರಿಗೆ ರಕ್ತ ಗಾಯಪಡಿಸಿ ಸ್ಥಳದಲ್ಲಿಯೇ ವಾಹನವನ್ನು ಬಿಟ್ಟು ಓಡಿಹೋಗಿದ್ದು, ಸದರಿ ಕಾರಿನಲ್ಲಿ ಜಾಗೇನಹಳ್ಳೀ ಗ್ರಾಮದ ಸಣ್ಣಪ್ಪಶೆಟ್ಟಿ ರವರ ಮಗ ಪ್ರಾಯ 31ರ ನಟೇಶ @ ನಟ ಎಂಬುವವರನ್ನು ಗ್ರಾಮಸ್ಥರು ಸ್ಥಳದಲ್ಲಿಯೇ ಹಿಡಿದುಕೊಂಡು ಗಾಯಾಳುವಿನ ತಂದೆ ಮುಳ್ಳೂರು ಗ್ರಾಮದ ಕೊಂಗೇಗೌಡರ ಮಗ ಪ್ರಾಯ 65ರ ಅಪ್ಪಯ್ಯರವರು ನೀಡಿದ ದೂರಿನ ಸಂಬಂಧ ಠಾಣಾ ಮೊಕದ್ದಮೆ ಸಂಖ್ಯೆ:6/2008 ವಿಧಿ 270,337 ಐಪಿಸಿ ರೀತಿಯ ಕೇಸು ದಾಖಲಾಗಿದ್ದು ಈ ವಿಚಾರವನ್ನು ಠಾಣಾ ಉಸ್ತುವಾರಿಯಲ್ಲಿದ್ದ ಮುಖ್ಯ ಕಾಜೀಲ ಸಂಖ್ಯೆ:175 ಹರೀಶ್ ಎಂಬುವವರ ದೂರವಾಣಿಯ ಮೂಲಕ ತಿಳಿಸಿದ ಮೇರೆಗೆ ಆರಕ್ಷಕ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಪೋಲೀಸ್ ಇಲಾಖಾ ಜೀಪಿನಲ್ಲಿ ಸ್ಥಳಕ್ಕೆ ಹೋಗಿ ಮುಳ್ಳೂರು ಕಡೆಯಿಂದ ಗೋಪಾಲಪುರ ಕಡೆಗೆ ಬರುವ ರಸ್ತೆಯ ಬಲಭಾಗದ ಜಾಗೇನಹಳ್ಳಿ ಗ್ರಾಮದ ಮಾಲತೇಶ್ ರವರ ಕಾಫಿ ತೋಟದ ಬೇಲಿಗೆ ಒತ್ತಾಗಿ ಅಪಘಾತ ಪಡಿಸಿದ ಕೆಎ-20 ಎಂ-8484ರ ಮಾರುತಿ ಓಮ್ನಿ ಕಾರು ನಿಂತಿದ್ದು ಸ್ಥಳದಲ್ಲಿ ಪರಿಶೀಲಿಸಿದಾಗ ಕಾರಿನೊಳಗೆ ಅಂದಾಜು 35ಲೀ. ತುಂಬಿಸುವ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಿದ್ದು ಅವುಗಳಲ್ಲಿ ಸ್ಪಿರಿಟ್ ತುಂಬಿಸಿ ಮುಚ್ಚಳಕ್ಕೆ ಬಟ್ಟೆ ಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವಾಹನದಲ್ಲಿ ಸ್ಪಿರಿಟನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಜಾಗೇನಹಳ್ಳಿ ಗ್ರಾಮದ ನಟೇಶ ಎಂಬುವವರನ್ನು ವಿಚಾರಿಸಲಾಗಿ ಸದರಿ ಸ್ಪಿರಿಟನ್ನು ಚಾಲಕ ನವೀನ ಸೇರಿ ವಿಳಾಸ ತಿಳಿಯದ ಕೃಷ್ಣಪ್ಪ ಎಂಬುವವರಿಂದ ಬೈಲುಕುಪ್ಪೆಯಿಂದ ತೆಗೆದುಕೊಂಡು ಬಂದಿರುವುದಾಗಿ ತಿಳಿಸಿದ್ದು ಈ ವಿಚಾರ ವಾಹನ ಮಾಲೀಕರಾದ ಮಹೇಶ ಎಂಬುವವರಿಗೆ ಗೊತ್ತಿದ್ದು ನಾನು ಹಾಗೂ ಚಾಲಕ ನವೀನ, ಕೃಷ್ಣಪ್ಪ ಹಾಗೂ ಇತರರು ಸೇರಿ ಸುಮಾರು 3 ತಿಂಗಳಿನಿಂದ ಅಕ್ರಮವಾಗಿ ಸ್ಪಿರಿಟನ್ನು ತಂದು ಅದಕ್ಕೆ ಬಣ್ಣ ಸೇರಿಸಿ ಬ್ರಾಂಡಿ ಶಾಪ್‌ಗಳಿಗೆ ಸರಬರಾಜು ಮಾಡುತ್ತಿದ್ದುದಾಗಿ ತಿಳಿಸಿದ ಮೇರೆಗೆ ಸದರಿ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ ಕಲಂ 32, 34, 36 ರ ರೀತ್ಯಾ ಆರಕ್ಷಕ ಉಪ ನಿರೀಕ್ಷಕರು, ಶನಿವಾರಸಂತೆ ಠಾಣೆ ಇವರ ಮೊಕದ್ದಮೆ ಸಂ:7/2008 ದಿನಾಂಕ:17-1-2008ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮುಂದಿನ ಕ್ರಮಕ್ಕಾಗಿ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ರವರ ಅನುಮತಿಯನ್ನು ಪಡೆದು ಅಬಕಾರಿ ನಿರೀಕ್ಷಕರು, ಸೋಮವಾರಪೇಟೆ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ನಂತರ ವಾಹನದ ಅಧಿಕೃತ ಮಾಲೀಕರನ್ನು ಪತ್ತೆಹಚ್ಚುವ ಸಲುವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಈ ಪ್ರಾಧಿಕಾರದ ಪತ್ರ ಸಮ ಸಂಖ್ಯೆ ದಿನಾಂಕ:9-2-2009ರಂದು ಪತ್ರ ಬರೆಯಲಾಗಿರುತ್ತದೆ. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಪತ್ರ ಸಂಖ್ಯೆ:ಪ್ರ.ಸ.ಅ.ಮ:ಕೆ. ಎ.20.ಎಂ-8484/2008-09, ದಿನಾಂಕ:13-2-2009ರಲ್ಲಿ ವಾಹನದ ಮಾಲೀಕರ ಹೆಸರು ವಿಳಾಸ ಮತ್ತು ವಾಹನದ ವಿವರವನ್ನೊಳಗೊಂಡ ಬಿ ಎಕ್ಸ್‌ಟ್ರಾಕ್ಟನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದ ತನಿಖಾಧಿಕಾರಿಗಳಾದ ಅಬಕಾರಿ ನಿರೀಕ್ಷಕರು, ಸೋಮವಾರಪೇಟೆ ವಲಯರವರು ತನಿಖೆಯನ್ನು ಪ್ರಾರಂಭಿಸಿ ವಶಪಡಿಸಿಕೊಂಡ 35ಲೀಟರಿನ 8 ಪ್ಲಾಸ್ಟಿಕ್ ಕ್ಯಾನುಗಳಲ್ಲಿನ ಮದ್ಯಸಾರದಿಂದ ಪ್ರತಿ ಕ್ಯಾನಿನಿಂದ 180ml ನಂತೆ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಉಳಿದ ಮದ್ಯಸಾರವನ್ನು ಸರ್ಕಾರದ ಅಧಿಸೂಚನೆ ಸಂ:FD.06. ಪಿಇಎಸ್/2007 ದಿನಾಂಕ:13-07-07ರಲ್ಲಿ ಆದೇಶದಂತೆ ವಶಪಡಿಸಿಕೊಂಡ ಅಬಕಾರಿ ಮಾದಕ ಪದಾರ್ಥಗಳನ್ನು ನಾಶಪಡಿಸಲು ಸೂಚಿಸಿರುವುದರಿಂದ ಸದರಿ 35ಲೀಟರಿನ 8 ಪ್ಲಾಸ್ಟಿಕ್ ಕ್ಯಾನುಗಳ ಮದ್ಯಸಾರದಿಂದ ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಯನ್ನು ಹೊರತುಪಡಿಸಿ ಉಳಿದ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಅದೇಶ ನೀಡಬೇಕಾಗಿ ಅಬಕಾರಿ ನಿರೀಕ್ಷಕರ ಪತ್ರ ಸಂ:ಇಎಕ್ಸ್‌ಇ:ಸೋ.ಪೇಟೆ.ವಲಯ:ಮುಟ್ಟುಗೋಲು:2/08-09 ದಿನಾಂಕ:18-5-2009ರಂದು ಕೋರಿಕೊಂಡ ಮೇರೆ ದಿನಾಂಕ:29-5-2009ರಂದು ಆದೇಶ ಸಂ:ಇಎಕ್ಸ್‌ಇ:ಸಿಆರ್‌ಎಂ:18/08-09ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಲಾಗಿರುತ್ತದೆ.

ತದನಂತರ ಬಿ ಎಕ್ಸ್‌ಟ್ರಾಕ್ಟ್‌ನಲ್ಲಿದ್ದಂತೆ ಶ್ರೀ ರಹೀಂ, ತಾಯಿ ಖತೀಜ, ಒಡೆಯನಪುರ ಗ್ರಾಮ, ಗೋಪಾಲಪುರ ಅಂಚೆ, ಸೋಮವಾರಪೇಟೆ ತಾಲ್ಲೂಕು ಇವರು ಪ್ರಕರಣ ದಾಖಲಿಸುವ ಸಮಯದಲ್ಲಿ ವಾಹನದ ಮಾಲೀಕರಾಗಿದ್ದು ಇವರಿಗೆ ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:10-8-09ರಂದು ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965ರ ಕಲಂ 43 ಬಿ ರ ರೀತ್ಯಾ ಕಾರಣ ಕೇಳಿ ನೋಟೀಸು ನೀಡಿ ನೋಟೀಸು ತಲುಪಿದ ಹತ್ತು ದಿವಸದ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಸಮಜಾಯಿಷಿ ನೀಡಬೇಕೆಂದು ತಪ್ಪಿದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ಕಾರಣ ಕೇಳಿ ನೋಟೀಸನ್ನು ಅಬಕಾರಿ ಉಪ ನಿರೀಕ್ಷಕರು, ಸೋಮವಾರಪೇಟೆ ವಲಯರವರು ಖುದ್ದಾಗಿ ರಹೀಂ ರವರ ಮನೆಗೆ ಭೇಟಿ ನೀಡಿ, ರಹೀಂ ರವರು ಮನೆಯಲ್ಲಿ ಇಲ್ಲದ ಕಾರಣ ಅವರ ತಾಯಿಯೊಂದಿಗೆ ಮೊಬೈಲ್ ಮುಖಾಂತರ ಮಾತನಾಡಿ ಮನೆಯಲ್ಲಿದ್ದ ಅವರ ತಂಗಿಯವರಾದ ಸಮೀನ ರವರಿಗೆ ಕಾರಣ ಕೇಳಿ ನೋಟೀಸನ್ನು ಜಾರಿ ಮಾಡಿ ಅವರಿಂದ ಸ್ವೀಕೃತಿಯನ್ನು ಪಡೆದು ಅಬಕಾರಿ ಉಪ ನಿರೀಕ್ಷಕರ ಪತ್ರ ಸಂ:ಸೋ.ಪೇಟೆ:ಕಾರಣ ಕೇಳಿ ನೋಟೀಸ್:2:09-10 ದಿನಾಂಕ:15-10-09ರಂದು ವರದಿಯೊಂದಿಗೆ ಸ್ವೀಕೃತಿ ಪ್ರತಿಯನ್ನು ಲಗತ್ತಿಸಿ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಮಾರುತಿ ಓಮ್ನಿ ಕೆಎ-20 ಎಂ-8484 ರನ್ನು ಸ್ವಾಧೀನಪಡಿಸಿಕೊಂಡು ಅಂದಾಜು ಎರಡು ವರ್ಷ ಮೇಲಾಗಿದ್ದು ಈವರೆಗೂ ವಾಹನದ ಮಾಲೀಕತ್ವವನ್ನು ಸಾಭೀತುಪಡಿಸುವಲ್ಲಿ ಮಾಲೀಕರಾಗಲಿ/ ಸಂಬಂಧಪಟ್ಟವರಾಗಲಿ ಮುಂದೆ ಬಾರದ ಕಾರಣ ಮತ್ತು ದಿನಾಂಕ:10-8-09ರಂದು ನೀಡಿರುವ ಕಾರಣ ಕೇಳಿ ನೋಟೀಸಿಗೂ ಸಹ ಯಾವುದೇ ಉತ್ತರವನ್ನು ನೀಡಲು ಪ್ರಾಧಿಕಾರಕ್ಕೆ ಹಾಜರಾಗದ ಕಾರಣ ಸದರಿ ವಾಹನವನ್ನು ಅಕ್ರಮವಾಗಿ ಮದ್ಯಸಾರವನ್ನು ಸಾಗಿಸಲು ಬಳಸಲಾಗಿತ್ತೆಂದು ಮೇಲ್ನೋಟಕ್ಕೆ ಸಾಭೀತಾಗಿರುವುದರಿಂದ ಹಾಗೂ ಸದರಿ ವಾಹನವನ್ನು ತೆರೆದ ಪ್ರದೇಶದಲ್ಲಿ ಯಾವುದೇ ಭದ್ರತೆ ಇಲ್ಲದೆ ನಿಲ್ಲಿಸಿರುವುದರಿಂದ ಇದರ ಮೌಲ್ಯವು ದಿನದಿಂದ ದಿನಕ್ಕೆ ಕಡಿಮೆಯಾಗುವ ಸಾಧ್ಯತೆಯಿರುವುದರಿಂದ ಸದರಿ ವಾಹನವನ್ನು ವಾರಸುದಾರರಿಲ್ಲದ ಸ್ವೊತ್ತೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಅಬಕಾರಿ ನಿರೀಕ್ಷಕರು, ಸೋಮವಾರಪೇಟೆ ವಲಯ ರವರ ವರದಿ ಪತ್ರ ಸಂ:ಸೋ.ಪೇಟೆ:ವಲಯ:ಮುಟ್ಟುಗೋಲು/ಡಿ.ಟಿ.ಸಿ.ಆರ್/ 47/08-09, ದಿನಾಂಕ:10-2-2010ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಯಾವುದೇ ಪ್ರಕರಣವನ್ನು ದಾಖಲು ಮಾಡುವಲ್ಲಿ ಆರೋಪಿಗಳು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಗಳು ಇಲ್ಲದಿದ್ದಲ್ಲಿ ಹಾಗೂ ವಾಹನವನ್ನು ಜಪ್ತು ಮಾಡಲಾದ ಒಂದು ತಿಂಗಳೊಳಗಾಗಿ ಯಾವುದೇ ವ್ಯಕ್ತಿಯು ವಾಹನಕ್ಕೆ ಸಂಬಂಧಿಸಿದ ಕಾನೂನುಬದ್ಧ ದಾಖಲಾತಿಗಳೊಂದಿಗೆ ನಿರೀಕ್ಷಕರ ಕಛೇರಿಗಾಗಲಿ, ಅಥವಾ ಪ್ರಾಧಿಕಾರಕ್ಕಾಗಲಿ ಅರ್ಜಿ ಸಲ್ಲಿಸದಿದ್ದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ. ಆದುದರಿಂದ 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಸದರಿ ಮಾರುತಿ ಓಮ್ನಿ ಕೆಎ-20 ಎಂ-8484ರನ್ನು ವಾರಸುದಾರರಿಲ್ಲದ ಸ್ವೊತ್ತೆಂದು ಪರಿಗಣಿಸಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ ಮತ್ತು ಅಬಕಾರಿ ನಿರೀಕ್ಷಕರ ಕೋರಿಕೆಯಂತೆ

ಸದರಿ ವಾಹನವನ್ನು ಯಾವುದೇ ಭದ್ರತೆಯಿಲ್ಲದ ಕೇವಲ ಪ್ರದೇಶದಲ್ಲಿ ನಿಲ್ಲಿಸಿದ್ದು ಕೊಡಗಿನ ಹವಾಮಾನದ ವೈಪರೀತ್ಯಕ್ಕೆ ಇನ್ನೂ ಹೆಚ್ಚುಸಮಯ ನಿಲ್ಲಿಸಿದಲ್ಲಿ ಸರ್ಕಾರಕ್ಕೆ ಬರುವ ಆದಾಯವು ಕಡಿಮೆಯಾಗುವ ಸಾಧ್ಯತೆಯಿರುವುದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ತೀರ್ಮಾನಿಸಲಾಗಿ ಈ ಕೆಳಕಂಡ ಆದೇಶ.

ಆದೇಶ ಸಂ:ಇಎಕ್ಸ್ಇ:ಡಿಟಿಸಿಆರ್:47/08-09 ದಿನಾಂಕ:24ನೇ ಫೆಬ್ರವರಿ, 2010

ಸಿ.ಎಲ್.ಜಯರಾಮ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ 43(ಎ)ನಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, 43(ಬಿ)ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಆರಕ್ಷಕ ಉಪ ನಿರೀಕ್ಷಕರು, ಶನಿವಾರಸಂತೆ ಠಾಣೆ ಇವರ ಮೊಕದ್ದಮೆ ಸಂ:7/08 ದಿನಾಂಕ:17-01-08ರಲ್ಲಿ ಜಪ್ತು ಪಡಿಸಿರುವ ವಾಹನ ಮಾರುತಿ ಓಮ್ನಿ ಕೆಎ-20 ಎಂ-8484ರನ್ನು ವಾರಸುದಾರರಿಲ್ಲದ ಸ್ವತ್ತೆಂದು ಪರಿಗಣಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ 1965ರ 43(ಸಿ)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸದರಿ ಮುಟ್ಟುಗೋಲಾದ ವಾಹನವನ್ನು ಈ ಆದೇಶದ 30 ದಿನಗಳ ನಂತರ ಕರ್ನಾಟಕ ಅಬಕಾರಿ(ಮುಟ್ಟುಗೋಲು ಸ್ವತ್ತುಗಳ ವಿಲೇವಾರಿ) ನಿಯಮ 1967ರ ಅನುಸಾರ ಬಹಿರಂಗ ಹರಾಜು ಮೂಲಕ ವಿಲೇಗೊಳಿಸುವುದಾಗಿ ಇಂದು ಅಂದರೆ ದಿನಾಂಕ:24-02-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಅಧಿಕೃತ ಅಧಿಕಾರಿಗಳು ಹಾಗೂ
ಪಿ.ಆರ್.324 ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು, ಕೊಡಗು ಜಿಲ್ಲೆ, ಮಡಿಕೇರಿ ಇವರ ನ್ಯಾಯಾಲಯದಲ್ಲಿ

ಸಂಖ್ಯೆ:ಇಎಕ್ಸ್ಇ:ಡಿಟಿಸಿಆರ್ಎಂ:179:2003-04, ದಿನಾಂಕ:23ನೇ ಮಾರ್ಚ್, 2010

ಉಪಸ್ಥಿತರು: ಸಿ.ಎಲ್.ಜಯರಾಮ್,
ಅಧಿಕೃತ ಅಧಿಕಾರಿಗಳು ಹಾಗೂ
ಅಬಕಾರಿ ಉಪ ಆಯುಕ್ತರು,
ಕೊಡಗು ಜಿಲ್ಲೆ, ಮಡಿಕೇರಿ.

ಫಿರ್ಯಾದುದಾರರು	ವಿರುದ್ಧ	**ಆರೋಪಿಗಳು**
ಅಬಕಾರಿ ಉಪ ನಿರೀಕ್ಷಕರು, ಸಂಚಾರ ದಳ, ವಿರಾಜಪೇಟೆ		ಐಚಂಡ.ಪಿ.ಸುನಿಲ್, ತಂದೆ ಪೊನ್ನಪ್ಪ, ದೇವಣಗೇರಿ ಗ್ರಾಮ ವಿರಾಜಪೇಟೆ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು: ದಿನಾಂಕ:17-2-2004ರಂದು ಅಬಕಾರಿ ಸಂಚಾರ ದಳ, ಅಬಕಾರಿ ಉಪ ನಿರೀಕ್ಷಕರು ಸಿಬ್ಬಂದಿಯೊಂದಿಗೆ ಸಾಯಂಕಾಲ 6.15ಗಂಟೆಗೆ ಕರ್ತವ್ಯದ ಮೇಲೆ ದೇವಣಗೇರಿ ಕಡೆಗೆ ನಡೆದುಕೊಂಡು ಹೋಗುತ್ತಿರುವಾಗ ಎದುರಾಗಿ ದೂರದಿಂದ ಹೀರೋ ಹೋಂಡ ಸ್ಪ್ಲೆಂಡರ್ ಬೈಕ್‌ನಲ್ಲಿ ಬರುತ್ತಿದ್ದ ವ್ಯಕ್ತಿಯು ಅಬಕಾರಿ ಅಧಿಕಾರಿಗಳನ್ನು ಕಂಡಕೂಡಲೇ ಬೈಕನ್ನು ಮತ್ತು ಬೈಕಿನಲ್ಲಿದ್ದ ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಪಕ್ಕದ ತೋಟದೊಳಗೆ ಓಡಿಹೋದನು. ಇವನನ್ನು ಓಡಿಸಿ ಹಿಂಬಾಲಿಸಿಕೊಂಡು ಹೋಗಲಾಗಿ ವ್ಯಕ್ತಿಯನ್ನು ಹಿಡಿಯಲು ಆಗಲಿಲ್ಲ. ನಂತರ ಅವನು ಬಿಟ್ಟುಹೋದ ಚೀಲವನ್ನು ಬಿಚ್ಚಿ ಪರಿಶೀಲಿಸಲಾಗಿ ಅದರಲ್ಲಿ 150x100 ಮಿಲಿಯ ಸಾರಾಯಿ ಪ್ಯಾಕೆಟ್ ಇರುವುದು ಕಂಡುಬಂತು. ಇದರಿಂದ ರಾಸಾಯನಿಕ ಪರೀಕ್ಷೆಗೆಂದು 1x100 ಮಿಲಿಯ ಸಾರಾಯಿ ಪ್ಯಾಕೆಟನ್ನು ಬಟ್ಟೆ ಸುತ್ತಿ ದಾರದಿಂದ ಕಟ್ಟಿ ಇಲಾಖೆ ಮೊಹರು ಮಾಡಿರುತ್ತಾರೆ. ಓಡಿಹೋದ ಆರೋಪಿಯ ಬಗ್ಗೆ ಸ್ಥಳದಲ್ಲಿದ್ದವರನ್ನು ವಿಚಾರಿಸಿದಾಗ ಓಡಿ ಹೋದವನು ಐಚಂಡ.ಪಿ.ಸುನಿಲ್, ತಂದೆ ಪೊನ್ನಪ್ಪ, ಪ್ರಾಯ ಅಂದಾಜು 25 ವರ್ಷ ಎಂಬುದಾಗಿ ಪಂಚಾಯತುದಾರರು ತಿಳಿಸಿರುವುದರಿಂದ. ಆದರಂತೆ ಸಾರಾಯಿ ಪ್ಯಾಕೆಟ್ ಮತ್ತು ಹೀರೋ ಹೋಂಡ ಸ್ಪ್ಲೆಂಡರ್ ಬೈಕ್ ನಂ.ಕೆಎ-12-ಹೆಚ್-1219ರನ್ನು ಒಳಪಡಿಸಿಕೊಂಡು ಮೊಕದ್ದಮೆ ಸಂ.13/2003-04, ದಿನಾಂಕ:17/2/04ರಂತೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಮುಂದಿನ ಕ್ರಮಕ್ಕೋಸ್ಕರ ಅಬಕಾರಿ ಉಪ ನಿರೀಕ್ಷಕರು, ವಿರಾಜಪೇಟೆ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ಜಪ್ತುಪಡಿಸಿಕೊಂಡ ಸ್ವೊತ್ತುಗಳು

1. ಹೀರೋ ಹೋಂಡ ಸ್ಪ್ಲೆಂಡರ್ ಬೈಕ್ ಸಂ.ಕೆಎ-12-ಹೆಚ್-1219, ಚಾಸಿಸ್ ಸಂ.03D20 F.52364
2. ಸಾರಾಯಿ ಪ್ಯಾಕೆಟ್ 150x100ಮಿಲಿ

ದಿನಾಂಕ:28-2-04ರಂದು ವಾಹನದ ಮಾಲೀಕರಾದ ಶ್ರೀ ಸಿ.ಎಸ್.ಉದಯ, ಬಿನ್ ಸುಬ್ಬಯ್ಯ, ಚೆಂಬೆಬೆಳ್ಳೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು ರವರ ಅವರ ಪರ ವಕೀಲರಿಂದ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಹೀರೋ ಹೋಂಡ ಸ್ಪ್ಲೆಂಡರ್ ಬೈಕ್‌ಗೆ ಸಂಬಂಧಪಟ್ಟ ಅಧಿಕೃತ ಮಾಲೀಕರನ್ನು ಪತ್ತೆಗಾಗಿ ಸದರಿ ವಾಹನದ ಬಿ ಎಕ್ಸ್‌ಟ್ರಾಕ್ಟ್ ಪಡೆಯಲು ಕೊಡಗು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗೆ ಇದೇ ಸಮ ಸಂಖ್ಯೆ:179/2003-04, ದಿನಾಂಕ:6-4-2004ರಂದು ಪತ್ರ ಮುಖೇನ ಕೋರಲಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಪತ್ರ ಸಂ:ಪ್ರಾ.ಸಾ.ಅ. ಮ.ಕೆಎ.12.ಹೆಚ್.1219/04-05, ದಿನಾಂಕ:15-4-04ರಂದು ವಾಹನದ ಬಿ ಎಕ್ಸ್‌ಟ್ರಾಕ್ಟ್‌ನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಬಿ ಎಕ್ಸ್‌ಟ್ರಾಕ್ಟ್‌ನಲ್ಲಿನ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ ಸಿ.ಎಸ್.ಉದಯ, ಬಿನ್ ಸುಬ್ಬಯ್ಯ, ಚೆಂಬೆಬೆಳ್ಳೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು ಇವರಿಗೆ ಈ ಪ್ರಾಧಿಕಾರದಿಂದ ಅಬಕಾರಿ ಕಾಯ್ದೆ 1965ರ ಕಲಂ 43ಬಿ ರಡಿಯಲ್ಲಿ ಕಾರಣ ಕೇಳಿ ನೋಟೀಸನ್ನು ದಿನಾಂಕ:21-6-04ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸು ವಾಹನದ ಮಾಲೀಕರಾದ ಶ್ರೀ ಸಿ.ಎಸ್.ಉದಯ ರವರಿಗೆ ಸ್ವೀಕೃತಿಯಾಗಿದ್ದು ದಿನಾಂಕ:30-6-04ರಂದು ಅವರ ಪರ ವಕೀಲರ ಮೂಲಕ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ನೀಡಿ ವಾಹನವನ್ನು ಮಧ್ಯಂತರ ಬಿಡುಗಡೆಗೊಳಿಸಿ ಕೊಡಬೇಕಾಗಿ ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಜಪ್ತುಪಡಿಸಿಕೊಳ್ಳಲಾದ ವಾಹನ ಸಂ. ಕೆಎ.12.ಹೆಚ್.1219ಕ್ಕೆ ಇಂದಿನ ಮಾರ್ಕೆಟ್ ಮೌಲ್ಯವನ್ನು ನಿಗಧಿಪಡಿಸಲು ಇದೇ ಪತ್ರ ಸಮ ಸಂಖ್ಯೆ ದಿನಾಂಕ:19-6-04ರಲ್ಲಿ ಇಂದಿನ ಮಾರ್ಕೆಟ್ ಮೌಲ್ಯವನ್ನು ನಿಗಧಿಪಡಿಸಲು ಕೋರಿಕೊಂಡ ಹಿನ್ನಲೆಯಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಮೋಟಾರು ತನಿಖಾಧಿಕಾರಿ ವಾಹನವನ್ನು ಪರಿಶೀಲಿಸಿ ರೂ.30,200/-ಮೌಲ್ಯವನ್ನು ನಿಗಧಿಪಡಿಸಿ ದಿನಾಂಕ:24-6-04ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತದನಂತರ ಪ್ರಾಧಿಕಾರದಲ್ಲಿ ತೀರ್ಮಾನಿಸಲಾಗಿ ವಾಹನವನ್ನು ಚಾಲನೆಯ ಸ್ಥಿತಿಯಿಲ್ಲದೆ ನಿಲ್ಲಿಸಿದಲ್ಲಿ ವಾಹನವು ಕೊಡಗಿನ ಹವಾಮಾನ ವೈಪರೀತ್ಯಕ್ಕೆ ಹಾಳಾಗಿ ಮೌಲ್ಯವನ್ನು ಕಳೆದುಕೊಳ್ಳುವ ಸ್ಥಿತಿ ಇರುವುದರಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿಗಧಿಪಡಿಸಿದ ಮಾರ್ಕೆಟ್ ಮೌಲ್ಯ ರೂ.30,200/-(ಮೂವತ್ತು ಸಾವಿರದ ಎರಡುನೂರು) ಮೊತ್ತಕ್ಕೆ ಸಮನಾದ ಬ್ಯಾಂಕ್ ಗ್ಯಾರಂಟಿಯನ್ನು ಪಡೆದುಕೊಂಡು ವಾಹನದ ಮಾಲೀಕರಾದ ಶ್ರೀ ಸಿ.ಎಸ್.ಉದಯ, ಬಿನ್ ಸುಬ್ಬಯ್ಯ, ಚೆಂಬೆಬೆಳ್ಳೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು ಇವರ ವಶಕ್ಕೆ ನೀಡಲು ಆದೇಶ ಸಂ:ಇಎಕ್ಸ್‌ಇ: ಡಿಟಿಸಿಆರ್‌ಎ೦:179: 2003-04, ದಿನಾಂಕ:16-7-04ರಲ್ಲಿ ತಾತ್ಕಾಲಿಕ ನೆಲೆಯಲ್ಲಿ ಮಧ್ಯಂತರ ಬಿಡುಗಡೆಗೊಳಿಸಲಾಗಿರುತ್ತದೆ. ದಿನಾಂಕ:19-7-04ರಂದು ಸೂಕ್ತ ಸ್ವೀಕೃತಿಯನ್ನು ನೀಡಿ ವಾಹನವನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

ಪ್ರಕರಣದಲ್ಲಿ ಜಪ್ತಾದ ಸಾರಾಯಿ ಪ್ಯಾಕೇಟುಗಳನ್ನು ಪ್ರಕರಣದ ತನಿಖಾಧಿಕಾರಿಗಳು ರಾಸಾಯನಿಕ ಪರೀಕ್ಷೆಗೆ ದಿನಾಂಕ:27-11-04ರಂದು ಮಂಗಳೂರು ರಾಸಾಯನಿಕ ಕೇಂದ್ರ, ಮಂಗಳೂರು ಇಲ್ಲಿ ಒಳಪಡಿಸಿ, ವಿಶ್ಲೇಷಣಾ ವರದಿಯ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ್ದು ಸದರಿ ರಾಸಾಯನಿಕ ಪರೀಕ್ಷಾ ಫಲಿತಾಂಶದ ವರದಿಯಲ್ಲಿ ವಶಪಡಿಸಿಕೊಂಡ ಸಾರಾಯಿಯಲ್ಲಿ ಮದ್ಯಸಾರದ ಅಂಶ 22.0% ಇರುವುದಾಗಿ ದೃಢೀಕರಣ ನೀಡಿರುತ್ತಾರೆ. ಸದರಿ ರಾಸಾಯನಿಕ ಪರೀಕ್ಷೆ ಫಲಿತಾಂಶದ ವರದಿಯಲ್ಲಿ ಸಾರಾಯಿ ಎಂದು ದೃಢಪಟ್ಟಿರುವುದರಿಂದ ಆದೇಶ ಸಂ:ಸಿಆರ್‌ಎಂ:20/07-08, ದಿನಾಂಕ:21-8-07ರಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಮೇಲಿನ ವಿದ್ಯಾಮಾನಗಳನ್ನು ಅವಲೋಕಿಸಿ ಸರ್ಕಾರದ ಪರ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಹಾಗೂ ಪ್ರತಿರಕ್ಷಾ ಸಾಕ್ಷಿ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷಾಧಾರಗಳಿಂದ ಈ ಕೆಳಗಿನ ವಿವದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. **ಮೊದಲನೇ ವಿವಾದಾಂಶ:** ದಿನಾಂಕ:17-2-04ರಂದು ಹೀರೋ ಹೋಂಡ ಸ್ಪ್ಲೆಂಡರ್ ಬೈಕ್ ಸಂ. ಕೆಎ.12.ಹೆಚ್.1219ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯ್ದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2. ಎರಡನೇ ವಿವಾದಾಂಶ:ಸದರಿ ವಾಹನದ ಮಾಲೀಕರು ವಾಹನದಲ್ಲಿ ತನಗೆ ತಿಳಿಯದೆ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತುಪಡಿಸಿದ್ದಾರೆಯೇ? ಅಥವಾ ಇಲ್ಲವೇ?
3. ಮೂರನೇ ವಿವಾದಾಂಶ:ಜಪ್ತುಪಡಿಸಲಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ?ಅಥವಾ ಇಲ್ಲವೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

ಒಂದನೇ ವಿವಾದಾಂಶಕ್ಕೆ ಉತ್ತರ ಹೌದು ಎಂದಾಗುತ್ತದೆ. ಎರಡನೇ ಅಂಶಕ್ಕೆ ಉತ್ತರ ಇಲ್ಲಾ ಎಂದಾಗುತ್ತದೆ. ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಈ ಪ್ರಕರಣದಲ್ಲಿ ಲಭ್ಯವಾಗಿರುವ ಸಾಕ್ಷ್ಯಾಧಾರಗಳನ್ನು ಒಂದೊಂದಾಗಿ ಈ ಕೆಳಗಿನಂತೆ ನಾನು ಚರ್ಚಿಸಿದ್ದೇನೆ.

ಪ್ರಾ.ಸಾ. 1: ಪ್ರಾಸಿಕ್ಯೂಷನ್ ಪರ ಪ್ರಕರಣದ ಪಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ ಚಂದ್ರಶೇಖರ್, ಅಬಕಾರಿ ಉಪ ನಿರೀಕ್ಷಕರು, ಸಂಚಾರಿದಳ, ವಿರಾಜಪೇಟೆ ಇವರು ದಿನಾಂಕ:2-12-08ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರ ನೀಡುತ್ತಾ ನಾನು ಅಬಕಾರಿ ಉಪ ನಿರೀಕ್ಷಕನಾಗಿ ದಿನಾಂಕ:2-11-03ರಿಂದ 4-8-07ರ ವರೆಗೂ ವಿರಾಜಪೇಟೆ ಅಬಕಾರಿ ಸಂಚಾರಿ ದಳದಲ್ಲಿ, ಅಬಕಾರಿ ಉಪ ನಿರೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು ದಿನಾಂಕ:17-2-04ರಂದು ವಿರಾಜಪೇಟೆ ತಾಲ್ಲೂಕು ದೇವಣಗೇರಿ ಗ್ರಾಮದಲ್ಲಿ ಅಕ್ರಮವಾಗಿ ಸಾರಾಯಿ ಪ್ಯಾಕೇಟುಗಳನ್ನು ಸಾಗಾಟ ಮಾಡುತ್ತಿದ್ದಾರೆಂಬ ವರ್ತಮಾನದ ಮೇರೆಗೆ ನಾನು ನನ್ನ ಸಿಬ್ಬಂದಿಯವರೊಂದಿಗೆ ಸಂಜೆ 6.15ಗಂಟೆ ಸಮಯದಲ್ಲಿ ವಿರಾಜಪೇಟೆಯಿಂದ ದೇವಣಗೇರಿ ಕಡೆಗೆ ಹೋಗುವ ರಸ್ತೆಯಲ್ಲಿ ಅಬಕಾರಿ ಗಸ್ತು ರಸ್ತೆಕಾವಲು ಮಾಡುತ್ತಿದ್ದಾಗ ನಮ್ಮ ಎದುರಾಗಿ ಒಂದು ಹೀರೋ ಹೋಂಡ ಸ್ಪ್ಲೆಂಡರ್ ಬೈಕ್ ಬರುತ್ತಿದ್ದು ಆಸಾಮಿ ನಮ್ಮಗಳನ್ನು ಕಂಡ ಕೂಡಲೇ ಬೈಕನ್ನು ಹಾಗೂ ಬೈಕಿನಲ್ಲಿದ್ದ ಪ್ಲಾಸ್ಟಿಕ್ ಮೂಟೆಯನ್ನು ಬಿಟ್ಟು ಪಕ್ಕದ ಕಾಫಿತೋಟದಲ್ಲಿ ಓಡಿ ಹೋದನು. ನಾವುಗಳು ಆತನನ್ನು ಹಿಂಬಾಲಿಸಿಕೊಂಡು ಹೋದೆವು ಆಸಾಮಿ ಸಿಗಲಿಲ್ಲ. ನಂತರ ಹಾಜರಿದ್ದ ಪಂಚರೊಂದಿಗೆ ಬೈಕನ್ನು ಹಾಗೂ ಪ್ಲಾಸ್ಟಿಕ್ ಮೂಟೆಯನ್ನು ಬಿಚ್ಚಿ ನೋಡಲಾಗಿ ಚೀಲದಲ್ಲಿ ಸೀಲಾದ ಸಾರಾಯಿ ಪ್ಯಾಕೆಟ್‌ಗಳಿದ್ದು, ಲೆಕ್ಕ ಮಾಡಲಾಗಿ 100 ಎಂ.ಎಲ್.ನ 150 ಸಾರಾಯಿ ಪ್ಯಾಕೇಟುಗಳಿದ್ದು, ರಾಸಾಯನಿಕ ಪರೀಕ್ಷೆಗಾಗಿ 100 ಎಂ.ಎಲ್.ನ ಒಂದು ಸಾರಾಯಿ ಪ್ಯಾಕೇಟು ಮಾದರಿ ತೆಗೆದು ಪ್ಯಾಕೆಟ್‌ಗೆ ಬಟ್ಟೆ ಸುತ್ತಿ ದಾರ ಕಟ್ಟಿ ಹಾಗೂ ಚೀಲಕ್ಕೆ ದಾರ ಕಟ್ಟಿ ಇಲಾಖೆ ಸೀಲ್‌ನಿಂದ ಸೀಲುಮಾಡಲಾಯಿತು. ಹಾಗೂ ಬೈಕ್ ನಂ. ಕೆಎ.12.ಹೆಚ್.1219 ಸ್ಥಳದಲ್ಲೇ ಮಹಜರು ಮುದ್ರೆಯನ್ನು ತಯಾರಿಸಲಾಯಿತು. ಓಡಿಹೋದ ಆಸಾಮಿಯ ವಿಳಾಸವನ್ನು ಪಂಚರಲ್ಲಿ ಕೇಳಲಾಗಿ ಐಚಂಡ ಸುನಿಲ್, ತಂದೆ ಪೊನ್ನಪ್ಪ, ಪ್ರಾಯ 25 ವರ್ಷ, ದೇವಣಗೇರಿ ಗ್ರಾಮ, ವಿರಾಜಪೇಟೆ ತಾಲ್ಲೂಕು ಎಂದು ಹೇಳಿದರು. ನಂತರ ಮಹಜರು ಚೀಟಿಗಳಿಗೆ ಹಾಗೂ ಸಾರಾಯಿ ಪ್ಯಾಕೆಟ್‌ಗಳಿಗೆ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿ ಸ್ಥಳ ಮಹಜರು ನಡೆಸಲಾಯಿತು. ಅದಕ್ಕೆ ಪಂಚರ ಸಹಿ ಪಡೆಯಲಾಯಿತು. ಬೈಕ್ ಹಾಗೂ ದಾಸ್ತಾನನ್ನು ಕಛೇರಿಗೆ ತರಲಾಯಿತು. ಆಸಾಮಿಯ ವಿರುದ್ಧ ಮೊಕದ್ದಮೆ ದಾಖಲು ಮಾಡಲಾಯಿತು. ಮಹಜರು ಓದಿಸಿ ಕೇಳಲಾಗಿ ಸರಿ ಇದ್ದು ಒಪ್ಪಿ ಸಹಿ ಮಾಡಲಾಯಿತು. ಪ್ರಥಮ ವರ್ತಮಾನ ವರದಿಯನ್ನು ವಿರಾಜಪೇಟೆ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಹಾಗೂ ಅಬಕಾರಿ ಉಪ ಆಯುಕ್ತರು, ಮಡಿಕೇರಿ ಇವರಿಗೂ ಸಲ್ಲಿಸಲಾಯಿತು. ರಾಸಾಯನಿಕ ಪರೀಕ್ಷೆಗೆ ಒಂದು ಸೀಲಾದ ಕವರ್ ಹಾಗೂ ಮಾದರಿ ಸಾರಾಯಿ ಪ್ಯಾಕೇಟ್‌ನ್ನು ದಿನಾಂಕ:27-11-04ರಂದು ಮಂಗಳೂರಿನ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆಗಾಗಿ ಶ್ರೀ ಮೋಹನ್, ಅಬಕಾರಿ ರಕ್ಷಕರು ಇವರೊಂದಿಗೆ ಕಳುಹಿಸಿಕೊಡಲಾಯಿತು. ದಿನಾಂಕ:1-12-04 ರಂದು ಅಂಚೆ ಮೂಲಕ ರಾಸಾಯನಿಕ ವರದಿ ಬಂದಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿ ತಯಾರಿಸಿದ ಸ್ಥಳ ಮಹಜರು ನ್ಯಾಯಾಲಯದಲ್ಲಿ ನಾನು ನೋಡಿ ಗುರುತಿಸಿರುತ್ತೇನೆ, ಇದನ್ನು ನಿಶಾನೆ ಪಿ.1 ಎಂದು ಗುರುತಿಸಲಾಗಿ ಸದರಿ ಮಹಜರಿನಲ್ಲಿ ನಾನು ಸಹಿ ಮಾಡಿರುವುದನ್ನು ನಿಶಾನೆ ಪಿ-1 ಎ ಎಂಬುದಾಗಿ ಗುರುತಿಸಲಾಗಿದೆ. ನಾನು ತಯಾರಿಸಿ ನ್ಯಾಯಾಲಯಕ್ಕೆ ಒಪ್ಪಿಸಿರುವ ಪ್ರ.ಮಾ ವರದಿ ಸಂಖ್ಯೆ 13ರ ಪ್ರತಿಯನ್ನು ನ್ಯಾಯಾಲಯದಲ್ಲಿ ನಾನು ನೋಡಿ ಗುರುತಿಸಿದ್ದು ನಿಶಾನೆ ಪಿ-2 ಹಾಗೂ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಗಿದೆ ಹಾಗೂ ನ್ಯಾಯಾಲಯಕ್ಕೆ ಒಪ್ಪಿಸಲಾಗಿರುವ ಸ್ವತ್ತಿನ ಪಟ್ಟಿ ಪ್ರತಿಯನ್ನು ನಾನು ನೋಡಿ ಗುರುತಿಸಿದ್ದು ಇದನ್ನು ನಿಶಾನೆ ಪಿ-3 ಹಾಗೂ ನನ್ನ ಸಹಿ ನಿಶಾನೆ ಪಿ-3-ಎ ಎಂದು ಗುರುತಿಸಲಾಗಿದೆ.

ವಶಪಡಿಸಿಕೊಂಡ ಸ್ವತ್ತುಗಳ ವರದಿ ಪ್ರತಿಯನ್ನು ಅಧಿಕೃತ ಅಧಿಕಾರಿಗಳ ನ್ಯಾಯಾಲಯಕ್ಕೆ ಒಪ್ಪಿಸಿರುವ ಪ್ರತಿಯನ್ನು ನಿಶಾನೆ-ಪಿ-4 ಹಾಗೂ ನನ್ನ ಸಹಿ 4-ಪಿ-ಎ ಎಂಬುದಾಗಿ ಗುರುತಿಸಲಾಗಿದೆ.

ಹಾಗೂ ಪ್ರಕರಣವನ್ನು ತನಿಖೆಯ ಬಗ್ಗೆ ತಮ್ಮ ವಶದಲ್ಲಿ ಇಟ್ಟುಕೊಳ್ಳಲು ಅನುಮತಿ ಕೋರಿ ಅಧಿಕೃತ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರಿಗೆ ಸಲ್ಲಿಸಿದ 457ರ ಪ್ರತಿಯನ್ನು ನ್ಯಾಯಾಲಯದಲ್ಲಿ ಗುರುತಿಸಿದ್ದು ಇದನ್ನು ನಿಶಾನೆ-(ಪಿ-5) ಎಂದು ಗುರುತಿಸಲಾಗಿದೆ.

ಪಾಟಿ ಸವಾಲು: ಅಭಿಯೋಗದ ಪರ ಸಾಕ್ಷಿದಾರರನ್ನು ರಕ್ಷಣಾ ಪರ ವಕೀಲರಾದ ಶ್ರೀ ಎನ್.ಜಿ.ಐಯಪ್ಪ ಇವರು ಪಾಟಿ ಸವಾಲು ನಡೆಸಲಾಗಿ ಸಾಕ್ಷಿದಾರರು ಪಾಟಿ ಸವಾಲಿಗೆ ಉತ್ತರಿಸುತ್ತಾ:-ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ದಾಖಲೆಗಳಿಂದ ಒಂದು ಹಾಳೆಯಲ್ಲಿ ಬರೆದುಕೊಂಡಿದ್ದು ನಂತರ ಆ ಹಾಳೆಯಿಂದ ನೋಡಿ ಹೇಳಿದ್ದಾಗಿರುತ್ತದೆ. ವಿರಾಜಪೇಟೆಯಿಂದ ದೇವಣಗೇರಿಗೆ 9 ಕಿ.ಮೀ ಇದೆ ಎಂದರೆ ಸರಿ, ವಿರಾಜಪೇಟೆಯಿಂದ ದೇವಣಗೇರಿ ಮಧ್ಯದಲ್ಲೆ ಕಕ್ಕೂರು ಕೋಟೆ ಕೊಪ್ಪ ಹಾಗೂ ಚೆಂಬೆಬೆಳ್ಳೂರು ಸ್ಥಳಗಳು ಇರುತ್ತವೆ ಎಂದರೆ ಸರಿ, ನಿಶಾನೆ ಪಿ-1 ಮಹಜರಿನಲ್ಲಿ ಯಾವ ಊರಿನಲ್ಲಿ ಬರೆದಿರುವುದೆಂದು ನಮೂದಿಸಿರುವುದಿಲ್ಲ. ಕಾರ್ಯದ ಒತ್ತಡದಿಂದ ಮಹಜರು ಬರೆದ ಸ್ಥಳವನ್ನು ತೋರಿಸಲಾಗಿಲ್ಲ. ನಿಶಾನೆ-ಪಿ-1 ಮಹಜರನ್ನು ಯಾವ ಊರಿನಲ್ಲಿ ಬರೆದಿದ್ದು ಎಂದು ಹೇಳಲಿಕ್ಕೆ ಆಗುವುದಿಲ್ಲ. ವಿರಾಜಪೇಟೆ ದೇವಣಗೇರಿ ರಸ್ತೆ ಎಂಬುದಾಗಿ ನಮೂದಿಸಿರುತ್ತೇನೆ. ಅದೇ ರೀತಿ ನಿಶಾನೆ-ಪಿ-1 ಮಹಜರನ್ನು ವಿರಾಜಪೇಟೆ ದೇವಣಗೇರಿ ರಸ್ತೆಯ ಎಷ್ಟನೇ ಕಿ.ಮೀ. ನಿಂದ ಎಷ್ಟು ದೂರ ಎಂದು ನನಗೆ ನೆನಪಿರುವುದಿಲ್ಲ. ಆ ದಿನ ರಸ್ತೆ ಗಸ್ತು ಮಾಡಿಕೊಂಡು, ನಾಲ್ಕೈದು ಸಿಬ್ಬಂದಿಯವರಿದ್ದು ಶ್ರೀ ಹೆಚ್.ಸಿ.ಚಂದ್ರ, ಅಬಕಾರಿ ರಕ್ಷಕರು, ವಿರಾಜಪೇಟೆ ಒಬ್ಬರ ಕೈಯಲ್ಲಿ ಮಹಜರಿಗೆ ಸಹಿ ಮಾಡಿಸಿರುತ್ತೇನೆ. ಸದರಿ ದಿವಸದಂದು ನನ್ನೊಂದಿಗೆ ನಾಲ್ಕು ಜನ ಸಿಬ್ಬಂದಿಗಳಿದ್ದರು, ನಿಶಾನೆ ಪಿ-1 ರಿಂದ 5ರಲ್ಲಿ ಹೆಚ್.ಸಿ.ಚಂದ್ರ ಇವರ ಹೆಸರನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಸಿಬ್ಬಂದಿಯ ಹೆಸರನ್ನು ನಮೂದಿಸಿರುವುದಿಲ್ಲ. ಆ ದಿವಸ ನಾವು ವಿರಾಜಪೇಟೆಯಿಂದ ಬೇರೆ ಸ್ಥಳಕ್ಕೆ ಗಸ್ತು ನಡೆಸಲು ಹೋಗಿದ್ದು ಅಲ್ಲಿಂದ ದೇವಣಗೇರಿ ಎಂಬ ಸ್ಥಳಕ್ಕೆ ಬಂದಿರುತ್ತೇನೆ. ಆ ದಿವಸ ವಿರಾಜಪೇಟೆಯಿಂದ ನಾವು ದೇವಣಗೇರಿಗೆ ನೇರವಾಗಿ ಹೋಗಿರುವುದಿಲ್ಲ. ಆ ದಿವಸ ನಾವು ವಿರಾಜಪೇಟೆಯಿಂದ ನೇರವಾಗಿ ಬಂದಿರುತ್ತೇನೆಂದರೆ ಸರಿ, ಸದರಿ ದಿನದಂದು ನಾನು ಗಸ್ತು ಮಾಡುತ್ತಿದ್ದಾಗ ಕೆ.ಎ.12-ಹೆಚ್-1219ರ ಸ್ಪ್ಲೆಂಡರ್ ಬೈಕನ್ನು 10 ಅಡಿ ದೂರದಲ್ಲಿ ನೋಡಿರುತ್ತೇನೆ. ಆ ದಿನ ಐಚಂಡ ಸುನಿಲ್ ಎಂಬುವವನು ಬೈಕನ್ನು ನಿಲ್ಲಿಸಿ ತೋಟದೊಳಗೆ ಓಡಿ ಹೋದನು ಎಂದರೆ ಸರಿ. ಸದರಿ ಬೈಕಿನಲ್ಲಿ ಪ್ಲಾಸ್ಟಿಕ್ ಚೀಲವು ಬೈಕಿನ ಹಿಂಭಾಗದಲ್ಲಿತ್ತು. ಆ ಪ್ಲಾಸ್ಟಿಕ್ ಚೀಲದ ಬಣ್ಣ ಬಿಳಿ. ಆ ಚೀಲ ಗೊಬ್ಬರದ ಚೀಲವಾಗಿತ್ತು, ಅದರ ಮೇಲೆ ಬರವಣಿಗೆ ಇರುವುದಿಲ್ಲ.

ಒಬ್ಬ ವ್ಯಕ್ತಿ ಚಲಿಸುತ್ತಿದ್ದ ಬೈಕಿನಿಂದ ಇಳಿಯಬೇಕಾದರೆ ಆ ವಾಹನವನ್ನು ನಿಲ್ಲಿಸಬೇಕು ಎಂದರೆ ಸರಿ. ಚಲಿಸುತ್ತಿರುವ ಬೈಕನ್ನು ನಿಲ್ಲಿಸಿ ಅದರಿಂದ ಕೆಳಗಿಳಿಯಲು ಒಬ್ಬ ವ್ಯಕ್ತಿಗೆ ಕನಿಷ್ಠ ಒಂದು ನಿಮಿಷ ಸಮಯಾವಕಾಶ ಬೇಕು ಎಂದರೆ ಸರಿ. ತೋಟಗಳಿಗೆ ತಂತಿ ಬೇಲಿ ಇರುತ್ತದೆ ಎಂದರೆ ಸರಿ. ಆದರೆ ಆ ಜಾಗದಲ್ಲಿ ತಂತಿ ತುಂಡಾಗಿತ್ತು. ಸದರಿ ದಿನಾಂಕದಂದು ಆರೋಪಿ ಸುನಿಲ್‌ನನ್ನು ತೋಟದೊಳಗೆ ಎಷ್ಟು ದೂರ ಹಿಂಬಾಲಿಸಿಕೊಂಡು ಹೋಗಿರುವುದೆಂದು ನೆನಪಿರುವುದಿಲ್ಲ. ಸದರಿ ದಿವಸದಂದು ಅಂದಾಜು ಅರ್ಧಗಂಟೆಯ ಹೊತ್ತು ಆರೋಪಿ ಸುನಿಲ್‌ರನ್ನು ಹಿಂಬಾಲಿಸಿದ್ದೇವೆ. ಆದರೆ ಕತ್ತಲಾದ ಕಾರಣ ನಾವು ಹಿಂತಿರುಗಿರುತ್ತೇವೆ. ವಿರಾಜಪೇಟೆ ಘನ ಜೆ.ಎಂ.ಎಫ್.ಸಿ.ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ಪ್ರ.ವ.ವರದಿಯನ್ನು ನಾನೇ ಸಲ್ಲಿಸಿರುತ್ತೇನೆ.

ಸದರಿ ಕೇಸಿನಲ್ಲಿ ತನಿಖೆಯನ್ನು ನಾನೇ ಮುಂದುವರೆಸಿರುತ್ತೇನೆ. ವಿಚಾರಣೆ ಸಂದರ್ಭದಲ್ಲಿ ಸದರಿ ತೋಟ ಯಾರದು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೆವು. ಆದರೆ ಅಕ್ಕಪಕ್ಕದವರು ಯಾವುದೂ ತಿಳಿಸಿರುವುದಿಲ್ಲ. ಸದರಿ ತೋಟ ಯಾರಿಗೆ ಸೇರಿದೆ ಎಂಬ ವಿಷಯವನ್ನು ಗ್ರಾಮ ಲೆಕ್ಕಾಧಿಕಾರಿಗಳಿಂದ ಕೇಳಿ ತಿಳಿದುಕೊಂಡಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು ಕೆಲಸದ ಒತ್ತಡದಿಂದಾಗಿ ತಿಳಿದುಕೊಳ್ಳಲು ಆಗಲಿಲ್ಲ ಎಂದು ತಿಳಿಸಿದರು. ಸದರಿ ಆರೋಪಿಯು ತೋಟದೊಳಗೆ ಓಡಿ ಹೋದಾಗ ನಿಶಾನೆ ಪಿ-1ರ ಸಹಿ ಹಾಕಿರುವ ಪಂಚರು ಆರೋಪಿಯನ್ನು ಹಿಡಿಯಲು ನಮ್ಮೊಂದಿಗೆ ಸಹಕರಿಸಿರುತ್ತಾರೆ. ಬೈಕಿನಲ್ಲಿ ಪ್ಲಾಸ್ಟಿಕ್ ಚೀಲವನ್ನು ಅಬಕಾರಿ ರಕ್ಷಕರಾದ ಹೆಚ್.ಪಿ.ಚಂದ್ರ ಇವರು ಬಿಚ್ಚಿರುತ್ತಾರೆ ಎಂದರೆ ಸರಿ. ಸದರಿ 150 ಸಾರಾಯಿ ಪ್ಯಾಕೇಟುಗಳಲ್ಲಿ ಪ್ಯಾಕೇಟಿನ ಮೇಲೆ ಪ್ರಿಂಟೆಡ್ ಮ್ಯಾಟರ್ ಇತ್ತು. ಅದು ಏನು ಎಂದು ನೆನಪಿರುವುದಿಲ್ಲ. ಸದರಿ 150 ಸಾರಾಯಿ ಪ್ಯಾಕೇಟುಗಳ ಮೇಲೆ ಏನು ಬರೆದುಕೊಂಡಿತ್ತು ಎಂಬ ಅಂಶವನ್ನು ನಿಶಾನೆ ಪಿ-1 ಮಹಜರಿನಲ್ಲಿ ನಾನು ಬರೆಸಿರುವುದಿಲ್ಲ. ಸದರಿ ಮಹಜರಿನಲ್ಲಿ ಈ ಅಂಶವನ್ನು ಬರೆಯಲಿಕ್ಕೆ ಏನಾದರೂ ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೇರೆ ಕಡೆ ಹೋಗಬೇಕಾಗಿರುವುದರಿಂದ ಬರೆಯಲು ಆಗಲಿಲ್ಲ ಎಂದು ತಿಳಿಸಿದರು. ನಿಶಾನೆ ಪಿ-1 ಮಹಜರನ್ನು, ಬೈಕನ್ನು ನಿಲ್ಲಿಸಿದ ಜಾಗದಲ್ಲಿ ಸಂಜೆ 6.15ರಿಂದ 6.45ರವರೆಗೆ ಬರೆದಿರುತ್ತೇನೆ. ಈ ಮಹಜರು ಬರೆಯುವ ಸಮಯದಲ್ಲಿ ಕತ್ತಲಾಗಿತ್ತು. ಓಡಿಹೋದ ವ್ಯಕ್ತಿಯ ಹೆಸರನ್ನು ಪಂಚರು ನಮಗೆ ತಿಳಿಸಿರುತ್ತಾರೆ. ಪ್ರಶಾಂತ್ ಎಂಬ ಪಂಚರ ವಾಸ ಸ್ಥಳವಾದ ಮಸಗೋಡು ಗ್ರಾಮ, ನಿಶಾನೆ ಪಿ-1 ಮಹಜರನ್ನು ಬರೆದ ಸ್ಥಳದಿಂದ 100ಕಿ.ಮೀ. ದೂರ ಇದೆ ಎಂದರೆ ಸರಿ. ಮತ್ತೊಬ್ಬ ಪಂಚರ ಹೆಸರಾದ

ಚಂದ್ರೇಗೌಡ ಇವರ ವಾಸಸ್ಥಳವು ಚಿಕ್ಕೋಡಿ ಗ್ರಾಮ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಆಗಿರುತ್ತದೆ. ಸದರಿ ಗ್ರಾಮವು ನಿಶಾನೆ ಪಿ-1 ಮಹಜರನ್ನು ಬರೆದ ಜಾಗದಿಂದ 400-500ಕಿ.ಮೀ. ದೂರವಿದೆ ಎಂದರೆ ಸರಿ. ಸದರಿ ಪಂಚರನ್ನು ದೇವಣಗೇರಿ ಗ್ರಾಮಕ್ಕೆ ಬಂದ ಕಾರಣವನ್ನು ಕೇಳಿದಾಗ ಸದರಿಯವರು ವ್ಯಾಪಾರಕ್ಕಾಗಿ ಬಂದಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಪಂಚರು ದೇವಣಗೇರಿ ಗ್ರಾಮದಲ್ಲಿ ಎಷ್ಟು ಸಮಯದಿಂದ ವಾಸವಾಗಿದ್ದಾರೆಂಬ ವಿಷಯವನ್ನು ನಾನು ತಿಳಿದುಕೊಂಡಿರುವುದಿಲ್ಲ. ಈ ಕೇಸಿನ ಆರೋಪಿಯಾದ ಐಚಂಡ ಸುನಿಲ್‌ರವರು ಪಂಚರಿಗೆ ಹೇಗೆ ಪರಿಚಯವಾದರು ಎಂಬ ಅಂಶವನ್ನು ನಾನು ವಿಚಾರಿಸಿರುವುದಿಲ್ಲ. ಸದರಿ ಕೇಸಿನ ಆರೋಪಿ ಐಚಂಡ ಸುನಿಲ್ ಎನ್ನುವ ಬಗ್ಗೆ ಸದರಿ ಊರಿನವರನ್ನು ವಿಚಾರಿಸಿ ತಿಳಿದುಕೊಂಡಿರುತ್ತೇನೆ. ಸದರಿ ಊರಿನವರ ಹೆಸರನ್ನು ನಿಶಾನೆ ಪಿ-1 ರಿಂದ -5ರಲ್ಲಿ ಎಲ್ಲಿಯೂ ನಮೂದಿಸಿರುವುದಿಲ್ಲ. ಸದರಿ ಕೇಸಿನಲ್ಲಿ ವಶಪಡಿಸಿಕೊಂಡ ಬೈಕನ್ನು ನಮ್ಮ ಬಾಡಿಗೆ ಜೀಪಿನಲ್ಲಿ ನಮ್ಮ ಕಛೇರಿಗೆ ತೆಗೆದುಕೊಂಡು ಹೋಗಲಾಯಿತು. ವಿರಾಜಪೇಟೆ ಘನ ಜೆ.ಎಂ.ಎಫ್.ಸಿ.ನ್ಯಾಯಾಲಯಕ್ಕೆ ಸುನಿಲ್‌ರವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಈ ಕೇಸಿನಲ್ಲಿ ಮಾದರಿಗಾಗಿ ತೆಗೆದ ಸಾರಾಯಿ ಪ್ಯಾಕೇಟುಗಳನ್ನು ಘನ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ರೀತಿ ರಾಸಾಯನಿಕ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಶಾನೆ ಪಿ-2ರ ಪ್ರ.ವ.ವರದಿಯಲ್ಲಿ ವರದಿ ಸಂಖ್ಯೆ ತಿದ್ದಿದೆ ಎಂದರೆ ಸರಿ. ವಿರಾಜಪೇಟೆ ಘನ ಜೆ.ಎಂ.ಎಫ್.ಸಿ.ನ್ಯಾಯಾಲಯ ಅಂತಿಮ ವರದಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾರಾಯಿಯನ್ನು ಪ್ಯಾಕೇಟಿಗೆ ತುಂಬಿಸಿದ ಒಂದು ವಾರದೊಳಗೆ ಸೇವಿಸದಿದ್ದಲ್ಲಿ ಅದು ಮಾನವನ ಸೇವನೆಗೆ ಯೋಗ್ಯವಾದುದಲ್ಲ ಎಂದು ಪರಿಗಣಿಸುತ್ತೇವೆ ಎಂದರೆ ಸರಿ. ಪ್ರಕರಣ ದಾಖಲಿಸಿ ಮಾದರಿಗಾಗಿ ತೆಗೆದುಕೊಂಡ ಸಾರಾಯಿ ಪ್ಯಾಕೇಟನ್ನು ಅಮಾನತ್ತು ಪಡಿಸಿಕೊಂಡ ದಿನದಿಂದ 9 ತಿಂಗಳ ನಂತರ ಸದರಿ ಸಾರಾಯಿ ಪ್ಯಾಕೇಟನ್ನು ಪರೀಕ್ಷೆಗಾಗಿ ಕಳುಹಿಸಿರುತ್ತೇನೆ ಎಂದರೆ ಸರಿ. ಪ್ರಕರಣ ದಾಖಲು ಮಾಡಿದ 24 ಗಂಟೆಗಳ ಒಳಗೆ ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಬೇಕೆಂದರೆ ಸರಿ. ನಿಶಾನೆ ಪಿ-2ರ ದಾಖಲೆಯನ್ನು ಈ ನ್ಯಾಯಾಲಯಕ್ಕೆ ಫೆಬ್ರವರಿ 20, 2004ರಂದು ಸಲ್ಲಿಸಿರುತ್ತಾರೆ ಎಂದರೆ ಸರಿ. ದಿನಾಂಕ:17-2-04ರಂದು ನಾನು ನನ್ನ ಸಿಬ್ಬಂದಿಯವರೊಂದಿಗೆ ದೇವಣಗೇರಿ ರಸ್ತೆಯಲ್ಲಿ ಗಸ್ತಿಗೆ ಹೋಗಿರುವುದು ಇಲ್ಲ ಎಂಬುದು ಸರಿಯಲ್ಲ. ಸದರಿ ದಿವಸದಂದು ಈ ಮೇಲೆ ಹೇಳಿದ ಬೈಕಿನಲ್ಲಿ ಸಾರಾಯಿ ಪ್ಯಾಕೇಟುಗಳನ್ನು ಸಾಗಾಣಿಕೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1ರ ಮಹಜರನ್ನು ನನ್ನ ಕಛೇರಿಯಲ್ಲಿ ಬರೆದದ್ದು ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳಿಗೆ ಸಲ್ಲಿಸಬೇಕಾದ ಅಂಕಿಅಂಶಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸದರಿ ಬೈಕನ್ನು ಜಪ್ತುಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ದಾಖಲಿಸುವ ಕಾರಣ ಊರಿನವರು ಸಹಕರಿಸಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ.

ರಕ್ಷಣಾ ಸಾಕ್ಷಿದಾರರಾದ ವಾಹನದ ಮಾಲೀಕರು ಮತ್ತು ಅವರ ಪರ ವಕೀಲರು ಹಾಜರಿದ್ದು ವಾದವಿವಾದಗಳನ್ನು ಮಂಡಿಸಿರುತ್ತಾರೆ. ರಕ್ಷಣಾ ಪರ ವಕೀಲರು ತಮ್ಮ ಲಿಖಿತ ವರದಿಯನ್ನು ಸಲ್ಲಿಸುವುದಾಗಿ ಪ್ರಾಧಿಕಾರದಲ್ಲಿ ನುಡಿದಿದ್ದು ಇಲ್ಲಿಯವರೆಗೆ ಯಾವುದೇ ರೀತಿಯ ವರದಿಯನ್ನು ಸಲ್ಲಿಸಿರುವುದಿಲ್ಲ.ಈ ಪ್ರಾಧಿಕಾರವು ವಾಹನದ ಮಾಲೀಕರು ದೋಷಿಯೋ ಅಥವಾ ನಿರ್ದೋಷಿಯೋ ಎಂಬುದನ್ನು ವಿಚಾರಣೆ ಮಾಡುವ ಕಾರ್ಯಕ್ಕೆ ಹೋಗದೆ ಅಂತಹ ಅಬಕಾರಿ ಅಪರಾಧದಲ್ಲಿ ತೊಡಗಿದ್ದ ವಾಹನದ ಬಗ್ಗೆ ಮಾತ್ರವೇ ವಿಚಾರ ಮಾಡುತ್ತದೆ, ಎಂಬುದನ್ನು ಸ್ಪಷ್ಟಪಡಿಸಬೇಕಾಗುವುದು ಅಗತ್ಯವಾದ ಪ್ರಮುಖ ಅಂಶವಾಗಿರುತ್ತದೆ. ಆದರೆ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಆರೋಪಿಯ ಖುಲಾಸೆಗೂ ವಾಹನವನ್ನು ಮುಟ್ಟುಗೋಲು ಹಾಕಿಕೊಂಡಿರುವ ಅಧಿಕೃತ ಅಧಿಕಾರಿಗಳ ನ್ಯಾಯಾಲಯಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಅಲ್ಲದೆ ತನಗೆ ಸೇರಿದ ವಾಹನದಲ್ಲಿ ತಾನೇ ಅಬಕಾರಿ ಅಕ್ರಮ ಪದಾರ್ಥ, ವಸ್ತುವನ್ನು ಹೊಂದಿರಲಿ, ಸಾಗಾಣಿಕೆ ಮಾಡುತ್ತಿರಲಿ ಅಥವಾ ಇಲ್ಲದಿರಲಿ ಅದನ್ನು ಸಾಕ್ಷಾಧಾರಗಳಿಂದ ದೃಢಪಡಿಸಬೇಕಾಗಿದ್ದು ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದಿದ್ದಾನೆಂಬ ಮಾತ್ರಕ್ಕೆ ಆರೋಪಿಯು ಅಬಕಾರಿ ಅಪರಾಧವೆಸಗಿಲ್ಲವೆಂದು ತೀರ್ಮಾನಕ್ಕೆ ಬರುವಂತಿಲ್ಲ. ಹಾಗೂ ಅಬಕಾರಿ ತನಿಖಾಧಿಕಾರಿಯು ಸುಳ್ಳು ಹಾಗೂ ಅಸತ್ಯದ ಮೊಕದ್ದಮೆಯು ಹೂಡಿದ್ದಾರೆಂದು ಭಾವಿಸುವಂತಿಲ್ಲ. ಅಬಕಾರಿ ತನಿಖಾಧಿಕಾರಿಯ ಸಾಕ್ಷ್ಯವೆಂದೇ ಪರಿಗಣಿಸಬಹುದಾಗಿರುತ್ತದೆ.

ಭಾರತ ದಂಡ ಸಂಹಿತೆ ಸೆಕ್ಷನ್ 302, 324ರಲ್ಲಿ ಅಧಿಕೃತವಾಗಿ ಮತ್ತು ದೈನಂದಿನ ಕರ್ತವ್ಯ ನಿರ್ವಹಿಸುವ ಅಬಕಾರಿ ಅಧಿಕಾರಿಯ ಸಾಕ್ಷವನ್ನು ನಂಬದಿರಲು ಅವಕಾಶವಿರುವುದಿಲ್ಲವೆಂತಲೂ ಹಾಗೂ ತನಿಖಾಧಿಕಾರಿಯ ಸಾಕ್ಷವು ಮೌಲ್ಯವುಳ್ಳದ್ದು ಮತ್ತು ಅವರ ದಾಖಲೆಯನ್ನು, ತನಿಖೆಯನ್ನು ಅಸತ್ಯವೆಂದು ಸಂಶಯಿಸಲು ಯಾವುದೇ ಕಾರಣವಿರದೆಂಬುದನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ.

" (A) Indian penal Code- Section 302, 324 – Evidence of Investigating Officer whether can be disbelleved – Held official act of the Police have been regularly performed is a wise principle of presumption – The evidence of investigating officer is rellable one - Facts, further held, the evidence of Police witness is rellable and on record, there is no reason to suspect the truthfulness of the records of the Police investigation."

ಈ ಪ್ರಕರಣದಲ್ಲಿ ಸದರಿ ಅಂಶವನ್ನು ಅನ್ವಯಿಸಿ ಪರಿಗಣಿಸಬಹುದಾಗಿದೆ. ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:17-2-04ರಂದು ಸ್ಪ್ಲೆಂಡರ್ ಮೋಟಾರು ಬೈಕ್ ನೋಂದಣಿ ಸಂ. ಕೆಎ-12-ಹೆಚ್-1219ರಲ್ಲಿ ಅಕ್ರಮ ಸಾರಾಯಿ ಪ್ಯಾಕೇಟು ಸಾಗಾಟ ಮಾಡುತ್ತಿದ್ದುದನ್ನು ಅಬಕಾರಿ ಉಪ ನಿರೀಕ್ಷಕರು, ಸಂಚಾರ ದಳ, ವಿರಾಜಪೇಟೆ ರವರು ಪತ್ತೆ ಹಚ್ಚಿ ಅಬಕಾರಿ ಕಾಯ್ದೆ ಕಲಂ11, R/W, 14 ರ ಪ್ರಕಾರ ಅಪರಾಧವಾಗಿದ್ದು ಕಲಂ34, 43ಎರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುವುದರಿಂದ ಪ್ರ.ವ.ವ.ಸಂ:13/2003/04, ದಿನಾಂಕ:17-2-2004ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ಅಕ್ರಮ ಸಾರಾಯಿ ಪ್ಯಾಕೇಟು ಸಾಗಾಣಿಕೆಗೆ ಬಳಸಲಾದ ದ್ವಿಚಕ್ರ ವಾಹನ ಮತ್ತು ಸಾರಾಯಿ ಪ್ಯಾಕೇಟುಗಳನ್ನು, ಸ್ಥಳ ಮಹಜರು, ಪಂಚನಾಮೆಯ ಮುಖೇನ ಸ್ವಾಧೀನಪಡಿಸಿಕೊಂಡಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಸಾರಾಯಿಯೆಂದು ದೃಢಪಟ್ಟಿರುತ್ತದೆ. ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಬೇರೆಯವರ ಕೈಯಲ್ಲಿ ಕೊಟ್ಟು ಅಕ್ರಮ ಸಾಗಾಣಿಕೆಗೆ ಬಳಸಿರುವುದು ಸ್ಪಷ್ಟವಾಗಿ ಸಾಭೀತಾಗಿರುವುದು ಈ ಪ್ರಾಧಿಕಾರದಲ್ಲಿ ಪ್ರಾಧಿಕೃತ ಅಧಿಕಾರಿಗಳು ಮತ್ತು ಸಹಾಯಕ ಸರ್ಕಾರಿ ಅಭಿಯೋಜಕರು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ. ಹಾಗೂ ವಾಹನವನ್ನು ಅಕ್ರಮ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಸ್ಪಷ್ಟವಾಗಿ ಸಾಭೀತಾಗಿರುವುದಾಗಿ ಈ ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ಒಂದನೇ ಅಂಶಕ್ಕೆ ಗುಣಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ ಹಾಗೂ ವಾಹನದಲ್ಲಿ ಸಾರಾಯಿ ಪ್ಯಾಕೇಟು ಸಾಗಾಣಿಕೆಯಾಗಿರುವುದರ ಬಗ್ಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಸಾಭೀತುಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಎರಡನೇ ಅಂಶಕ್ಕೆ ಉತ್ತರ ಇಲ್ಲಾ ಎಂದಾಗುತ್ತದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅಬಕಾರಿ ಉಪ ನಿರೀಕ್ಷಕರು, ಸಂಚಾರಿದಳ, ವಿರಾಜಪೇಟೆ ಇವರು ವಶಪಡಿಸಿಕೊಂಡ ದ್ವಿಚಕ್ರ ವಾಹನ ಸಂ. ಕೆಎ-12-ಹೆಚ್-1219ರ ನೋಂದಣಿ ಸಂಖ್ಯೆಯ ಹೀರೋ ಹೋಂಡ ಸ್ಪ್ಲೆಂಡರ್ ಬೈಕನ್ನು ವಶಪಡಿಸಿಕೊಂಡು ಸುಮಾರು 6ವರ್ಷ ಕಳೆದಿದ್ದು ಈ ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಯಿಂದ ವಾಹನದಲ್ಲಿ ಅಕ್ರಮ ಸಾರಾಯಿ ಪ್ಯಾಕೇಟು ಸಾಗಾಣಿಕೆ ಮಾಡಿರುವುದು ಸಾಭೀತಾಗಿರುವುದರಿಂದ ಮೂರನೇ ಅಂಶದಂತೆ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

ಆದೇಶ

ಸಿ.ಎಲ್.ಜಯರಾಮ್, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಕೊಡಗು ಜಿಲ್ಲೆ, ಮಡಿಕೇರಿ ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43 ಬಿ ರಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಸಂಚಾರ ದಳ, ವಿರಾಜಪೇಟೆ ಇವರ ಪ್ರ.ವ.ವ.ಸಂ.13/2003-04, ದಿನಾಂಕ: 17-2-04 ರಲ್ಲಿ ಅಕ್ರಮ ಸಾರಾಯಿ ಪ್ಯಾಕೇಟು ಸಾಗಾಣಿಕೆಗೆ ಬಳಸಿದ ದ್ವಿಚಕ್ರ ವಾಹನ ಸಂ: ಕೆಎ-12-ಹೆಚ್-1219ರ ಸ್ಪ್ಲೆಂಡರ್ ಬೈಕನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಎ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ. ಹಾಗೂ ಸದರಿ ವಾಹನವನ್ನು 30ದಿನಗೊಳಗಾಗಿ ವಾಹನದ ಮಾಲೀಕರು ಪ್ರಾಧಿಕಾರಕ್ಕೆ ಒಪ್ಪಿಸಲು ಸೂಚಿಸಿದೆ. ತಪ್ಪಿದಲ್ಲಿ ಈಗಾಗಲೇ ವಾಹನದ ಮಾಲೀಕರು ನೀಡಿರುವ ಬ್ಯಾಂಕ್ ಗ್ಯಾರೆಂಟಿಯನ್ನು ಇನ್ವೋಕ್ ಮಾಡಿ ಆರ್‌ಡಿ ಖಾತೆಯಲ್ಲಿಡಲಾಗಿರುವ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಸೂಚಿಸಿದೆ.

ಈ ಆದೇಶವನ್ನು ದಿನಾಂಕ:23-3-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು. ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ.1: ಶ್ರೀ ಎಂ.ಸಿ.ಚಂದ್ರಶೇಖರ್, ಅಬಕಾರಿ ಉಪ ನಿರೀಕ್ಷಕರು, ಸಂಚಾರಿ ದಳ, ವಿರಾಜಪೇಟೆ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-1 – ಮಹಜರು ಪ್ರತಿ

ನಿಶಾನೆ ಪಿ-1ಎ – ಅದರ ಮೇಲಿನ ಸಹಿ

ನಿಶಾನೆ ಪಿ-2 – ಪ್ರಥಮ ವರ್ತಮಾನ ವರದಿ

ನಿಶಾನೆ ಪಿ-2ಎ – ಅದರ ಮೇಲಿನ ಸಹಿ

ನಿಶಾನೆ ಪಿ-3 – ಸ್ವತ್ತಿನ ಪಟ್ಟಿ

ನಿಶಾನೆ ಪಿ-3ಎ – ಅದರ ಮೇಲಿನ ಸಹಿ

ನಿಶಾನೆ ಪಿ-4 – ವಶಪಡಿಸಿಕೊಂಡ ಸ್ವತ್ತುಗಳ ವರದಿ ಪ್ರತಿ

ನಿಶಾನೆ ಪಿ-4ಎ – ಅದರ ಮೇಲಿನ ಸಹಿ

ನಿಶಾನೆ ಪಿ-5 – ವಶಪಡಿಸಿಕೊಂಡ ಸ್ವತ್ತುಗಳನ್ನು ವಶದಲ್ಲಿಟ್ಟುಕೊಳ್ಳಲು ಅಧಿಕೃತ ಅಧಿಕಾರಿಗಳ ಅನುಮತಿ ಪತ್ರ 457ರ ಪ್ರತಿ.

ಅನುಬಂಧ-3

ವಾಹನದ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು ಯಾವುದೂ ಇಲ್ಲ.

ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಕೊಡಗು ಜಿಲ್ಲೆ, ಮಡಿಕೇರಿ.

ಪಿ.ಆರ್.540

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಡಬ್ಲ್ಯೂ.ಸಿ.ಎ./ಸಿ.ಆರ್-06/ಎಫ್.ಸಿ./2010, ದಿನಾಂಕ:11ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀ ಬಿ. ರಘುರಾಮ್ ನಾಯಕ್ (65 ವರ್ಷ)
S/o ಶ್ರೀನಿವಾಸ್ ನಾಯಕ್,
2) ಶ್ರೀಮತಿ ಶಶಿಕಲಾ (62 ವರ್ಷ)
W/o ಶ್ರೀ ಬಿ. ರಘುರಾಮ್ ನಾಯಕ್
3) ಮಂಗಳಾ (25 ವರ್ಷ)
D/o ಶ್ರೀ ಬಿ. ರಘುರಾಮ್ ನಾಯಕ್
ವಾಸ: ಶ್ರೀ ದುರ್ಗಾ ನಿಲಯ, ಕೋಟೇಶ್ವರ ಪೋಸ್ಟ್, ಕುಂದಾಪುರ ತಾಲ್ಲೂಕು.

ಪ್ರತಿವಾದಿಗಳು

1) ಪ್ರಕಾಶ್ ಬೆಟ್ಟನ್, ಬಿನ್ ನರಸಿಂಹ ಶೇರಿಗಾರ,
ವಾಸ: ಪಂಚಾಮೃತ, ಬೀಚ್ ರೋಡ್ ಕೋಟೇಶ್ವರ, ಕುಂದಾಪುರ.
2) ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ.,
ಐ.ಸಿ.ಐ.ಸಿ.ಐ. ಲಾಂಬೋರ್ಡ್ ಜನರಲ್ ಇನ್ಸೂರೆನ್ಸ್ ಕಂಪೆನಿ ಲಿಂ., ಜೆನತ್ ಹೌಸ್, ಕೇಶವರಾವ್ ಖಾದ್ಯಡ್ ಮಾರ್ಗ, ರೇಸ್‌ಕೋರ್ಸ್ ಮಹಾಲಕ್ಷ್ಮಿ ಎದುರು, ಮುಂಬಯಿ-400034.

ಅಧಿಸೂಚನೆ

ಅರ್ಜಿದಾರರಾದ ಶ್ರೀ ಬಿ. ರಘುರಾಮ ನಾಯಕ್ ತಮ್ಮ ಮಗನಾದ ನಾಗರಾಜ್ ಇವರು 1ನೇ ಪ್ರತಿವಾದಿಯವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:13.01.2010ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿವಸಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸುವುದೆಂದು ತಿಳಿಸಲಾಗಿದೆ.

ಎಂ. ಆನಂದಮೂರ್ತಿ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು,
ಉಡುಪಿ ಜಿಲ್ಲೆ, ಉಡುಪಿ.

ಪಿ.ಆರ್.400

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಡಬ್ಲ್ಯೂಸಿ.ಎ./ಸಿ.ಆರ್–09/ಎಫ್.ಸಿ./2010, ದಿನಾಂಕ:7ನೇ ಏಪ್ರಿಲ್, 2010

ಅರ್ಜಿದಾರರು

1) ಶ್ರೀ ಮೋಹನ್ ಮಂಡಲ್ (43 ವರ್ಷ)
2) ಶ್ರೀಮತಿ ವಿಹಿಲಾ ದೇವಿ (37 ವರ್ಷ)
W/o ಶ್ರೀ ಮೋಹನ್ ಮಂಡಲ್,
3) ಮಿಥುನ್ ಕುಮಾರ್ (16 ವರ್ಷ)
S/o ಶ್ರೀ ಮೋಹನ್ ಮಂಡಲ್
4) ಪ್ರಾಜಿ ಕುಮಾರಿ (9 ವರ್ಷ)
D/o ಶ್ರೀ ಮೋಹನ್ ಮಂಡಲ್
5) ಗೌರಿ ಕುಮಾರಿ (6 ವರ್ಷ)
D/o ಶ್ರೀ ಮೋಹನ್ ಮಂಡಲ್
ಎಲ್ಲಾ ವಾಸ: ನವತೊಲ್ಲಾ ತೆಲ್ಗಿ ಗ್ರಾಮ, ಕಹರಿಕ್ ಬಜಾರ್ ಪೋಸ್ಟ್, ನಮ್‌ಗಚಿಯಾ ತಾಲ್ಲೂಕು, ಬಾಗಲ್‌ಪುರ ಜಿಲ್ಲೆ, ಬಿಹಾರ.

ಪ್ರತಿವಾದಿಗಳು

1) ಮೆ॥ ಪವರ್‌ಮೆಕ್ ಪ್ರೋಜೆಕ್ಟ್ ಲಿ.,
ಲೋಹಿಯಾ ಟವರ್ಸ್, ನಿರ್ಮಲ ಕಾನ್ವೆಂಟ್ ರಸ್ತೆ, ಪಟಮಟ, ವಿಜಯವಾಡ, ಆಂಧ್ರಪ್ರದೇಶ.

ಅಧಿಸೂಚನೆ

ಅರ್ಜಿದಾರರಾದ ಶ್ರೀ ಮೋಹನ್ ಮಂಡಲ್ ಇವರು ತಮ್ಮ ಮಗನಾದ ನಿವಾಸ್ ಕುಮಾರ್ ಇವರು ಪ್ರತಿವಾದಿಯವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:13.07.2009ರಂದು ಅಪಘಾತಕ್ಕೀಡಾಗಿ ದಿನಾಂಕ:14.07.2009ರಂದು ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿವಸಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸುವುದೆಂದು ತಿಳಿಸಲಾಗಿದೆ.

ಎಂ. ಆನಂದಮೂರ್ತಿ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು,
ಉಡುಪಿ ಜಿಲ್ಲೆ, ಉಡುಪಿ.

ಪಿ.ಆರ್.636

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ರಾಮನಗರ ಜಿಲ್ಲೆ, ರಾಮನಗರ

ಪ್ರಕಟಣೆ ಸಂಖ್ಯೆ: ಕಾಅರಾ/ಕಾನಪ/ಮರಣ/ಸಿಆರ್–07/2010, ದಿನಾಂಕ:20ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀಮತಿ ಸರೋಜಮ್ಮ ಕೋಂ ಲೇಟ್ ಬಸವರಾಜು,
2) ಕು. ರಮ್ಯ ಬಿನ್ ಲೇಟ್ ಬಸವರಾಜು
3) ಕು. ಸೌಮ್ಯ ಬಿನ್ ಲೇಟ್ ಬಸವರಾಜು
4) ಮಹೇಶ್ ಬಿನ್ ಲೇಟ್ ಬಸವರಾಜು.
ಯರೇಹಳ್ಳಿ ವಿಲೇಜ್, ರಾಮನಗರ ತಾಲ್ಲೂಕು:ಜಿಲ್ಲೆ.

ಪ್ರತಿವಾದಿಗಳು

ಶ್ರೀ ಸಿ.ಎಸ್. ಶ್ರೀನಿವಾಸ ಬಿನ್ ಸಿ. ಸಿಂಗ್ರಿಗೌಡ, ಟ್ರಾಕ್ಟರ್ ಟೇಲರ್ ಮಾಲೀಕರು.
ಸಂಖ್ಯೆ: ಕೆಎ–05/ಟಿ–2758,
ಚಿಕ್ಕೇನಹಳ್ಳಿ ವಿಲೇಜ್, ಚಿಕ್ಕಮುದವಾಡಿ ಪೋಸ್ಟ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:03.12.2009 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಅರ್ಜಿದಾರರ ಪತಿಯಾದ ಹಾಗೂ 2ನೇ, 3ನೇ ಮತ್ತು 4ನೇ ಅರ್ಜಿದಾರರ ತಂದೆಯಾದ ಬಸವರಾಜು ಎಂಬುವವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಮೀನಾಪಾಟೀಲ

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ.

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ

ಪ್ರಕಟಣೆ ಸಂಖ್ಯೆ: ಕಾಅರಾ/ಕಾನಪ/ಮರಣ/ಸಿಆರ್-08/2010, ದಿನಾಂಕ:20ನೇ ಮಾರ್ಚ್, 2010

ಅರ್ಜಿದಾರರು

1) ಪದ್ಮಮ್ಮ ಕೋಂ ಹೊಂಬಾಳಯ್ಯ,
2) ಹೊಂಬಾಳಯ್ಯ ಬಿನ್ ಲೇಟ್ ಕಡಯ್ಯ,
3) ರೇಣುಕಾ ಬಿನ್ ಹೊಂಬಾಳಯ್ಯ, ಕೂಟಗಲ್ ವಿಲೇಜ್, ಕೂಟಗಲ್ ಹೋಬಳಿ, ರಾಮನಗರ ತಾಲ್ಲೂಕು: ಜಿಲ್ಲೆ.

ಪ್ರತಿವಾದಿಗಳು

1) ಸರ್ವಮಂಗಳ ಕೋಂ ಲೇಟ್ ಸಿ.ಬಿ. ಹೊನ್ನಯ್ಯ,
1(ಎ) ಮಹೇಶ್ ಬಿನ್ ಸಿ.ಬಿ. ಹೊನ್ನಯ್ಯ,
1(ಬಿ) ಹೆಚ್. ಗುರುಪಾದಸ್ವಾಮಿ, ಬಿನ್ ಸಿ.ಬಿ. ಹೊನ್ನಯ್ಯ ಚೌಡೇಶ್ವರಿ ಹಳ್ಳಿ, ಕೂಟಗಲ್ ಹೋಬಳಿ, ರಾಮನಗರ ತಾಲ್ಲೂಕು: ಜಿಲ್ಲೆ.
2) ದಿ ಮ್ಯಾನೇಜರ್, ನ್ಯೂ ಇಂಡಿಯಾ ಅಪ್ಯೂರೆನ್ಸ್ ಕಂಪನಿ ಲಿ., ನಂ.2240/4, 1ನೇ ಫ್ಲೋರ್, ಗಿರಿಯಮ್ಮ ಶಂಭುಗೌಡ ಕಾಂಪ್ಲೆಕ್ಸ್, ಚರ್ಚ್‌ರಸ್ತೆ, ಚನ್ನಪಟ್ಟಣ.

ಪ್ರಕಟಣೆ

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:11.03.2010 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಮತ್ತು 2ನೇ ಅರ್ಜಿದಾರರ ಮಗನಾದ ರಾಮಚಂದ್ರ ಎಂಬುವವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಮೀನಾಪಾಟೀಲ

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ.

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ

ಪ್ರಕಟಣೆ ಸಂಖ್ಯೆ: ಕಾಅರಾ/ಕಾನಪ/ಮರಣ/ಸಿಆರ್-09/2010, ದಿನಾಂಕ:20ನೇ ಮಾರ್ಚ್, 2010

ಅರ್ಜಿದಾರರು

1) ಪುಟ್ಟಮ್ಮ ಕೋಂ ಮರಿಯಪ್ಪ
2) ಮರಿಯಪ್ಪ ಬಿನ್ ದೊಡ್ಡಯ್ಯ,
ಹನಿಯೂರು ಗ್ರಾಮ, ವಿರೂಪಾಕ್ಷಿಪುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರತಿವಾದಿಗಳು

1) ಜನರಲ್ ಮ್ಯಾನೇಜರ್,
"ಸೋಡೆಕ್ಸ್", ನಂ.110/1, ಎಂ. ಕೃಷ್ಣಪ್ಪ ಲೇಔಟ್, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಎದುರು, ಪೆಟ್ರೋಲ್ ಬಂಕ್, ಲಾಲ್‌ಬಾಗ್ ರೋಡ್, ಬೆಂಗಳೂರು-560 027.
2) ಪ್ರಿನ್ಸಿಪಾಲ್,
ಶ್ರೀ ಭಗವಾನ್ ಮಹಾವೀರ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್, ಜಕ್ಕಸಂದ್ರ ವಿಲೇಜ್, ಮರಳವಾಡಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:05.02.2010 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, 1ನೇ ಮತ್ತು 2ನೇ ಅರ್ಜಿದಾರರ ಮಗನಾದ ಎಮ್. ಶಿವಕುಮಾರ್ ಎಂಬುವವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿಯವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಕಾರ್ಮಿಕ ನಷ್ಟ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಮೀನಾಪಾಟೀಲ
ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ,
ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್.515

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2,
ಬಿಜಾಪುರ ಜಿಲ್ಲೆ, ಬಿಜಾಪುರ.

ಪ್ರಕರಣ ಸಂಖ್ಯೆ: ಕಾಅಬಿ-2:ಕಾನಪ:ಮಪ್ರ-50/2010, ದಿನಾಂಕ:11ನೇ ಮಾರ್ಚ್, 2010

ಅರ್ಜಿದಾರರು

ಶ್ರೀಮತಿ ಮಹಾದೇವಿ ಗಂಡ ಭೀಮನಗೌಡ,
ಬಿರಾದಾರ ಮತ್ತು ಇತರರು, ಸಾ:ಬಮ್ಮನಹಳ್ಳಿ,
ತಾ:ಮುದ್ದೇಬಿಹಾಳ, ಜಿ:ವಿಜಾಪುರ.

ಪ್ರತಿವಾದಿಗಳು

1) ಶ್ರೀ ಅಬ್ದುಲಾಜಿಜ ತಂದೆ ಖಿಸಿಮಸಾಬ ಬಾಗವಾನ,
ಸಾ:942, ತಾಳಿಕೋಟೆ,
ತಾ: ಮುದ್ದೇಬಿಹಾಳ, ಜಿ: ವಿಜಾಪುರ.
2) ದಿ ಡಿವಿಜನಲ್ ಮ್ಯಾನೇಜರ್
ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಲಿ., ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ. ಶ್ರೀ ಭೀಮನಗೌಡ ತಂದೆ ಗುರನಗೌಡ ಬಿರಾದಾರ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ

ದಿನಾಂಕ:20.06.2009 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಕಾರ್ಮಿಕ ಅಧಿಕಾರಿ, ಉಪವಿಭಾಗ-2,
ಬಿಜಾಪುರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

ಪ್ರಕರಣ ಸಂಖ್ಯೆ: ಕಾಅಬಿ-2:ಕಾನಪ:ಮಪ್ರ-51/2010, ದಿನಾಂಕ:17ನೇ ಮಾರ್ಚ್, 2010

ಅರ್ಜಿದಾರರು	**ಪ್ರತಿವಾದಿಗಳು**
ಆರ್. ಕಲ್ಯಾಣಿಬಾಯಿ ಗಂಡ ಆರ್. ರಾಜಾನಾಯಕ, ನಾಯಕ ಮತ್ತು ಇತರರು, ಸಾ: ಮಲಕಾಲವ ಪೋಸ್ಟ್, ತಾ:ಅನಂತಪುರ, ಜಿ:ವಿಜಾಪುರ.	1) ಶ್ರೀ ರಾಜಪ್ಪ ಓ ತಂದೆ ಓ ಕೇಶವಳಯ್ಯ, 5-65 ಓಬುಲನಯುನಿಪಲ್ಲಿ (ವಿ) ಧರ್ಮಾವರಂ, ಅನಂತಪುರಂ ಜಿಲ್ಲಾ, ಆಂಧ್ರಪ್ರದೇಶ. 2) ಶ್ರೀ ರಾಮ ಜನರಲ್ ಇನ್ಸೂರೆನ್ಸ್ ಕಂ.ಲಿ., ಸೀತಾಪುರ, ಜೈಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ರಾಜಾನಾಯಕ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:22.02.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಕಾರ್ಮಿಕ ಅಧಿಕಾರಿ, ಉಪವಿಭಾಗ-2,
ಬಿಜಾಪುರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

ಪ್ರಕರಣ ಸಂಖ್ಯೆ: ಕಾಅಬಿ-2:ಕಾನಪ:ಮಪ್ರ-55/2010, ದಿನಾಂಕ:17ನೇ ಮಾರ್ಚ್, 2010

ಅರ್ಜಿದಾರರು

ಶ್ರೀಮತಿ ಮಮತಾಜ ಬೇಗಂ ಗಂಡ ಮಹ್ಮದ ಅಯುಬ ಮುನ್ಸಿ ಮತ್ತು ಇತರರು, ಸಾ:ಮುದ್ದೇಬಿಹಾಳ, ಜಿ:ವಿಜಾಪುರ.

ಪ್ರತಿವಾದಿಗಳು

1) ಶ್ರೀ ಮಹ್ಮದ ರಫೀಕ್ ತಂದೆ ಅಹ್ಮದ ಸಾಹೆಬ ಮುನ್ಸಿ, ಸಾ:ವಾರ್ಡ ನಂ.25, ಮುಸತಾಫ ಕಾಂಪ್ಲೆಕ್ಸ್, ವಿಜಾಪುರ.
2) ದಿ ಬ್ರ್ಯಾಂಚ್ ಮ್ಯಾನೇಜರ್, ನ್ಯಾಷನಲ್ ಇನ್ಸೂರೆನ್ಸ್ ಕಂ.ಲಿ., ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ಮಹ್ಮದ ಅಯುಬ್ ಮುನ್ಸಿ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:29.02.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿ, ಉಪವಿಭಾಗ-2, ಬಿಜಾಪುರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ.

ಪ್ರಕರಣ ಸಂಖ್ಯೆ: ಕಾಅಬಿ-2:ಕಾನಪ:ಮಪ್ರ-65/2010, ದಿನಾಂಕ:18ನೇ ಮಾರ್ಚ್, 2010

ಅರ್ಜಿದಾರರು

ಶ್ರೀಮತಿ ಶಾಂತಾ ಗಂಡ ವಿಠಲ್ ಕಾಂಬ್ಳೆ, ಮತ್ತು ಇತರರು, ಸಾ:ಜಲನಗರ, ವಿಜಾಪುರ.

ಪ್ರತಿವಾದಿಗಳು

1) ಮಿ. ಪೊಪಟ್ ಸೊಮಾಜಿ ಶೆಲ್ಕೆ, ಪೋಸ್ಟ್, ಆಸ್ತಾ, ಧನಗಾರ ಗಲ್ಲಿ, ತಾ:ವನ್ವಾ ಜಿಲ್ಲಾ: ಸಾಂಗ್ಲಿ ಮಹಾರಾಷ್ಟ್ರ.
2) ದಿ ಮ್ಯಾನೇಜರ್, ನ್ಯೂ ಇಂಡಿಯಾ ಅಶುರನ್ಸ್ ಕಂ.ಲಿ., ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ವಿಠಲ್ ತಂದೆ ಜಯರಾಮ ಕಾಂಬ್ಳೆ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:22.02.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿ, ಉಪವಿಭಾಗ-2, ಬಿಜಾಪುರ.

ಪಿ.ಆರ್.563

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ:ಡಬ್ಲ್ಯೂಸಿಎ:ಎಫ್:ಎಸ್‌ಆರ್-11:2010, ದಿನಾಂಕ:26ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀಮತಿ ಜಯಮ್ಮ ಕೋಂ ಚಂದ್ರೇಗೌಡ @ ಸಣ್ಣ ಮಂಜೇಗೌಡ.

2) ಚಂದ್ರೇಗೌಡ @ ಸಣ್ಣ ಮಂಜೇಗೌಡ ಬಿನ್ ಪುಟ್ಟೇಗೌಡ

3) ವಿದ್ಯಾಶ್ರೀ ಬಿನ್ ಚಂದ್ರೇಗೌಡ ಸಣ್ಣ ಮಂಜೇಗೌಡ, ಮಾಯಸಂದ್ರ ಗ್ರಾಮ, ದುದ್ದ ಹೋಬಳಿ, ಹಾಸನ ತಾಲ್ಲೂಕು, ಹಾಸನ.

ಪ್ರತಿವಾದಿಗಳು

1) ವಿ. ಮಂಜು @ ಮಂಜುನಾಥ ಬಿನ್ ವೇಲಾಯಿದನ್ ನಂ.233, ರಾಜಣ್ಣ ಬಿಲ್ಡಿಂಗ್, ಚಿಕ್ಕ ಬಿದರಕಲ್ಲು, ರೇವಣ್ಣ ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು.

2) ರೀಜನಲ್ ಮ್ಯಾನೇಜರ್ ಶ್ರೀರಾಮ್ ಜನರಲ್ ಇನ್ಸೂರೆನ್ಸ್ ಕಂ.ಲಿ., ಮತ್ತು ಶ್ರೀರಾಮ್ ಚಿಟ್ಸ್ ಕಂ. ಪ್ರೈ. ಲಿಮಿಟೆಡ್ ವಿಲ್ಸನ್ ಗಾರ್ಡನ್, ಬೆಂಗಳೂರು-27 ಮತ್ತು ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ರಘು, ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:23.01.2010 ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ಹಾಸನ ಉಪವಿಭಾಗ,
ಹಾಸನ.

ಪಿ.ಆರ್.539

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಮಂಡ್ಯ ಉಪವಿಭಾಗ-2, ಮಂಡ್ಯ ಇವರ ನ್ಯಾಯಾಲಯ

ಸಂಖ್ಯೆ:ಡಬ್ಲ್ಯೂಸಿಎ:ಎಫ್‌ಸಿ:ಸಿಆರ್-1:2010, ದಿನಾಂಕ:30ನೇ ಮಾರ್ಚ್, 2010

ಅರ್ಜಿದಾರರು

ಶ್ರೀ ದಾಯನಂದಯ್ಯ
ಕೋರ್ಟರ್ಸ್ ನಂ.ಎಫ್-11, ಎಸ್‌ಸಿಎಸ್‌ಎಲ್ ಕ್ಯಾಂಪ್ಸ್, ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ., ಭಾರತೀನಗರ, ಮದ್ದೂರು ತಾಲ್ಲೂಕು.

ಪ್ರತಿವಾದಿಗಳು

ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿ.,
ಕೆ.ಎಂ.ದೊಡ್ಡಿ, ಭಾರತೀನಗರ, ಮದ್ದೂರು ತಾಲ್ಲೂಕು.

ಪ್ರಕಟಣೆ

ಈ ಮೇಲೆ ವಿಳಾಸಿಸಿರುವ ಪ್ರತಿವಾದಿಯವರು ದಿನಾಂಕ:06.01.2010ರಂದು ಈ ನ್ಯಾಯಾಲಯಕ್ಕೆ ಪತ್ರವನ್ನು ಸಲ್ಲಿಸಿ, ಶ್ರೀ ಮಹೇಶ ಎನ್.ಡಿ. ಇವರು ಮೃತಪಟ್ಟಿರುವುದರಿಂದ ಆತನ ಅವಲಂಬಿತರಿಗೆ ವಿತರಿಸಬೇಕಾದ ಪರಿಹಾರವನ್ನು ಈ ನ್ಯಾಯಾಲಯದಲ್ಲಿ ಠೇವಣಿ ಮಾಡಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂಥಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದ ನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ಮಂಡ್ಯ ಉಪವಿಭಾಗ-2 ಮಂಡ್ಯ-571401.

ಪಿ.ಆರ್.560

IN THE COURT OF 6TH ACMM ADDL. CHIEF METROPOLITAN MAGISTRATE BANGALORE CITY

It is here by notified to the public that the Adugodi police station, Bangalore City, have seized the following Vehicle's has unclaimed and such vehicle's are leying in the police station as unclaimed so for. Hence the owner's of the properties (Vehicle's) may put they claim on month from the date of this publication.

Bangalore City. 6th Addl. Chief Metropolitan Magistrate Court,

Dt: Bangalore City.

List of unclaimed vehicle's are Leying in Adugodi police station Bangalore City, Which have been seized Under C-Misc Case.

Sl. No.	C Misc No & P.F. No.	Type of Vehicle & Reg No.	Eng No.	Cha No.
1.	C Misc No.571/05 P.F.No.90/05	RX-135 Yamaha M/C No. EX-284	-	-
2.	C Misc No.105/06 P.F. No.14/06	Hero Honda M/C No.KA-31 J-5910	-	-
3.	C Misc No.69/07 P.F. No.03/07	Bajaj Scooter No. CAL-9136	-	-
4.	C Misc No.197/07 P.F.No.18/07	Bajaj Chetak KA-02-j-8936	06H93CO-9304	-
5.	C Misc No.197/07 P.F.No.18/07	Bajaj Chetak CKK-5109	10E128468	10E128468
6.	C Misc No.229/07 P.F.No.21/07	Kinetic Honda KA-8807	293308NNHG	-
7.	C Misc No.229/07 P.F.No.21/07	Yamaha M/C CTO-2083	ID102748	LIO27485
8.	C Misc No.229/07 P.F.No.21/07	Kinetic Honda KA-05-E-664	123834NTEF	AGFF125183
9.	C Misc No.230/07 P.F.No.22/07	Suzuki Shogan M/C KA-03-U-5537	-	880-F-950200
10.	C Misc No.230/07 P.F. No.22/07	Bajaj Chetak S/C KA-05-S-2786	06496872017	0696833931
11.	C Misc No.230/07 P.F.No.22/07	Kinetic Honda M/C KA-4-J-1278	325036NIE-HL	-
12.	C Misc No.233/07 P.F.No.23/07	Kinetic Honda KA-01-J-4553	438657-NEE	-

Sl. No.	C Misc No & P.F. No.	Type of Vehicle & Reg No.	Eng No.	Cha No.
13.	C Misc No.233/07 P.F.23/07	Hero Honda CD-100 KA-03-W-8277	-	98KIOFO2866
14.	C Misc No.233/07 P.F.No.23/07	TVS Champ KA-01-2803	L6O1F266265	L601F266265
15.	C Misc No.234/07 P.F.No.24/07	Vespa S/C MGO-4472	446812M112160	-
16.	C Misc No.234/07 P.F.No.24/07	Bajaj Sunny KA-04-S-9519	331MBPA14529	-
17.	C Misc No.234/07 P.F.No.24/07	Bajaj Chetak S/C CAI-983	138206232308	-
18.	C Misc No.235/07 P.F.No.25/07	Hero Honda M/C KA-04-ME-537	-	010F168264
19.	C Misc No.235/07 P.F.No.25/07	Bajaj Chetak KA-05-CD-4200	CDGL5052766	06C6808444
20.	C Misc No.235/07 P.F.No.25/07	Lamrate S/C CAK-7235	-	-
21.	C Misc No.285/07 P.F.No.31/07	Suzuki Samurai KA-05-EH-1019	7112M150063	7112F094760
22.	C Misc No.134/09 P.F.No.13/09	Bajaj Discover KA-02-EQ-5963	DSVBLL38119	DSGBLL38232
23.	C Misc No.134/09 P.F.No.13/09	TVS Victor AP-10-AA-6070	3301F377815	N3301M380081

By Order

PR-656

Sheristedar

6th ACMM Court, Bangalore City.

ಅಧ್ಯಾಯ–15

ಕರ್ನಾಟಕ ಸರ್ಕಾರ

ಭಾಷಾಂತರ ನಿರ್ದೇಶನಾಲಯ

ಅಧಿಸೂಚನೆ

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಕೇಂದ್ರ ಅಧಿನಿಯಮ ಸಂಖ್ಯೆ 25005ರ 22) ಪ್ರಕರಣ 2 ಖಂಡ (ಹೆಚ್) ಉಪಖಂಡ (ಸಿ) ಮತ್ತು (ಡಿ) ಮೇರೆಗೆ ಹಾಗೂ ಪ್ರಕರಣ 5ರ (1) ಮತ್ತು (2)ನೇ ಖಂಡದ ಮೇರೆಗೆ ಭಾಷಾಂತರ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಾಧಿಕಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಭಾಷಾಂತರ ನಿರ್ದೇಶನಾಲಯ	ಸಾರ್ವಜನಿಕ ಪ್ರಾಧಿಕಾರ
ಸಹಾಯಕ ಆಡಳಿತಾಧಿಕಾರಿ, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.	ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಉಪ ನಿರ್ದೇಶಕರು-1, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.	ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ
ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಬೆಂಗಳೂರು.	ಮೊದಲ ಅಪೀಲು ಅಧಿಕಾರಿ

ಪಿ.ಆರ್.664 ನಿರ್ದೇಶಕರು.

ಭೂ ದಾಖಲೆಗಳ ಜಂಟಿ ನಿರ್ದೇಶಕರು, ಮರುಭೂಮಾಪನ, ಬೆಳಗಾವಿ

ಅಧಿಸೂಚನೆ

ಸಂಖ್ಯೆ:ಮರುಭೂಮಾಪನ:ನೋ:12/2010-11, ದಿನಾಂಕ:1ನೇ ಏಪ್ರಿಲ್, 2010

ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 106 ಹಾಗೂ ಘನ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕಂ.ಇ/29/ಭೂದಾಸ/2009, ದಿನಾಂಕ:20.02.2009ರ ಮೇರೆಗೆ 109, 112 ಹಾಗೂ 152ರಲ್ಲಿ ನಿಹಿತವಾದ ಅಧಿಕಾರದ ಮೇರೆಗೆ ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಈ ಕೆಳಕಂಡ ಗ್ರಾಮದಲ್ಲಿ ಮರುಭೂಮಾಪನ ಹಾಗೂ ಮರುಭೂವರ್ಗೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಮೇಲ್ಕಂಡ ಯೋಜನೆಯಲ್ಲಿ ಬರತಕ್ಕ ಗ್ರಾಮದ ಎಲ್ಲಾ ಹಿಡುವಳಿದಾರರು/ ಮಾಲೀಕರು ಅಳತೆಗೆ ಬರತಕ್ಕ ಮೋಜಣಿದಾರರಿಗೆ ಅಗತ್ಯ ಸಹಾಯವನ್ನು (ಕೂಲಿಗಳನ್ನು ಒದಗಿಸುವುದು ಇತ್ಯಾದಿ) ಪೂರೈಸತಕ್ಕದ್ದು.

ಭೂದಾಖಲೆಗಳ ಜಂಟಿ ನಿರ್ದೇಶಕರು,
ಮರುಭೂಮಾಪನ, ಬೆಳಗಾವಿ.

ಅ.ನಂ.	ತಾಲ್ಲೂಕು	ಹೋಬಳಿ	ಗ್ರಾಮಗಳ ಹೆಸರು
1.	ಬೆಳಗಾವಿ	ಕಾಕತಿ	ಅಗಸಗಿ

ಷರಾ: ಭೂಮಾಪನ ತಂಡವು ಆಯಾ ಗ್ರಾಮಗಳಲ್ಲಿ ಬರತಕ್ಕ ಸರ್ಕಾರಿ ನಂಬರುಗಳನ್ನು ಅಳತೆ ಮಾಡಿ ಸುತ್ತೋಲೆಯಂತೆ ದಾಖಲೆಗಳನ್ನು ತಯಾರಿಸುವುದು.

ಭೂದಾಖಲೆಗಳ ಜಂಟಿ ನಿರ್ದೇಶಕರು,
ಪಿ.ಆರ್.657 ಮರುಭೂಮಾಪನ, ಬೆಳಗಾವಿ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪ ವಿಭಾಗ-2, ಬೈಂದೂರ್ ವೆಲ್ ವೃತ್ತ, ಕಂಕನಾಡಿ, ಮಂಗಳೂರು-2, ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ:ಎಸ್ಆರ್-4/2010 ಎಫ್, ದಿನಾಂಕ:25ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀಮತಿ ರುಖ್ಸ ಗಂಡ ದಿವಂಗತ ರಹೀಂ @ ರಹೀಮಾನ್, 31 ವರ್ಷ
2) ಆಯಿಶತ್ ತೌಸೀನಾ, 12 ವರ್ಷ
3) ಆಯಿಶತ್ ತಸ್ರೀಪಾ 11 ವರ್ಷ
4) ಆಯಿಶತ್ ಔಯಿಬಾ, 8 ವರ್ಷ
5) ಪಾತೀಮಾತ್ ಶಾಹೀದಾ 4 ವರ್ಷ
(ಮೃತ ರಹೀಂ ಮಕ್ಕಳು)
6) ಶ್ರೀಮತಿ ಮರಿಯಮ್ಮ ಪ್ರಾಯ 56 ವರ್ಷ, ಮೃತರ ತಾಯಿ.
'ಹೊಸಮಜಲು ಮನೆ' ಕಾಕ್ರಾಡಿ ಗ್ರಾಮ ಪುತ್ತೂರು ತಾಲ್ಲೂಕು.

ಪ್ರತಿವಾದಿಗಳು

1) ವಿಶ್ವನಾಥ ಸುವರ್ಣ ತಂದೆ ಶೇಷಪ್ಪ ಪೂಜಾರಿ, ಪ್ರಾಯ 45 ವರ್ಷ.
ವಾಸ: ಕಾಕ್ರಾಡಿ ವೈಲು ನೆಲ್ಯಾಡಿ ಅಂಚೆ, ಪುತ್ತೂರು ತಾಲ್ಲೂಕು.
2) ಶಾಖಾ ಅಧಿಕಾರಿ, ಶ್ರೀರಾಮ್ ಜನರಲ್ ಇನ್ಶೂರೆನ್ಸ್ ಕಂಪನಿ 10003ಇ-8ಆರ್11 ಸಿಓ ಇಂಡಸ್ಟ್ರೀಯಲ್ ಏರಿಯಾ, ಸೀತಾಪುರ, ರಾಜಸ್ಥಾನ.

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ರುಖ್ಸಿ ಇವರು ತಮ್ಮ ಗಂಡನಾದ ಶ್ರೀ ದಿವಂಗತ ರಹೀಂ @ ರಹೀಮಾನ್ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:19.12.2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್. ಗೋಪಾಲಗೌಡ
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು, ದಕ್ಷಿಣ
ಕನ್ನಡ ಉಪವಿಭಾಗ-2, ಮಂಗಳೂರು.

ಪಿ.ಆರ್.523

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ ಕೋಲಾರ
ಪ್ರಕರಣ ಸಂಖ್ಯೆ: ಡಬ್ಲ್ಯೂಸಿಎ:ಎಫ್.ಸಿ-07/2007

ಅರ್ಜಿದಾರರು		ಪ್ರತಿವಾದಿಗಳು
1) M. Nazeer S/o Mohamed Sab 2) S. Sayeeda W/o M. Nazeer R/o B-267, Noogal Bande, Mulbagal Town, Kolar District.	V/s	1) S. Mahendra Kumar S/o A. Shankar No.14081 K-2, Navagraha Temple Street, Mysore. 2) The National Insurance Co.Ltd., Mysore Branch Office. (602403) 371/A 3rd Floor, Prestige Shoping Archad Ramswamy Circle, Mysore-570024.

ಅಧಿಸೂಚನೆ

ಅರ್ಜಿದಾರರಾದ M. Nazeer ಇವರು ತಮ್ಮ ಮಗ Wasim Pasha ಇವರು 1ನೇ ಪ್ರತಿವಾದಿ S. Mahendra Kumar ರವರ ಬಳಿ ಕ್ಲೀನರ್ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:15.12.2006 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:30.03.2010 ರಂದು ನೀಡಲಾಗಿದೆ.

ಎಸ್. ರೇವಣ್ಣ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ
ನಷ್ಟ ಪರಿಹಾರ ಆಯುಕ್ತರು,
ಕೋಲಾರ ಉಪವಿಭಾಗ, ಕೋಲಾರ.

ಪಿ.ಆರ್.561

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ: ಎಎಲ್‌ಸಿ-4/ಪಿಜಿಎ/ಎಸ್.ಆರ್-26/2009-10

ಅರ್ಜಿದಾರರು		ಪ್ರತಿವಾದಿಗಳು
ಶ್ರೀಮತಿ ಶಾಂತಮ್ಮ ಕೋಂ ಲೇಟ್ ಪಿ. ಈಶ್ವರ್ ಕೇರಾಫ್ ಇ. ರಮೇಶ್ ನಾಯಕ್, ಮನೆ ನಂ.792, 3ನೇ ಕ್ರಾಸ್ ವಿಜಯಲಕ್ಷ್ಮಿ ಲೇಔಟ್, ಬಾಗಲುಗುಂಟೆ, ಬೆಂಗಳೂರು-73.	ವಿರುದ್ಧ	ವಿಭಾಗೀಯ ನಿಯಂತ್ರಕರು ಕೆ.ಎಸ್.ಆರ್.ಟಿ.ಸಿ. ಬೆಂಗಳೂರು ಕೇಂದ್ರಿಯ ವಿಭಾಗ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:24.06.2008ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಅವರ ಪತಿ ಪಿ. ಈಶ್ವರ್, ಇವರು ಪ್ರತಿವಾದಿ ಸಂಸ್ಥೆಯಲ್ಲಿ 32 ವರ್ಷಗಳ ಸೇವೆ ಸಲ್ಲಿಸಿ ದಿನಾಂಕ:31.03.1996 ರಂದು ಸೇವೆಯಿಂದ ನಿವೃತ್ತರಾಗಿ ತದನಂತರ, ದಿನಾಂಕ:16.01.2002 ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಮೃತರ ವಾರಸುದಾರರಾದ ತಮಗೆ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು, ಮತ್ತು
ನಿಯಂತ್ರಣಾಧಿಕಾರಿಗಳು, ಉಪಧನ ಪಾವತಿ
ಕಾಯ್ದೆ, ವಿಭಾಗ-4, ಬೆಂಗಳೂರು.

ಪಿ.ಆರ್.576

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಸಂಖ್ಯೆ: ಕಾನಪ/ಡಬ್ಲ್ಯೂಸಿಎ/ಸಿಆರ್-10/2010, ದಿನಾಂಕ:31ನೇ ಮಾರ್ಚ್, 2010

ಅರ್ಜಿದಾರರು	ಪ್ರತಿವಾದಿಗಳು
1) ಶ್ರೀಮತಿ ಮಹೇಶ್ವರಿ ಕೋಂ ಎನ್. ವೆಂಕಟೇಶ್, ಅಣ್ಣಾನಗರ ಮೈನ್ ರಸ್ತೆ, ಶಿವಮೊಗ್ಗ.	1) ಎನ್. ವೆಂಕಟೇಶ್ ಬಿನ್ ನಾರಾಯಣಸ್ವಾಮಿ ಟ್ರಾಕ್ಟರ್ ಸಂಖ್ಯೆ: ಕೆಎ-16/ಟಿ-3539ರ ಮಾಲೀಕರು ಮಂಜುನಾಥ ನಿಲಯ, ಕ್ಲಿನಿಕ್ ಅಶ್ವಿನಿ ಎದುರು, ಅಣ್ಣಾನಗರ ಮೈನ್ ರಸ್ತೆ, ಶಿವಮೊಗ್ಗ. 2) ದಿ ಬ್ರಾಂಚ್ ಮ್ಯಾನೇಜರ್, ಮೆ: ನ್ಯೂ ಇಂಡಿಯಾ ಅಶೂರೆನ್ಸ್ ಕಂ.ಲಿ., ನೆಹರು ರಸ್ತೆ, ಶಿವಮೊಗ್ಗ.

ಅಧಿಸೂಚನೆ

ಅರ್ಜಿದಾರರು ಶಶಿಕುಮಾರ್ ಇವರು ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ:15.04.2010 ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತಳಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಪಿ. ವಿಜಯದೇವ ನಾಯ್ಕ್
ಕಾರ್ಮಿಕ ಪರಿಹಾರ ಆಯುಕ್ತರು ಕಾರ್ಮಿಕ ಪರಿಹಾರ
ಆಯುಕ್ತರವರ ನ್ಯಾಯಾಲಯ, ಶಿವಮೊಗ್ಗ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಸಂಖ್ಯೆ: ಕಾನಪ/ಡಬ್ಲ್ಯೂಸಿಎ/ಸಿಆರ್-12/2010, ದಿನಾಂಕ:31ನೇ ಮಾರ್ಚ್, 2010

ಅರ್ಜಿದಾರರು

ಮಹದೇವಮ್ಮ ಕೋಂ ಲೇಟ್ ಚಿಕ್ಕ ಮಾದ,
7ನೇ ಕ್ರಾಸ್, ಹರಿಗೆ, ವಿದ್ಯಾನಗರ, ಶಿವಮೊಗ್ಗ.
1) ಶೋಭ ಸಿ.
2) ಕಿರಣ್ ಸಿ.

ಪ್ರತಿವಾದಿಗಳು

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಪರಿವರ್ತಕ ದುರಸ್ತಿ ಉಪವಿಭಾಗ, ಮೆಸ್ಕಾಂ, ಶಿವಮೊಗ್ಗ.

ಅಧಿಸೂಚನೆ

ಅರ್ಜಿದಾರರು ಮಹದೇವಮ್ಮ ಮತ್ತು ಇತರರು ಇವರು ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ:13.01.2010 ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತಳಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಪಿ. ವಿಜಯದೇವ ನಾಯ್ಕ್
ಕಾರ್ಮಿಕ ಪರಿಹಾರ ಆಯುಕ್ತರು ಕಾರ್ಮಿಕ ಪರಿಹಾರ
ಆಯುಕ್ತರವರ ನ್ಯಾಯಾಲಯ, ಶಿವಮೊಗ್ಗ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಸಂಖ್ಯೆ: ಕಾನಪ/ಡಬ್ಲ್ಯೂಸಿಎ/ಸಿಆರ್-13/2010, ದಿನಾಂಕ:31ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀಮತಿ ನೇತ್ರಾ ಕೋಂ ದಿ: ಗೋವಿಂದ
2) ಕು: ಸಮಂಜನಾ ಬಿನ್ ದಿ: ಗೋವಿಂದ
3) ಸಣ್ಣಮ್ಮ ಕೋಂ ದಿ: ನಂಜುಂಡ,
ವಾಸ: ರಂಗನಾಥಪುರ, ಹೆಚ್.ಕೆ. ಜಂಕ್ಷನ್,
ಭದ್ರಾವತಿ ತಾಲ್ಲೂಕು.

ಪ್ರತಿವಾದಿಗಳು

1) ಹನುಮಂತಪ್ಪ ಬಿನ್ ಶೆಟ್ಟಿಯ ಬೋವಿ, ಮಾಲೀಕರು
ಟ್ರಾಕ್ಟರ್ ಸಂಖ್ಯೆ: ಕೆ-14-ಟಿ-895-96ರ ಮಾಲೀಕರು,
ಹುಣಸೆಕಟ್ಟೆ, ಭದ್ರಾವತಿ ತಾಲ್ಲೂಕು.
2) ಹೆಚ್.ಆರ್. ಮಂಜುನಾಥ ಬಿನ್ ಲೇಟ್ ರಾಮಚಂದ್ರ
ಟ್ರಾಕ್ಟರ್ ಡ್ರೈವರ್, ಹಗಲೆಮನೆ, ಭದ್ರಾವತಿ ತಾಲ್ಲೂಕು.
3) ರಾಯಲ್ ಸುಂದರಂ ಅಲಿಯನ್ಸ್ ಇನ್ಶೂರೆನ್ಸ್ ಕಂ.ಲಿ.,
ಚೆನ್ನೈ.

ಅಧಿಸೂಚನೆ

ಅರ್ಜಿದಾರರು ನಂಜುಂಡ ಇವರು ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ:09.08.2009 ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತಳಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಪಿ. ವಿಜಯದೇವ ನಾಯ್ಕ್
ಕಾರ್ಮಿಕ ಪರಿಹಾರ ಆಯುಕ್ತರು ಕಾರ್ಮಿಕ ಪರಿಹಾರ
ಆಯುಕ್ತರವರ ನ್ಯಾಯಾಲಯ, ಶಿವಮೊಗ್ಗ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಸಂಖ್ಯೆ: ಕಾನಪ/ಡಬ್ಲ್ಯೂಸಿಎ/ಸಿಆರ್-14/2010, ದಿನಾಂಕ:31ನೇ ಮಾರ್ಚ್, 2010

ಅರ್ಜಿದಾರರು

1) ಶ್ರೀ ಕುಮಾರ್ ಬಿನ್ ಕುಂಜಪ್ಪ

2) ಶ್ರೀಮತಿ ಶಾಂತಮ್ಮ ಕೋಂ ಕುಮಾರ್, ಇವರಿಬ್ಬರ ವಾಸ: ರಂಗನಾಥಪುರ, ಭದ್ರಾವತಿ ತಾಲ್ಲೂಕು.

ಪ್ರತಿವಾದಿಗಳು

1) ಹನುಮಂತಪ್ಪ ಬಿನ್ ಶೆಟ್ಟಿಯ ಬೋವಿ, ಮಾಲೀಕರು ಟ್ರಾಕ್ಟರ್ ಸಂಖ್ಯೆ: ಕೆ-14-ಟಿ-895-96ರ ಮಾಲೀಕರು, ಹುಣಸೆಕಟ್ಟೆ, ಭದ್ರಾವತಿ ತಾಲ್ಲೂಕು.

2) ಹೆಚ್.ಆರ್. ಮಂಜುನಾಥ ಬಿನ್ ಲೇಟ್ ರಾಮಚಂದ್ರ ಟ್ರಾಕ್ಟರ್ ಡ್ರೈವರ್, ಹಗಲೆಮನೆ, ಭದ್ರಾವತಿ ತಾಲ್ಲೂಕು.

3) ರಾಯಲ್ ಸುಂದರಂ ಅಲಿಯನ್ಸ್ ಇನ್ಶೂರೆನ್ಸ್ ಕಂ.ಲಿ., ಚೆನ್ನೈ.

ಅಧಿಸೂಚನೆ

ಅರ್ಜಿದಾರರು ವಿಜಯ್‌ಕುಮಾರ್ ಇವರು ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ:09.08.2009 ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತಳಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಪಿ. ವಿಜಯದೇವ ನಾಯ್ಕ್

ಕಾರ್ಮಿಕ ಪರಿಹಾರ ಆಯುಕ್ತರು ಕಾರ್ಮಿಕ ಪರಿಹಾರ ಆಯುಕ್ತರವರ ನ್ಯಾಯಾಲಯ, ಶಿವಮೊಗ್ಗ.

ಪಿ.ಆರ್.589

IN THE COURT OF COMMISSIONER FOR WORKMEN'S COMPENSATION BIDAR

No.LOB/WCA/Cr-F-16/2010

Applicants:

1) ಮಾಜಿ ಸೈನಿಕ ಎಂದರೆ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ್ ಸೆಕ್ಯೂರಿಟಿ ಕೋರ್, ಜನರಲ್‌ರಿಸರ್ವ್‌ಇಂಜಿನಿಯರಿಂಗ್‌ಫೋರ್ಸ್, ಲೋಕಸಹಾಯಕಸೇನಾ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು,

2) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

3) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ.

ಅಥವಾ

ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಲ್ಲಿ ಬಿಡುಗಡೆಯಾದವರು.

ಅಥವಾ

ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ ನಿರ್ದಿಷ್ಟ ಅವಧಿಯನ್ನು ಪೂರೈಸಿದ. ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ನಮೂದಿಸಿದ ವರ್ಗದ ಸಿಬ್ಬಂದಿಯವರು:-

1) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು,

2) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು:-

ವಿವರಣೆ (1) ಕೇಂದ್ರ ಸಶಸ್ತ್ರ ದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ಮೇಲ್ಕಾಣಿಸಿದ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.

ಎ) ಭಾರತ ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: 36034: 27:84-ಸಿಬ್ಬಂದಿ (ಎಸ್‌ಸಿಟಿ), ದಿನಾಂಕ: 02-05-1985 ರನ್ವಯ ಮಾಜಿ ಸೈನಿಕರು ಅವರಿಗೆ ನೀಡಿರುವ ಪ್ರಯೋಜನವಾದ ಪುನರ್ ನೇಮಕವನ್ನು ಉಪಯೋಗಿಸಿಕೊಂಡು ಒಂದು ಬಾರಿ ಸರ್ಕಾರಿ ಹುದ್ದೆಗೆ ಆಯ್ಕೆಯಾದಲ್ಲಿ ಅಂತಹ ಮಾಜಿ ಸೈನಿಕರ ಸ್ಥಾನವು ಸರ್ಕಾರಿ ಉದ್ಯೋಗದ ಪುನರ್ ನೇಮಕಕ್ಕೆ ರದ್ದಾಗುತ್ತದೆ. ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ.ಓ.ಇ:90:ಪೊಸಿಆ:2005 ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿನ ಮಾರ್ಗಸೂಚಿಯನ್ವಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

ಬಿ) ಈ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದ ನಂತರ ಯಾವೊಬ್ಬ ಮಾಜಿ ಸೈನಿಕ ಸರ್ಕಾರಿ ನೌಕರಿಯೊಂದಕ್ಕೆ ಮಾಜಿ ಸೈನಿಕ ಮೀಸಲಾತಿ ಪಡೆದು ಸೇರಿದರೆ, ಅಂತಹ ಮಾಜಿ ಸೈನಿಕ ತಾನು ನೌಕರಿಗೆ ಸೇರಿದ ಬಗ್ಗೆ ಕೇಂದ್ರ ಪರಿಹಾರ ಸಮಿತಿಯ ಕಾರ್ಯದರ್ಶಿಗಳ ಕಛೇರಿಗೆ ಮಾಹಿತಿ ನೀಡತಕ್ಕದ್ದು. ಇಂತಹ ಅಭ್ಯರ್ಥಿಯು ಮಾಜಿ ಸೈನಿಕ ಮೀಸಲಾತಿಗೆ ಅನರ್ಹನಾಗುತ್ತಾನೆ.

ಸಿ) 'ಮಾಜಿ ಯೋಧ' ಎಂಬ ಶಬ್ದವು ಚಾಲ್ತಿಯಲ್ಲಿರುವ ಸಂಬಂಧಿಸಿದ ನಿಯಮಾವಳಿಗಳಲ್ಲಿನ ಪರಿಭಾಷೆಯ ಅರ್ಥ ಹೊಂದಿದೆ.

ಸೇವಾನಿರತ ಅಭ್ಯರ್ಥಿಗಳಿಗೆ:-

ಎ) ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಈ ಕೆಳಕಂಡ ವಯೋಮಿತಿ ಮೀರಿರಬಾರದು.

ಬಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ 40 ವರ್ಷಗಳು.

ಸಿ) ಇತರೆ ಅಭ್ಯರ್ಥಿಗಳು 35 ವರ್ಷಗಳು.

ಮೇಲ್ಕಂಡ ಎಲ್ಲಾ ವರ್ಗಗಳಿಗೆ ವಯೋಮಿತಿ ರಿಯಾಯಿತಿ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸೂಚನೆಯನ್ನು ಎಚ್ಚರಿಕೆಯಿಂದ ಓದಿ ರಿಯಾಯಿತಿಗೆ ಅರ್ಜಿ ಸಲ್ಲಿಸತಕ್ಕದ್ದು.

5)ವಿದ್ಯಾರ್ಹತೆ:

ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನಿಗದಿಪಡಿಸಿದ ವಿದ್ಯಾರ್ಹತೆ ವಿವರಗಳು ಕೆಳಕಂಡಂತಿವೆ.

ಕ್ರ.ಸಂ	ವೃಂದ	ಹುದ್ದೆಗಳು	ಸಂಖ್ಯೆ	ನಿಗದಿಪಡಿಸಿದ ವಿದ್ಯಾರ್ಹತೆ	
1	ಗ್ರೂಪ್- ಬಿ	ಅಧೀಕ್ಷಕರು	4	ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದ ಪದವಿ ಹಾಗೂ ಎಂ.ಎಸ್.ಡಬ್ಲ್ಯೂ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.	
2	ಗ್ರೂಪ್- ಸಿ	ಪ್ರ.ದ.ಸ	4	ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು.	
		ದ್ವಿ.ದ.ಸ	5	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು.	
		ಬೆರಳಚ್ಚುಗಾರರು	9	ಎಸ್.ಎಸ್.ಎಲ್.ಸಿ ಉತ್ತೀರ್ಣ ಮತ್ತು ಕನ್ನಡ ಮತ್ತು ಆಂಗ್ಲ ಭಾಷೆಗಳ ಸೀನಿಯರ್ ಟೈಪಿಂಗ್‌ನಲ್ಲಿ ತೇರ್ಗಡೆ ಹೊಂದಿರಬೇಕು. (ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ)	
		ಹೆಡ್ ವಾರ್ಡರ್	6	ಎಸ್.ಎಸ್.ಎಲ್.ಸಿ ತೇರ್ಗಡೆ	ನಿಗದಿತ ದೇಹದಾರ್ಢ್ಯತೆ ಹೊಂದಿರಬೇಕು.
		ವಾರ್ಡರ್	42	ಎಸ್.ಎಸ್.ಎಲ್.ಸಿ ತೇರ್ಗಡೆ	

ಟಿಪ್ಪಣಿ:

1) ಡಿಪ್ಲೊಮ ಇತ್ಯಾದಿ ವಿದ್ಯಾರ್ಹತೆಗಳು ಪದವಿಗೆ ಸಮಾನವಾಗುವುದಿಲ್ಲ. ಆದ್ದರಿಂದ ಅಧೀಕ್ಷಕರ/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಈ ವಿದ್ಯಾರ್ಹತೆಯ ಅಭ್ಯರ್ಥಿಗಳು ಅರ್ಹರಾಗುವುದಿಲ್ಲ.
2) ಮಾಜಿ ಸೈನಿಕ ಅಭ್ಯರ್ಥಿಗಳು ಸೈನ್ಯದಲ್ಲಿ ನೀಡಿದ ಪ್ರಮಾಣ ಪತ್ರವನ್ನು ನಿಗದಿತ ಕಡೆಯ ದಿನಾಂಕದೊಳಗೆ ಹೊಂದಿದ್ದರೆ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ಮಾತ್ರ ಪರಿಗಣಿಸಲಾಗುವುದು.
3) ನಿಗದಿಪಡಿಸಿದ ಕೊನೆಯ ದಿನಾಂಕದಂದು ನಿಗದಿತ ವಿದ್ಯಾರ್ಹತೆಯಾದ ಸ್ನಾತಕೋತ್ತರ ಪದವಿ, ಪದವಿ, ಎಸ್.ಎಸ್.ಎಲ್.ಸಿ ಮತ್ತು ಇನ್ನಿತರೆ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ. ಮೇಲಿನ ವಿದ್ಯಾರ್ಹತೆಯನ್ನು ಹೊರತುಪಡಿಸಿ ಬೇರೆ ಯಾವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.

6) ಸಹಿಷ್ಣುತೆ ಪರೀಕ್ಷೆ (Endurance Test) ಮತ್ತು ದೇಹದಾರ್ಢ್ಯತೆ ಪರೀಕ್ಷೆ: (ಹೆಡ್‌ವಾರ್ಡರ್ ಮತ್ತು ವಾರ್ಡರ್ ಹುದ್ದೆಗಳಿಗೆ ಮಾತ್ರ)

ಎ) ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯನ್ನು ಬೆಂಗಳೂರಿನಲ್ಲಿ ಮಾತ್ರ ನಡೆಸಲಾಗುವುದು. ಜುಲೈ 2010 ಅಥವಾ ನಂತರದ ತಿಂಗಳುಗಳಲ್ಲಿ ಈ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಅಭ್ಯರ್ಥಿಯು ಓ.ಎಂ.ಆರ್. ನಲ್ಲಿ ನೀಡಿರುವ ಮಾಹಿತಿ ಮೇರೆಗೆ ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಿಗೆ ಕರೆಯಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಓ.ಎಂ.ಆರ್ ಅರ್ಜಿಯನ್ನು ಬಹಳ ಜಾಗರೂಕತೆಯಿಂದ ತುಂಬಬೇಕು. ಒಂದು ವೇಳೆ ಯಾವುದೇ ತಪ್ಪು/ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವು ರದ್ದಾಗುತ್ತದೆ. ಇದಕ್ಕೆ ಅಭ್ಯರ್ಥಿಯೇ ಸಂಪೂರ್ಣ ಜವಾಬ್ದಾರನಾಗಿರುತ್ತಾನೆ. (ಆಯ್ಕೆ ಸಮಿತಿಯು ಪರೀಕ್ಷಾ ಕೇಂದ್ರವನ್ನು ರದ್ದುಪಡಿಸುವ ಅಥವಾ ಬದಲಾವಣೆ ಮಾಡುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ).

ಬಿ) ಅಭ್ಯರ್ಥಿಗಳಿಗೆ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಯ ದಿನಾಂಕ, ಸಮಯ ಮತ್ತು ಸ್ಥಳವನ್ನು ಪ್ರತ್ಯೇಕವಾಗಿ ಅಂಚೆ ಮುಖಾಂತರ ನೀಡಲಾಗುವುದಿಲ್ಲ. ಆದರೆ ದೈಹಿಕ ಪರೀಕ್ಷೆಯ ಕರೆ ಪತ್ರವನ್ನು ಈ ಕಛೇರಿಯ ಅಧಿಕೃತ ವೆಬ್‌ಸೈಟ್ (www.crckar.org) ನಿಂದ ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು (ಡೌನ್‌ಲೋಡ್). ಈ ಸಂಬಂಧ ಅಭ್ಯರ್ಥಿಗಳು ಈ ಕಛೇರಿಯ ಅಧಿಕೃತ ವೆಬ್‌ಸೈಟ್ (www.crckar.org)ನ್ನು ಮೇಲಿಂದ ಮೇಲೆ ಗಮನಿಸುತ್ತಿರುವುದು ಸೂಕ್ತ. ಕರೆಪತ್ರವನ್ನು ಪಡೆಯದೇ ಪರೀಕ್ಷೆಗೆ ಹಾಜರಾದಲ್ಲಿ ಅಂತಹವರಿಗೆ ದೈಹಿಕ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ. ಅಭ್ಯರ್ಥಿಗಳು ದೈಹಿಕ ಪರೀಕ್ಷೆಗೆ ಬರುವಾಗ, ಕರೆಪತ್ರದ ಜೊತೆಗೆ ಈ ಕೆಳಕಂಡ ಯಾವುದಾದರೊಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

1) ಪಾಸ್‌ಪೋರ್ಟ್ (Passport),
2) ಚಾಲನಾ ಪರವಾನಗಿ ಪತ್ರ (Driving License),
3) ಪಾನ್‌ಕಾರ್ಡ್ (PAN Card),
4) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೊಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card),
5) ಸಾರ್ವಜನಿಕ ಬ್ಯಾಂಕುಗಳು/ ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರವಿರುವ ಪಾಸ್ ಪುಸ್ತಕ (Bank Pass Book with Photograph),
6) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲೆಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with Photograph),
7) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Community Certificate with Photo),
8) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ / ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book / pension payment order),
9) ಎನ್.ಆರ್.ಇ.ಜಿ.ಎಸ್ ಯಿಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ (Job cards with Photograph),
10) ಎಲೆಕ್ಟ್ರೋಲ್ ಫೋಟೋ ಗುರುತಿನ ಚೀಟಿ (EPIC)

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಸಹ ತರತಕ್ಕದ್ದು, ತಪ್ಪಿದಲ್ಲಿ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ನಿಗದಿತ ದಿನಾಂಕ ಹಾಗೂ ಸಮಯದಲ್ಲಿ ಹಾಜರಾಗದಿದ್ದ ಅಂತಹವರನ್ನು ಅನರ್ಹಗೊಳಿಸಲಾಗುವುದು ಹಾಗೂ ಬದಲಿ ದಿನಾಂಕವನ್ನು ನೀಡಲಾಗುವುದಿಲ್ಲ.

ಸಿ) ಸಹಿಷ್ಣುತೆ ಪರೀಕ್ಷೆ: (Endurance Test):

ದೇಹದಾರ್ಢ್ಯತೆ ಪರೀಕ್ಷೆಗೆ ಅರ್ಹರಾಗಲು ಅಭ್ಯರ್ಥಿಗಳು ಈ ಕೆಳಗಿನ ಎಲ್ಲಾ ಸಹಿಷ್ಣುತೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು ಹಾಗೂ ಈ ಕೆಳಗಿನ ಎಲ್ಲಾ ಸಹಿಷ್ಣುತೆ ಪರೀಕ್ಷೆಗಳನ್ನು ಈ ಕೆಳಗೆ ನಮೂದಿಸಿರುವ ಕ್ರಮದಲ್ಲಿಯೇ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಈ ಪರೀಕ್ಷೆಗಳಲ್ಲಿ ಭಾಗವಹಿಸುವುದನ್ನು ತಿರಸ್ಕರಿಸುವವರು/ವಿಫಲವಾಗುವವರು ಅನರ್ಹತೆಗೆ ಒಳಗಾಗುವರು. ಪ್ರತಿಯೊಂದು ಸಹಿಷ್ಣುತೆ ಪರೀಕ್ಷೆ ಮುಗಿದ ನಂತರ ನಿಗದಿತ ನಮೂನೆಗೆ ಅಭ್ಯರ್ಥಿಯು ಸಹಿ ಹಾಕಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಯು ಅನರ್ಹತೆಗೊಳಗಾಗುವರು. ಸಹಿಷ್ಣುತೆ ಪರೀಕ್ಷೆಗೆ ಅಂಕಗಳನ್ನು ನೀಡಲಾಗುವುದಿಲ್ಲ. ಇವು ಕೇವಲ ಅರ್ಹತೆಗೆ ಮಾತ್ರ ಸೀಮಿತವಾಗಿರುತ್ತದೆ.

ಹೆಡ್‌ವಾರ್ಡರ್ ಮತ್ತು ವಾರ್ಡರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕೆಳಕಾಣಿಸಿದಂತೆ ಸಹಿಷ್ಣುತೆ ಪರೀಕ್ಷೆಗಳಲ್ಲಿ ಭಾಗವಹಿಸತಕ್ಕದ್ದು.

	ಪುರುಷ			ಮಹಿಳಾ/ ಮಾಜಿ ಸೈನಿಕ	
	ಅಂಶ (item)	ಅರ್ಹತಾ ಸಮಯ/ ದೂರ		ಅಂಶ (item)	ಅರ್ಹತಾ ಸಮಯ/ ದೂರ
1	100 ಮೀ ಓಟ	15 ಸೆಕೆಂಡ್‌ಗಳಲ್ಲಿ		100 ಮೀ ಓಟ	18.50 ಸೆಕೆಂಡ್‌ಗಳು
2	ಎತ್ತರ ಜಿಗಿತ	1.20 ಮೀ		ಎತ್ತರ ಜಿಗಿತ	0.9 ಮೀ
3	ಉದ್ದ ಜಿಗಿತ	3.80 ಮೀ		ಉದ್ದ ಜಿಗಿತ	2.50 ಮೀ
4	ಗುಂಡು ಎಸೆತ 7.26 Kg	5.60 ಮೀ		ಗುಂಡು ಎಸೆತ 4.00 Kg	3.75 ಮೀ
5	800 ಮೀ ಓಟ	2 ನಿಮಿಷ 50 ಸೆಕೆಂಡ್ಸ್		200 ಮೀ ಓಟ	40 ಸೆಕೆಂಡ್ಸ್

1. ಅಭ್ಯರ್ಥಿಗಳು ಮೇಲಿನ 5 ಸಹಿಷ್ಣುತೆ ಪರೀಕ್ಷೆಗಳ ಪೈಕಿ ಕನಿಷ್ಠ 3 ರಲ್ಲಿ ಉತ್ತೀರ್ಣರಾಗಬೇಕು.
2. ಸಹಿಷ್ಣುತೆ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತಾದಾಯಕ ಪರೀಕ್ಷೆಯಾಗಿರುತ್ತದೆ.
3. ಪ್ರತಿ ಅಭ್ಯರ್ಥಿಗೆ ಎತ್ತರ ಜಿಗಿತ, ಉದ್ದ ಜಿಗಿತ ಮತ್ತು ಗುಂಡು ಎಸೆತ (Shot put) ಗಳಲ್ಲಿ 3 ಅವಕಾಶಗಳನ್ನು ಕೊಡಲಾಗುವುದು.

ಮೇಲಿನ 3 ಸಹಿಷ್ಣುತೆ ಪರೀಕ್ಷೆಗಳಲ್ಲಿ ಪಾಸಾಗದೇ ಇದ್ದಲ್ಲಿ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

ಡಿ) ದೇಹದಾರ್ಢ್ಯತೆ ಪರೀಕ್ಷೆ (ಸಹಿಷ್ಣುತೆ ಪರೀಕ್ಷೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳಿಗೆ ಮಾತ್ರ):-

ಎಲ್ಲಾ ಅಭ್ಯರ್ಥಿ, ಮಾಜಿ ಸೈನಿಕ ಮತ್ತು ಸೇವಾ ನಿರತ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ.

ಅ)

	ಪುರುಷ ಅಭ್ಯರ್ಥಿಗಳಿಗೆ		ಮಹಿಳಾ ಅಭ್ಯರ್ಥಿಗಳಿಗೆ
1	ಎತ್ತರ 168 ಸೆಂ.ಮೀ		157 ಸೆಂ.ಮೀ
2	ತೂಕ (ಅನ್ವಯಿಸುವುದಿಲ್ಲ)		45 ಕೆ.ಜಿ
3	ಎದೆಯ ಸುತ್ತಳತೆ: 5 ಸೆಂ.ಮೀ ವಿಸ್ತರಿಸಿದಾಗ 86 ಸೆಂ.ಮೀ ಗಿಂತ ಕಡಿಮೆ ಇರಬಾರದು.		ಮಹಿಳಾ ಅಭ್ಯರ್ಥಿಗಳಿಗೆ ಅನ್ವಯಿಸುವುದಿಲ್ಲ.

ಆ)

ದೃಷ್ಟಿ ಸಾಮರ್ಥ್ಯ

ದೂರದ ದೃಷ್ಟಿ		ಸಮೀಪ ದೃಷ್ಟಿ	
ಉತ್ತಮ	ಕನಿಷ್ಠ	ಉತ್ತಮ	ಕನಿಷ್ಠ
6/9	6/9	0/6	0/8
ಅಥವಾ			
6/9	6/12	0/6	0/8

ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರ ದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಯಾವುದೇ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ಸೂಚನೆ: ಸರ್ಕಾರಿ ಜಿಲ್ಲಾ ಸರ್ಜನ್ ದರ್ಜೆಗಿಂತ ಕಡಿಮೆ ಇಲ್ಲದವರಿಂದ ದೇಹದಾರ್ಢ್ಯತೆ / ದೃಷ್ಟಿ ಸಾಮರ್ಥ್ಯದ ಕುರಿತು ಪ್ರಮಾಣಪತ್ರವನ್ನು ಪಡೆದಿರತಕ್ಕದ್ದು.

7) ಲಿಖಿತ ಪರೀಕ್ಷೆ:

ಎ) ಅಭ್ಯರ್ಥಿಯು ಸಹಿಷ್ಣುತೆ ಹಾಗೂ ದೇಹಧಾರ್ಢ್ಯತೆ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ ಮಾತ್ರ ಲಿಖಿತ ಪರೀಕ್ಷೆಗೆ ಕರೆಯಲಾಗುವುದು.

ಬಿ) ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ದಿನಾಂಕ, ಸಮಯ ಮತ್ತು ಸ್ಥಳವನ್ನು ಪ್ರತ್ಯೇಕವಾಗಿ ಅಂಚೆ ಮುಖಾಂತರ ನೀಡಲಾಗುವುದಿಲ್ಲ. ಆದರೆ ಲಿಖಿತ ಪರೀಕ್ಷೆಯ ಕರೆಪತ್ರವನ್ನು (Admission Ticket) ಈ ಕಛೇರಿಯ ಅಧಿಕೃತ ವೆಬ್‌ಸೈಟ್ www.crckar.org ರಿಂದ ಕಡ್ಡಾಯವಾಗಿ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಈ ಸಂಬಂಧ ಅಭ್ಯರ್ಥಿಗಳು ಈ ಕಛೇರಿಯ ವೆಬ್‌ಸೈಟ್‌ನ್ನು ಮೇಲಿಂದ ಮೇಲೆ ಗಮನಿಸುತ್ತಿರುವುದು ಸೂಕ್ತ. ಲಿಖಿತ ಪರೀಕ್ಷೆಯು ನಡೆಯುವ ವೇಳೆ ಮತ್ತು ಸ್ಥಳವನ್ನು ಕೇಂದ್ರ ಪರಿಹಾರ ಸಮಿತಿಯ ಸೂಚನಾ ಫಲಕದಲ್ಲಿಯೂ ಸಹ ಪ್ರಕಟಿಸಲಾಗುವುದು. ಕರೆಪತ್ರವನ್ನು ಪಡೆಯದೆ ಪರೀಕ್ಷೆಗೆ ಹಾಜರಾದಲ್ಲಿ ಅಂತಹವರಿಗೆ ಲಿಖಿತ ಪರೀಕ್ಷೆಗೆ ಅವಕಾಶ ನೀಡಲಾಗುವುದಿಲ್ಲ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಬರುವಾಗ **ಕರೆಪತ್ರದ ಜೊತೆಗೆ ಈ ಕೆಳಕಂಡ ಯಾವುದಾದರೂ ಒಂದು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.**

1) ಪಾಸ್‌ಪೋರ್ಟ್ (Passport),
2) ಚಾಲನಾ ಪರವಾನಗಿ ಪತ್ರ (Driving License),
3) ಪಾನ್‌ಕಾರ್ಡ್ (PAN Card),
4) ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೊಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ (Service ID Card),
5) ಸಾರ್ವಜನಿಕ ಬ್ಯಾಂಕುಗಳು/ ಅಂಚೆ ಕಛೇರಿಗಳು ವಿತರಿಸಿರುವ ಭಾವಚಿತ್ರವಿರುವ ಪಾಸ್ ಪುಸ್ತಕ (Bank Pass Book with Photograph),
6) ಭಾವಚಿತ್ರ ಸಮೇತ ನೋಂದಣಿಯಾಗಿರುವ ಸ್ವತ್ತಿನ ದಾಖಲೆಪತ್ರ ಅಥವಾ ಪಟ್ಟಾ ಪುಸ್ತಕ (Pattas and registered deeds with Photograph)
7) ಭಾವಚಿತ್ರ ಸಮೇತ ಸಂಬಂಧಪಟ್ಟ ಪ್ರಾಧಿಕಾರಿಯವರು ವಿತರಿಸಿರುವ ಜಾತಿ ಪ್ರಮಾಣ ಪತ್ರ (Community Certificate with Photo)
8) ಮಾಜಿ ಸೈನಿಕ ಅಭ್ಯರ್ಥಿಗಳಿಗೆ ವಿತರಿಸಿರುವ ಪಿಂಚಣಿ ಪುಸ್ತಕ / ಪಿಂಚಣಿ ಮಂಜೂರಾತಿ ಆಗಿರುವ ಆದೇಶ (Ex-servicemen's pension book / pension payment order)
9) ಎನ್.ಆರ್.ಇ.ಜಿ.ಎಸ್ ಯಿಂದ ನೀಡಿದ ಭಾವಚಿತ್ರವಿರುವ ಉದ್ಯೋಗ ಚೀಟಿ (Job cards with Photograph)
10) ಎಲೆಕ್ಟ್ರೋಲ್ ಫೋಟೋ ಗುರುತಿನ ಚೀಟಿ (EPIC)

ತಪ್ಪಿದಲ್ಲಿ ಲಿಖಿತ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ.

8) ನೇಮಕಾತಿ ವಿಧಾನ: ಲಿಖಿತ ಪರೀಕ್ಷೆಯು ಎರಡು ಪತ್ರಿಕೆಗಳಾಗಿರುತ್ತದೆ.

1) **ಪತ್ರಿಕೆ 1 : ಸಾಮಾನ್ಯ ಜ್ಞಾನ,**
2) **ಪತ್ರಿಕೆ2: ಸಾಮಾನ್ಯ ಕನ್ನಡ**

ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದವತಿಯಿಂದ ನಡೆಸಲಾಗುವುದು. ವಿಷಯಗಳು ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಕನ್ನಡ ಭಾಷೆಗೆ ಸಂಬಂದಪಟ್ಟದ್ದು, ಪ್ರತಿ ಪತ್ರಿಕೆಯು 100 ಅಂಕಗಳಿಗೆ 100 ನಿಮಿಷಗಳ ಕಾಲಾವಧಿ ಒಳಗೊಂಡಿರುತ್ತದೆ.

ಈ ಪರೀಕ್ಷೆಗಳು ವಸ್ತು ನಿಷ್ಠ ಬಹು ಆಯ್ಕೆ ಮಾದರಿಯದಾಗಿರುತ್ತದೆ. (Objective Multiple Choice Type)

ಸೂಚನೆ: ಅಭ್ಯರ್ಥಿಗಳು ಓ.ಎಂ.ಆರ್ ಶೀಟ್‌ನಲ್ಲಿ ಉತ್ತರಗಳನ್ನು ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತಿಸತಕ್ಕದ್ದು. ನಿಗದಿತ ಜಾಗದಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿ (ಎ.ಬಿ.ಸಿ. ಇತ್ಯಾದಿ) ಹಾಗೂ ಅಭ್ಯರ್ಥಿಯ ಅರ್ಜಿಸಂಖ್ಯೆ

ರೋಲ್ ನಂಬರ್‌ಗಳನ್ನು ಸರಿಯಾಗಿ ಬರೆಯಬೇಕು. ಇದನ್ನು ಬರೆಯದಿದ್ದರೆ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ ಹಾಗೂ ಅಭ್ಯರ್ಥಿಯು ಆಯ್ಕೆ ಪ್ರಕ್ರಿಯೆಯಿಂದ ಹೊರಗೆ ಉಳಿಯುತ್ತಾರೆ.

1) ಅಭ್ಯರ್ಥಿಗಳು ಅರ್ಜಿ ಸಂಖ್ಯೆ, ರೋಲ್ ನಂಬರ್ ಇತ್ಯಾದಿ ಭರ್ತಿ ಮಾಡಿದ ನಂತರ ನಿಗದಿತ ಜಾಗದಲ್ಲಿ ತಪ್ಪದೇ ಸಹಿ ಮಾಡಬೇಕು.
2) ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ನಿಗದಿಪಡಿಸಿರುವ ಸಮಯಕ್ಕಿಂತ ಅರ್ಧಗಂಟೆ ಮುಂಚಿತವಾಗಿ ಪರೀಕ್ಷಾ ಕೊಠಡಿಯಲ್ಲಿ ಹಾಜರಿರತಕ್ಕದ್ದು. ಆ ಸಮಯದಲ್ಲಿ ಪರೀಕ್ಷಾ ಮೇಲ್ವಿಚಾರಕರು ಉತ್ತರ ಪತ್ರಿಕೆಯನ್ನು ಭರ್ತಿ ಮಾಡುವ ಬಗ್ಗೆ ಮಾರ್ಗಸೂಚನೆಗಳನ್ನು ನೀಡುವರು.
3) ಕರ್ನಾಟಕ ಪರೀಕ್ಷಾ ಮಂಡಳಿ ನಡೆಸುವ ಯಾವುದೇ ಪರೀಕ್ಷೆಗಳಲ್ಲಿ ಅನುಚಿತವಾಗಿ ವರ್ತಿಸಿದರೆ ಅಥವಾ ನಕಲು ಮಾಡುವುದು ಕಂಡು ಬಂದರೆ ಅಥವಾ ನಕಲು ಮಾಡುವ ಸಾಮಗ್ರಿಗಳನ್ನು ಹೊಂದಿದ್ದರೆ ಅಂತಹ ಅಭ್ಯರ್ಥಿಗಳನ್ನು ಮೂರು ವರ್ಷಗಳ ಕಾಲ ಡಿಬಾರ್ ಮಾಡಲಾಗುವುದು.
4) ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್‌ಫೋನ್‌ಗಳನ್ನು ನಿಷೇಧಿಸಲಾಗಿದೆ. ಪರೀಕ್ಷೆ ಬರೆಯುವಾಗ ಮೊಬೈಲ್‌ಫೋನ್‌ಗಳನ್ನು ಹೊಂದಿದ್ದರೆ ಅವರನ್ನು ಪರೀಕ್ಷೆ ಬರೆಯಲು ಅನರ್ಹಗೊಳಿಸಲಾಗುವುದು.
5) ಎಲೆಕ್ಟ್ರಾನಿಕ್ ಸಾಮಗ್ರಿಗಳಾದ ಪೇಜರ್, ಕ್ಯಾಲ್ಕುಲೇಟರ್ ಇತ್ಯಾದಿಗಳನ್ನು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ.

9) ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:–

ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಕಂಡ ನಮೂನೆಗಳಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸುವುದು.

ಸೂಚನೆ: ನಮೂನೆ –ಎಫ್ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಐದು ವರ್ಷಕ್ಕಿಂತ ಹಳೆಯದಿರಬಾರದು.

ಮೀಸಲಾತಿ ಸೌಲಭ್ಯ: ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ರೆವಿನ್ಯೂ ಪ್ರಾಧಿಕಾರದಿಂದ ಪಡೆದು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕದ ಒಳಗಾಗಿ ಪಡೆದು ಇಟ್ಟುಕೊಂಡಿರತಕ್ಕದ್ದು ಮತ್ತು ಆಯ್ಕೆ ಪ್ರಾಧಿಕಾರವು ಯಾವುದೇ ಸಂದರ್ಭದಲ್ಲಿ ಮಾಹಿತಿ ಕೋರಿದ ಕೂಡಲೇ ಒದಗಿಸತಕ್ಕದ್ದು.

ಪ.ಜಾ/ಪ.ಪಂ,	ಸರ್ಕಾರದ ಅಧಿಸೂಚನೆ:SWD:132:SAD97Dt:8-2-2000 ಕ್ರಮವಾಗಿ **ನಮೂನೆ–ಡಿ**.
ಪ್ರವರ್ಗ–1	ನಮೂನೆ–ಇ.
ಪ್ರವರ್ಗ–2, 2 ಎ, 3ಎ, 3ಬಿ	ಸರ್ಕಾರದ ಅಧಿಸೂಚನೆ ಸಂಖ್ಯೆ: SWD:126: BCA: Dt: 13-12-2003 (ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದ ಮೀಸಲಾತಿ ತಿದ್ದುಪಡಿ) ನಿಯಮಗಳು 2000 ರನ್ವಯ ನಮೂನೆ–ಎಫ್ ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರಬೇಕು.
ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು	ಸರ್ಕಾರಿ ಆದೇಶ ಸಂಖ್ಯೆ:ಸಿಅಸುಇ:71: ಸೆನೆನಿ 2001 ದಿನಾಂಕ: 24–10–2002 ರನ್ವಯ ಶೇಕಡ 5 ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿಡಲಾಗಿದೆ ಮತ್ತು ದೃಢೀಕೃತ ಪ್ರಮಾಣ ಪತ್ರ ಲಗತ್ತಿಸುವುದು.
ಮಾಜಿ ಸೈನಿಕ ಅಭ್ಯರ್ಥಿಗಳು (ವಯೋಮಿತಿ ಸಡಿಲಿಕೆ)	ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ, ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿ,
ಕನ್ನಡ ಮಾಧ್ಯಮ ಅಭ್ಯರ್ಥಿಗಳು	ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್: 71: ಎಸ್ ಆರ್‌ಆರ್:2001 ದಿನಾಂಕ:24–10–2002 ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ (9) (1) (ಸಿ) ರ ಅನ್ವಯ ಅಭ್ಯರ್ಥಿಯು 1 ರಿಂದ 10 ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಪ್ರಮಾಣ ಪತ್ರ ಪಡೆದಿರಬೇಕು.

ಗ್ರಾಮೀಣ ಮೀಸಲಾತಿ:-

ಎ) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಯು 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಹೊಂದಿರಬೇಕು. ಮತ್ತು

ಬಿ) ಅಭ್ಯರ್ಥಿಯು ವ್ಯಾಸಂಗ ಮಾಡಿದ ಸ್ಥಳವು ವ್ಯಾಸಂಗ ಮಾಡಿದ ಅವಧಿಯಲ್ಲಿ ಅಂದಿನ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ, ಪ್ರದೇಶ, ಸಣ್ಣನಗರ ಪ್ರದೇಶ ಅಥವಾ ಪರಿವರ್ತನೆಯ ಹಂತದಲ್ಲಿರುವ ಪ್ರದೇಶಗಳ ಹೊರತಾಗಿ ಇತರ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಯಾಗಿರಬೇಕು, ಮತ್ತು

ಸಿ) ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಯು ಕರ್ನಾಟಕ ಅಧಿಸೂಚನೆ ಸಂಖ್ಯೆ:ಸಿಆಸುಇ: 08: ಸೆನೆಸಿ:2001 ದಿನಾಂಕ: 13-02-2001 ರ ಪ್ರಕಾರ ಮೇಲೆ ಪರಿಭಾಷಿಸಿದಂತೆ 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಹೊಂದಿರುವವರು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ: 96:ಸೆನೆಸಿ:2005, ದಿನಾಂಕ: 10-8-2005 ರಲ್ಲಿ ನಿಗದಿಪಡಿಸಿದ ನಮೂನೆ-2 ರ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಮಾಡಿಸಿ ಮತ್ತು ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆಯುವುದು. (ನಮೂನೆ-1) (ನಾನ್ ಕ್ರೀಮಿ ಲೇಯರ್) ಮತ್ತು ನಮೂನೆ -2 ಇವುಗಳು ಗ್ರಾಮೀಣ ಮೀಸಲಾತಿ ಕೋರುವ ಸಾಮಾನ್ಯ ಅಭ್ಯರ್ಥಿಗಳಿಗೆ ಕಡ್ಡಾಯವಾಗಿರುತ್ತದೆ.)

ಡಿ) ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರವನ್ನು ಹೊಂದಿರದಿದ್ದಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

ಅಂಗವಿಕಲರ ಮೀಸಲಾತಿ ಬಗ್ಗೆ:-

ಹೆಡ್‌ವಾರ್ಡರ್ ಮತ್ತು ವಾರ್ಡರ್ ಹುದ್ದೆಗಳ ಕೆಲಸ ಕಾರ್ಯಗಳು ಕಾರ್ಯಪಾಲಕ ಕೆಲಸಗಳಾಗಿವೆ ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಂಗವಿಕಲರು ಈ ಹುದ್ದೆಯ ಕಾರ್ಯಭಾರಗಳನ್ನು ನಿಭಾಯಿಸಲು ಸಾಧ್ಯವಾಗದ ಪ್ರಯುಕ್ತ ಈ ಹುದ್ದೆಗಳಿಗೆ ಅಂಗವಿಕಲ ಮೀಸಲಾತಿಯನ್ನು ಅನ್ವಯಿಸಿರುವುದಿಲ್ಲ. ಆದ್ದರಿಂದ, ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಲ್ಲ.

ಸೂಚನೆ: ಈ ಮೇಲಿನ ಎಲ್ಲಾ ಪ್ರಮಾಣಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅರ್ಹತೆಯನ್ನು ಪಡೆದಿರಬೇಕು. ಪ್ರಮಾಣಪತ್ರಗಳ ನಮೂನೆಗಳನ್ನು ಅನುಬಂಧದಲ್ಲಿ ನೋಡಬಹುದು. ಪ್ರಮಾಣಪತ್ರಗಳನ್ನು ನೇಮಕಾತಿ ಪ್ರಾಧಿಕಾರ ಪರಿಶೀಲಿಸುವ ಸಂದರ್ಭದಲ್ಲಿ ತಪ್ಪದೇ ಹಾಜರುಪಡಿಸತಕ್ಕದ್ದು. ಇದಕ್ಕೆ ಹೆಚ್ಚಿನ ಕಾಲಾವಕಾಶ ನೀಡಲಾಗುವುದಿಲ್ಲ. ಅರ್ಹತೆ, ಮೀಸಲಾತಿ ಇತ್ಯಾದಿಗಳ ಬಗ್ಗೆ ಅಭ್ಯರ್ಥಿಯು ಖಾತ್ರಿಪಡಿಸಿಕೊಂಡು ಅರ್ಜಿ ಸಲ್ಲಿಸುವುದು ಅವರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ತಪ್ಪು ಮಾಹಿತಿ ನೀಡಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.

ಒದಗಿಸಬೇಕಾದ ದಾಖಲೆಗಳು:

1) ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ / ಸೆಮಿಸ್ಟರ್‌ಗಳ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳು.
2) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆಯ ಪತ್ರ.
3) ಸೈನಿಕ ಸೇವೆಯಿಂದ ಬಿಡುಗಡೆಯಾದ ಬಗ್ಗೆ ಪ್ರಮಾಣಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).
4) ಗ್ರಾಮೀಣ ಮೀಸಲಾತಿಯ ನಿಗದಿತ ಪ್ರಮಾಣ ಪತ್ರ ನಮೂನೆ-1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ).
5) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).
6) ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).
7) ಯೋಜನಾ ನಿರಾಶ್ರಿತರ ಬಗ್ಗೆ ಪ್ರಮಾಣಪತ್ರ (ಮೀಸಲಾತಿ ಕೋರಿದ್ದಲ್ಲಿ).
8) ಪ.ಜಾ/ ಪ.ಪಂ, ಪ್ರವರ್ಗ-1, 2ಎ, 2ಬಿ, 3ಎ, 3ಬಿ ಯವರು ನಿಗದಿತ ಜಾತಿ ಪ್ರಮಾಣ ಪತ್ರ.
9) ಅಂಗವಿಕಲರು ತಮ್ಮ ಅಂಗವಿಕಲತೆಯ ಬಗ್ಗೆ ಪ್ರಮಾಣ ಪತ್ರ.

ಸೂಚನೆ: ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-3ಎ, ಪ್ರವರ್ಗ-3ಬಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣಪತ್ರಗಳು ತಿರಸ್ಕೃತಗೊಂಡಲ್ಲಿ ಅವರು

ಅಭ್ಯರ್ಥಿಗಳು (Non-Creamy Layer) ಪ್ರಮಾಣ ಪತ್ರವನ್ನು ಹೊಂದಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.

10) ಪ್ರಮುಖ ಸೂಚನೆಗಳು:

ಅಭ್ಯರ್ಥಿಗಳು ಯಾವುದೇ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಕೂಡದು. ಆದರೆ ಈ ಕೆಳಕಂಡ ಪ್ರಮಾಣ ಪತ್ರಗಳನ್ನು /ದಾಖಲಾತಿಗಳನ್ನು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಿಂಧುವಾಗಿರುವಂತೆ ಪಡೆದಿಟ್ಟುಕೊಂಡಿರಬೇಕು. ಕೇಂದ್ರ ಪರಿಹಾರ ಸಮಿತಿಯು ಆಯ್ಕೆ ಸಮಿತಿಯು ಸೂಚಿಸಿದಾಗ ಹಾಜರುಪಡಿಸತಕ್ಕದ್ದು.

ಎ) ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು.

ಬಿ) ಹುಟ್ಟಿದ ದಿನಾಂಕದ ಪ್ರಮಾಣ ಪತ್ರ (ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪ್ರಮಾಣ ಪತ್ರ)

ಸಿ) ಸರ್ಕಾರಿ ಇಲಾಖೆಯಲ್ಲಿ / ರಾಜ್ಯ ಸರ್ಕಾರದ / ಕೇಂದ್ರ ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ / ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂತಹವರು ಇಲಾಖಾಪತಿಯಿಂದ ಕರ್ತವ್ಯದಿಂದ ಬಿಡುಗಡೆ ಮಾಡುವ ಇಚ್ಛಾ ಅನುಮತಿ ಪತ್ರ.

ಡಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿಟ್ಟುಕೊಂಡಿರತಕ್ಕದ್ದು.

ಇ) ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರ..

ಎಫ್) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).

ಜಿ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರಬೇಕು.

ಎಚ್) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿಟ್ಟುಕೊಂಡಿರತಕ್ಕದ್ದು.

ಐ) ಸೇವಾನಿರತ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಅರ್ಜಿಯಲ್ಲಿನ ನಿಗದಿತ ವೃತ್ತವನ್ನು ಭರ್ತಿ ಮಾಡತಕ್ಕದ್ದು ಮತ್ತು ಅವರ ಸೇವಾ ಪ್ರಮಾಣಪತ್ರ ಹಾಗೂ ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (No objection Certificate) ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಂದ ಪಡೆದಿಟ್ಟುಕೊಂಡಿದ್ದು, ನೇಮಕಾತಿ ಸಮಿತಿಯು ಸೂಚಿಸಿದಾಗ ಹಾಜರುಪಡಿಸತಕ್ಕದ್ದು. ತಮ್ಮ ಸದ್ಯದ ಹುದ್ದೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

ಟಿಪ್ಪಣಿ: ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮಾಡಿಸುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಯಾವುದೇ ಹಂತದಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಜೆ) ಅಭ್ಯರ್ಥಿಗಳು ಓ.ಎಂ.ಆರ್ ಅರ್ಜಿಯನ್ನು ಭರ್ತಿ ಮಾಡುವಾಗ ಅರ್ಜಿಯ ಎಲ್ಲಾ ಕಾಲಂಗಳನ್ನು ಕಪ್ಪು ಬಣ್ಣದ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ತುಂಬತಕ್ಕದ್ದು. ಅಲ್ಲದೆ ಮೀಸಲಾತಿಗಳನ್ನು ಕೋರಿದಲ್ಲಿ ಖುದ್ದಾಗಿ ಪಡೆದು ಸಲ್ಲಿಸುವ ಅರ್ಜಿಯಲ್ಲಿ ಮೀಸಲಾತಿಗಾಗಿ ನಿರ್ದಿಷ್ಟಪಡಿಸಿದ ವೃತ್ತಗಳನ್ನು ತುಂಬತಕ್ಕದ್ದು. ಮೀಸಲಾತಿಯ ವೃತ್ತಗಳಲ್ಲಿ ಖಾಲಿ ಬಿಟ್ಟಿರುವ ಅಭ್ಯರ್ಥಿಗಳ ಮೀಸಲಾತಿಯನ್ನು ಸಾಮಾನ್ಯ ಅರ್ಹತೆಯೆಂದು ಪರಿಗಣಿಸಲಾಗುವುದು. ನಿರ್ದಿಷ್ಟವಾದ ವೃತ್ತಗಳಲ್ಲಿ ಮೀಸಲಾತಿಯನ್ನು ನಮೂದಿಸದೆ ಬೇರೆ ಕಡೆ ಗುರುತು(ಶೇಡ್) ಮಾಡಿದ್ದಲ್ಲಿ ಅಂತಹವುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಕೆ) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ತಕ್ಷಣದಲ್ಲಿ ಅಭ್ಯರ್ಥಿಗಳು ಲಿಖಿತ ರೂಪದಲ್ಲಿ ನೇಮಕಾತಿ ಸಮಿತಿಯ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ನೇಮಕಾತಿ ಸಮಿತಿಯು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ನೇಮಕಾತಿ ಸಮಿತಿಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

ಎಲ್) ಅಭ್ಯರ್ಥಿಗಳು ನೇಮಕಾತಿ ಸಮಿತಿಯನ್ನು ಸಂಪರ್ಕಿಸಬೇಕಾದ ಸಂದರ್ಭದಲ್ಲಿ ಅವರ ಮನವಿಯ ಜೊತೆಗೆ ಅರ್ಜಿಯ ನಕಲು ಪ್ರತಿಯನ್ನು ಕಡ್ಡಾಯವಾಗಿ ಒದಗಿಸಬೇಕು.

11) ವಿಶೇಷ ಸೂಚನೆಗಳು:-

1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಆನ್‌ಲೈನ್ ಅರ್ಜಿಯ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳಲು ಸೂಚಿಸಿದೆ.

2) ಅಭ್ಯರ್ಥಿಗಳು ಒಂದು ಹುದ್ದೆಗಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಯಾವ ಪರೀಕ್ಷೆ ತೆಗೆದುಕೊಳ್ಳಬೇಕು ಎಂಬ ವಿಷಯವು ಅಭ್ಯರ್ಥಿಗಳ ವಿವೇಚನೆಗೆ ಬಿಟ್ಟದ್ದು, ನೇಮಕಾತಿ ಪ್ರಾಧಿಕಾರವು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

3) ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಬಾರದೆಂದು ಸಲಹೆ ನೀಡಲಾಗಿದೆ. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವ ಬದಲು ಒಂದೇ ಅರ್ಜಿಯನ್ನು ಪಡೆದು ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಭರ್ತಿ ಮಾಡತಕ್ಕದ್ದು. ಏಕೆಂದರೆ ಒಂದಕ್ಕಿಂತ ಹೆಚ್ಚು ನೊಂದಣಿ ಸಂಖ್ಯೆಯಲ್ಲಿ ಪರೀಕ್ಷೆಗೆ ಹಾಜರಾಗಿದ್ದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಅಂತಹ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು. ಸಂಕ್ಷಿಪ್ತವಾಗಿ ತಿಳಿಸುವುದೆಂದರೆ ಒಬ್ಬ ಅಭ್ಯರ್ಥಿಯು ಒಂದು ನೊಂದಣಿ ಸಂಖ್ಯೆಗಿಂತ ಹೆಚ್ಚು ನೊಂದಣಿ ಸಂಖ್ಯೆಯನ್ನು ಪರೀಕ್ಷೆಯ ಯಾವುದೇ ಹಂತದಲ್ಲಿ ಬಳಸುವುದನ್ನು ನಿಖರವಾಗಿ ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಒಂದೇ ಹೆಸರಿನಲ್ಲಿ ಸಲ್ಲಿಸಿ ಬೇರೆ ಬೇರೆ ಫೋಟೋಗಳನ್ನು ಹಚ್ಚಿ, ಸಹಿಗಳನ್ನು ಮಾಡಿ ಪರೀಕ್ಷೆಗೆ ಹಾಜರಾಗಿದ್ದು ಕಂಡು ಬಂದಲ್ಲಿ ಅಂತಹವರ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವುದಲ್ಲದೇ ಅವರ ಮೇಲೆ ಕಾನೂನಿನ ರೀತ್ಯಾ ಕ್ರಮವನ್ನು ಕೈಗೊಳ್ಳಲಾಗುವುದು. ಈ ವಿಚಾರದಲ್ಲಿ ನೇಮಕಾತಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

4) ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಗಳನ್ನು ಪೂರಕವಾಗಿ ಸದರಿ ದಾಖಲಾತಿ/ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸಬೇಕು. ತಪ್ಪಿದಲ್ಲಿ ಅಂತಹ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರಗಳನ್ನು ಹಾಗೂ ಪ್ರತಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ. ಒಂದು ವೇಳೆ ಸಲ್ಲಿಸಿ, ಅವು ಕಳೆದು ಹೋದರೆ ನೇಮಕಾತಿ ಸಮಿತಿಯು ಜವಾಬ್ದಾರಿಯಾಗುವುದಿಲ್ಲ.

5) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಮೊದಲು ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರಬೇಕು.

6) ಪರೀಕ್ಷೆಗೆ ಪ್ರವೇಶವು ಸಂಪೂರ್ಣವಾಗಿ ತಾತ್ಕಾಲಿಕವಾಗಿರುತ್ತದೆ. ಪ್ರವೇಶ ಪತ್ರ ನೀಡಿದ ಮಾತ್ರಕ್ಕೆ ನೇಮಕಾತಿ ಸಮಿತಿಯು ನಿಮ್ಮ ಅಭ್ಯರ್ಥಿತನವನ್ನು ಅಂಗೀಕರಿಸಿದೆ ಎಂದು ಭಾವಿಸತಕ್ಕದ್ದಲ್ಲ.

7) ಪ್ರಶ್ನೆ ಪತ್ರಿಕೆಯಲ್ಲಿನ ಯಾವುದಾದರೂ ಪ್ರಶ್ನೆಯ ಬಗ್ಗೆ ಆಕ್ಷೇಪಣೆ ಇದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಆಯಾ ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅವರ ಹೆಸರು, ವಿಳಾಸ, ನೊಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ನೇಮಕಾತಿ ಸಮಿತಿಗೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

8) ಪರೀಕ್ಷೆಗೆ ನಿಗದಿಪಡಿಸಿರುವ ಸಮಯಕ್ಕಿಂತ ಅರ್ಧ ಗಂಟೆ ಮುಂಚಿತವಾಗಿ ಪರೀಕ್ಷಾ ಕೊಠಡಿಗೆ ತಪ್ಪದೇ ಹಾಜರಾಗತಕ್ಕದ್ದು. ಈ ಸಮಯದಲ್ಲಿ ಪರೀಕ್ಷಾ ಮೇಲ್ವಿಚಾರಕರು ಕೆಲವು ಮಾರ್ಗ ಸೂಚನೆಗಳನ್ನು ನೀಡುತ್ತಾರೆ.

9) ಕರ್ನಾಟಕ ರಾಜ್ಯದ, ಕೇಂದ್ರ ಸರ್ಕಾರದ ಯಾವುದೇ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

10) ಸುಳ್ಳು ಮಾಹಿತಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆಯುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ, ಅದೇ ಹಂತದಲ್ಲಿ ಅವರನ್ನು ಯಾವುದೇ ಮುನ್ಸೂಚನೆ ನೀಡದೆ ಅವರ ಅಭ್ಯರ್ಥಿತನವನ್ನು ರದ್ದುಗೊಳಿಸುವುದರ ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

11) ಅಭ್ಯರ್ಥಿಗಳು ಹುದ್ದೆಗೆ ಅರ್ಜಿ ಸಲ್ಲಿಸಿದ ತಕ್ಷಣ ಅವರು ನಿಯಮ ಮತ್ತು ವಿನಿಯಮಗಳಿಗೆ (Rules & Regulations) ಬದ್ಧರಾಗಿರುತ್ತಾರೆ ಎಂದು ಭಾವಿಸಲಾಗಿರುತ್ತದೆ. ಒಂದು ವೇಳೆ ಅವರು ಸದರಿ ಹುದ್ದೆಗೆ ಆಯ್ಕೆಯಾಗದ ಪಕ್ಷದಲ್ಲಿ ತದನಂತರ ಅದೇ ನಿಯಮಗಳನ್ನು ಪ್ರಶ್ನಿಸಲು ಬರುವುದಿಲ್ಲ.

12) ಕ.ನಾ.ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿ ನಿರ್ದಿಷ್ಟಗೊಳಿಸಿರುವಂತೆ ಆಯ್ಕೆಯಾದ ಅಭ್ಯರ್ಥಿಯು ನೇಮಕಾತಿ ಆದೇಶ ನೀಡುವ ಮುನ್ನ ಪೂರ್ಣ ಪ್ರಮಾಣದ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ವೈದ್ಯಕೀಯ ಪರೀಕ್ಷೆಯಲ್ಲಿ ವಿಫಲರಾದ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

12) ದುರ್ನಡತೆ:-

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ

ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, [illegible] ಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ದೈಹಿಕ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾದರೆ ಹಾಗೂ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ/ಅನ್ನು ಕ್ರಮಕ್ಕೆ ಒಳಪಡುವುದಲ್ಲದೆ ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

ಅಭ್ಯರ್ಥಿಗಳು ನೇಮಕಾತಿಗೆ ಸಂಬಂಧಿಸಿದಂತೆ ಕೇಂದ್ರ ಪರಿಹಾರ ಸಮಿತಿಯ ಕಛೇರಿ ದೂರವಾಣಿ ಸಂಖ್ಯೆ 080-22748086, 22748087ನ್ನು ಸಂಪರ್ಕಿಸಿ ನೇಮಕಾತಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸ್ಪಷ್ಟೀಕರಣ ಪಡೆದುಕೊಳ್ಳಬಹುದು. ಈ ದೂರವಾಣಿಯು ದಿನಾಂಕ: 14-04-2010 ರಿಂದ 13-05-2010 ರವರೆಗೆ (ರಜಾ ದಿನಗಳನ್ನು ಹೊರತುಪಡಿಸಿ) ಕಛೇರಿಯ ವೇಳೆಯಲ್ಲಿ ಲಭ್ಯವಿರುತ್ತದೆ.

ಅರ್ಜಿ ತುಂಬುವ ವಿಧಾನ ಹಾಗೂ ಹೆಚ್ಚಿನ ವಿವರಗಳು ಕೇಂದ್ರ ಪರಿಹಾರ ಸಮಿತಿಯ ಅಧಿಕೃತ ವೆಬ್‌ಸೈಟ್ www.crckar.org ನಲ್ಲಿ ಮಾಹಿತಿ ಸೂಚಿಯಲ್ಲಿ ಲಭ್ಯವಿರುತ್ತದೆ.

ಟಿಪ್ಪಣಿ: ಅಭ್ಯರ್ಥಿಗಳು ಪರೀಕ್ಷೆ / ದೈಹಿಕ ಪರೀಕ್ಷೆ/ ಸಹಿಷ್ಣುತೆ ಪರೀಕ್ಷೆಗಳಿಗೆ ಹಾಜರಾಗಲು ತಗಲುವ ವೆಚ್ಚವನ್ನು ಸ್ವಂತವಾಗಿ ಭರಿಸತಕ್ಕದ್ದು. ಇಲಾಖೆವತಿಯಿಂದ ಯಾವುದೇ ಪ್ರಯಾಣಭತ್ಯೆ/ ದಿನಭತ್ಯೆಗಳನ್ನು ನೀಡಲಾಗುವುದಿಲ್ಲ.

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು

ಕೇಂದ್ರ ಪರಿಹಾರ ಸಮಿತಿ,
(ಸಮಾಜ ಕಲ್ಯಾಣ ಇಲಾಖೆ)
ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-91
ಅರ್ಜಿ ನಮೂನೆ

ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸುವುದು

ಗೆ,
ಸದಸ್ಯ ಕಾರ್ಯದರ್ಶಿ,
ಕೇದ್ರ ಪರಿಹಾರ ಸಮಿತಿ,
ಮಾಗಡಿ ಮುಖ್ಯ ರಸ್ತೆ,
ನಿರಾಶ್ರಿತರ ಪರಿಹಾರ ಕೇಂದ್ರದ ಅವರಣ,
ಬೆಂಗಳೂರು-91.

ಅಧಿಸೂಚನೆ ಸಂಖ್ಯೆ: ______________________ ದಿನಾಂಕ: __________ ಕ್ಕೆ ಅನುಸಾರವಾಗಿ ______________ಹುದ್ದೆಗೆ ನನ್ನ ಅರ್ಜಿಯನ್ನು ಈ ಕೆಳಗೆ ಕೇಳಿರುವ ದಾಖಲೆಯೊಂದಿಗೆ ಸಲ್ಲಿಸುತ್ತಿದ್ದೇನೆ.

ವಿಸೂ: 1) ಈ ನಮೂನೆಯಲ್ಲಿ ಕೇಳಿರುವ ಪ್ರತಿಯೊಂದು ಪ್ರಶ್ನೆಗೂ ಎ4 ಅಳತೆಯ ಹಾಳೆಯಲ್ಲಿ ಮುದ್ರಿಸಿ;

ಅ) ಅಕ್ಷರಗಳಲ್ಲಿಯೇ ಉತ್ತರಿಸಬೇಕು,

ಆ) ಕೊಟ್ಟಿರುವ ಮಾಹಿತಿಯು ಅಪೂರ್ಣವಿದ್ದಲ್ಲಿ ಅಥವಾ ದೋಷಪೂರಿತವಾಗಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

ಇ) ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.

1	ಅಭ್ಯರ್ಥಿಯ ಹೆಸರು :(ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿದಂತೆ).
2	ತಂದೆ / ಗಂಡನ ಹೆಸರು :

3 ತಾಯಿಯ ಹೆಸರು:

4 ಜನ್ಮ ದಿನಾಂಕ: (ಶಾಲಾ ವರ್ಗಾವಣೆ ಪ್ರಮಾಣ ಪತ್ರದಲ್ಲಿರುವಂತೆ)(ಪ್ರತಿ ಲಗತ್ತಿಸುವುದು).

ದಿನಾಂಕ	ತಿಂಗಳು	ವರ್ಷ

5 ವಯೋಮಿತಿ ರಿಯಾಯಿತಿ ಸೌಲಭ್ಯ ಪಡೆಯಲು ಇಚ್ಛಿಸುವಿರಾ? ಅದರ ವಿವರ ನೀಡುವುದು:

6 ಅಂಚೆ ವಿಳಾಸ:

7 ಲಿಂಗ: ಗಂಡು : ☐ ಹೆಣ್ಣು ☐

8 **ಅ) ಮೀಸಲಾತಿ: (ಮೀಸಲಾತಿ ಕೋರಿದ್ದಲ್ಲಿ). (ಸಂಬಂಧಿಸಿದ ಮೀಸಲಾತಿಗೆ (✓) ಗುರುತು ಹಾಕಿರಿ).**

1) ಪ.ಜಾ ☐ 2) ಪ.ಪಂ ☐ 3) ಪ್ರವರ್ಗ-1. ☐
4) ಪ್ರವರ್ಗ-2 ಎ ☐ 5) ಪ್ರವರ್ಗ-2 ಬಿ ☐ 6) ಪ್ರವರ್ಗ-3 ಎ ☐
6) ಪ್ರವರ್ಗ-3 ಬಿ. ☐ 7) ಸಾಮಾನ್ಯ ☐

ಆ) ಅಭ್ಯರ್ಥಿಯು ಈ ಕೆಳಗಿನ ಒಳಮೀಸಲಾತಿಗೆ ಸೇರಿದವರೇ ?
(ಸಂಬಂಧಿಸಿದ ಮೀಸಲಾತಿಗೆ (✓) ಗುರುತು ಹಾಕಿರಿ).

ಎ) ಮಹಿಳಾ ಅಭ್ಯರ್ಥಿ ☐ ಬಿ) ಮಾಜಿ ಸೈನಿಕ ☐
ಸಿ) ಅಂಗವಿಕಲ ಅಭ್ಯರ್ಥಿ ☐ ಡಿ) ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ ☐
ಇ) ಗ್ರಾಮೀಣ ಅಭ್ಯರ್ಥಿ ☐ ಎಫ್) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ☐

ಸೂಚನೆ: ಮೇಲ್ಕಂಡ ಮೀಸಲಾತಿಗಳನ್ನು ಕೋರಬಯಸುವ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಸೂಕ್ತ ಪ್ರಾಧಿಕಾರಿಗಳಿಂದ ಇತ್ತೀಚೆಗೆ ಪಡೆದುಕೊಂಡ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸುವುದು.

9 **ವಿದ್ಯಾರ್ಹತೆ: (ವಾಹನ ಚಾಲಕ, ಜವಾನ ಮತ್ತು ಕಾವಲುಗಾರ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿ ಸಲ್ಲಿಸುವುದು.)**

ವಿದ್ಯಾರ್ಹತೆ	ಉತ್ತೀರ್ಣರಾದ ವರ್ಷ	ಪಡೆದ ಅಂಕಗಳ ವಿವರ			ಅಭ್ಯಸಿಸಿದ ಶಾಲೆ/ ಸಂಸ್ಥೆಯ ಹೆಸರು ಮತ್ತು ಅಂಚೆ ವಿಳಾಸ
		ಗರಿಷ್ಟ ಅಂಕ	ಗಳಿಸಿದ ಅಂಕ	ಶೇಕಡವಾರು ಅಂಕ	
7 ನೇ ತರಗತಿ ಪರೀಕ್ಷೆ					

ಷರತ್ತು:) ಅಭ್ಯರ್ಥಿಯು ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಜ್ಞಾನ ಹೊಂದಿರುವುದು ಕಡ್ಡಾಯವಾಗಿರುತ್ತದೆ.

(ii) 10ನೇ ತರಗತಿ ಪರೀಕ್ಷೆ ಪಾಸು ಮಾಡಿದ ಬಗ್ಗೆ ಅಂಕಪಟ್ಟಿಯ ಪ್ರತಿಯನ್ನು ಲಗತ್ತಿಸುವುದು

10 ಕಾವಲುಗಾರರ ಹುದ್ದೆಗೆ:- ನಿಗದಿಗೊಳಿಸಿದ ದೇಹದಾರ್ಢ್ಯತೆ:

ಕ್ರ.ಸ	ಪುರುಷ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ
1	ಎತ್ತರ 168 ಸೆಂ.ಮೀ	157 ಸೆಂ.ಮೀ
2	ಎದೆಯ ಸುತ್ತಳತೆ : 5 ಸೆಂ.ಮೀ ವಿಸ್ತರಿಸಿದಾಗ 86 ಸೆಂ.ಮೀಗಿಂತ ಕಡಿಮೆ ಇರಬಾರದು	ಅನ್ವಯಿಸುವುದಿಲ್ಲ
3	ತೂಕ : ಅನ್ವಯಿಸುವುದಿಲ್ಲ	45 ಕೆ.ಜಿ

ದೃಷ್ಟಿ ಸಾಮರ್ಥ್ಯ

ದೂರ ದೃಷ್ಟಿ		**ಸಮೀಪ ದೃಷ್ಟಿ**	
ಉತ್ತಮ	ಕನಿಷ್ಟ	ಉತ್ತಮ	ಕನಿಷ್ಟ
6/9	6/9	0/6	0/8
ಅಥವಾ			
6/9	6/12	–	–

(ಪ್ರತಿಯೊಂದು ಕಣ್ಣು ಸಂಪೂರ್ಣ ಕ್ಷೇತ್ರದೃಷ್ಟಿ ಹೊಂದಿರಬೇಕು. ವರ್ಣಾಂಧತೆ, ಮೆಳ್ಳೆಗಣ್ಣು ಅಥವಾ ಕಣ್ಣಿನ ಅಥವಾ ರೆಪ್ಪೆಯ ವಿಕೃತ ಸ್ಥಿತಿಯನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು)

ವಿ.ಸೂ: ಅಧಿಸೂಚನೆಯಲ್ಲಿ ಕಾಣಿಸಿದ ಹುದ್ದೆಗಳ ಪೈಕಿ ಕಾವಲುಗಾರರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ದೇಹದಾರ್ಢ್ಯತೆ ಹೊಂದಿರಬೇಕಾಗಿದ್ದು, ಜಿಲ್ಲಾ ಸರ್ಜನ್ ಹುದ್ದೆಗಿಂತ ಕಡಿಮೆ ಇಲ್ಲದ ವೈದ್ಯಾಧಿಕಾರಿಗಳಿಂದ ಅಧಿಸೂಚನೆ ಹೊರಡಿಸಿದ ದಿನಾಂಕದ ನಂತರದಲ್ಲಿ ಪಡೆದ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು).

11 ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ ಪರಿಶೀಲನೆಗಾಗಿ ಕೆಳಕಾಣಿಸಿದಂತೆ ಪರೀಕ್ಷೆಗಳನ್ನು ನಿಗದಿಪಡಿಸಲಾಗಿದ್ದು, ಇವುಗಳ ಪೈಕಿ ಕನಿಷ್ಟ 3 ರಲ್ಲಿ ಉತ್ತೀರ್ಣರಾಗತಕ್ಕದ್ದು. ಆದರೆ ಸದರಿ ಪರೀಕ್ಷೆಗೆ ಯಾವುದೇ ಅಂಕಗಳನ್ನು ನಿಗದಿಪಡಿಸಿರುವುದಿಲ್ಲ. ಇದು ಕೇವಲ ಅರ್ಹತೆಗೆ ಮಾತ್ರ ಸೀಮಿತವಾಗಿರುತ್ತದೆ.

ಕ್ರ.ಸ	ಪುರುಷ		ಮಹಿಳೆ	
	ಅಂಶ	ಅರ್ಹತಾ ಸಮಯ/ ದೂರ	ಅಂಶ	ಅರ್ಹತಾ ಸಮಯ/ ದೂರ
1	800 ಮೀ ಓಟ	2 ನಿಮಿಷ 50 ಸೆಕೆಂಡ್	200 ಮೀ ಓಟ	40 ಸೆಕೆಂಡ್
2	ಗುಂಡು ಎಸೆತ 7.26 ಕೆ.ಜಿ	5.60 ಮೀಟರ್	ಗುಂಡು ಎಸೆತ 4.00 ಕೆ.ಜಿ	3.75 ಮೀಟರ್
3	ಉದ್ದ ಜಿಗಿತ	3.80 ಮೀಟರ್	ಉದ್ದ ಜಿಗಿತ	2.50 ಮೀಟರ್
4	100 ಮೀ. ಓಟ	15 ಸೆಕೆಂಡ್	100 ಮೀ. ಓಟ	18.5 ಸೆಕೆಂಡ್
5	ಎತ್ತರ ಜಿಗಿತ	1.20 ಮೀಟರ್	ಎತ್ತರ ಜಿಗಿತ	0.90 ಮೀಟರ್

12 ವಾಹನ ಚಾಲಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ಲಘು ಮತ್ತು ಬಾರಿ ವಾಹನಗಳ ಚಾಲನಾ ಪರವಾನಗಿ ಪತ್ರಗಳ ಪ್ರತಿಯನ್ನು ಲಗತ್ತಿಸತಕ್ಕದ್ದು.

13 ವಾಹನ ಚಾಲಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಎರಡು ವರ್ಷ ಸೇವೆ ಸಲ್ಲಿಸಿದ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು, ತಪ್ಪಿದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

4. ಈಗಾಗಲೇ ನೌಕರಿಯಲ್ಲಿದ್ದರೆ ಅದರ ಬಗ್ಗೆ ವಿವರಗಳು: ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಂಡು ಅದರ ಪ್ರತಿಯನ್ನು ಲಗತ್ತಿಸುವುದು.

ಇಲಾಖೆ/ ಸಂಸ್ಥೆಯ ಹೆಸರು	ಹುದ್ದೆಯ ಹೆಸರು	ವರ್ಷ ಇಂದ	ಗೆ	ಅವಧಿ ವರ್ಷ	ತಿಂಗಳು

5. ಅರ್ಜಿ ಶುಲ್ಕ: ನಿಗದಿಪಡಿಸಿದ ಶುಲ್ಕವನ್ನು ಸಂದಾಯ ಮಾಡಿದ ವಿವರ:

ಐ.ಪಿ.ಓ/ ಡಿಡಿ ಸಂಖ್ಯೆ	ದಿನಾಂಕ	ಮೊತ್ತ	ಅಂಚೆ ಕಛೇರಿ / ಬ್ಯಾಂಕ್ ವಿವರ

ಸೂಚನೆ: ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಪ್ರವರ್ಗ-1 ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳು ರೂ.200.00ಗಳ ಶುಲ್ಕ ಮತ್ತು ಇತರೆ ವರ್ಗದ ಅಭ್ಯರ್ಥಿಗಳು ರೂ.400.00 ಶುಲ್ಕವನ್ನು "ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು-91" **(Secretary, CRC, Bangalore-91)** ಇವರಿಗೆ ಸಂದಾಯವಾಗುವಂತೆ ಅಧಿಸೂಚನೆ ನಂತರದ ದಿನಾಂಕಗಳಲ್ಲಿ ಖರೀದಿಸಿದ ಪೋಸ್ಟಲ್ ಆರ್ಡರ್/ ಡಿ.ಡಿ.ಗಳನ್ನು ಸಲ್ಲಿಸುವುದು.

(ಅನ್ವಯಿಸದೇ ಇರುವುದನ್ನು ಹೊಡೆದು ಹಾಕಿ).

ಘೋಷಣೆ

ಮೇಲಿನ ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ನನಗೆ ತಿಳಿದಿರುವ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ಈ ಮೂಲಕ ಘೋಷಿಸುತ್ತೇನೆ. ನಾನು ಸೂಚನೆಗಳನ್ನು ಗಮನವಿಟ್ಟು ಓದಿದ್ದೇನೆ ಮತ್ತು ಅವುಗಳನ್ನು ಪಾಲಿಸಲು ಬದ್ಧರಾಗಿರುತ್ತೇವೆ. ನಿಯಮ 20 ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳ ಪ್ರಕಾರ ಒಂದು ವೇಳೆ ನಾನು ಸಲ್ಲಿಸಿರುವ ಮಾಹಿತಿಗಳು ಅಸತ್ಯವಾಗಿದ್ದಲ್ಲಿ ಹುದ್ದೆಗೆ ಆಯ್ಕೆಯಾಗುವ ಮೊದಲು ಅಥವಾ ಆ ನಂತರದಲ್ಲಿ ನನ್ನ ಮೇಲೆ ಯಾವುದೇ ಕ್ರಮ ಕೈಗೊಳ್ಳಬಹುದು.

ಸ್ಥಳ :

(ಅರ್ಜಿದಾರರ ಸಹಿ)

ದಿನಾಂಕ :

ಸೂಚನೆ: 1) ಪೂರ್ಣವಾಗಿ ಭರ್ತಿ ಮಾಡದ ಮತ್ತು ಸಹಿ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2) ಮೀಸಲಾತಿ, ಲಗತ್ತಿಸಬೇಕಾದ ಪ್ರಮಾಣಪತ್ರಗಳು ಇತ್ಯಾದಿ ಹೆಚ್ಚುವರಿ ವಿವರಗಳು ಅಗತ್ಯವಾದಲ್ಲಿ ಇಲಾಖೆಯ ವೆಬ್‌ಸೈಟ್ www.crckar.org ನ್ನು ಸಂಪರ್ಕಿಸಲು ಕೋರಿದೆ.

ಕಾರ್ಯದರ್ಶಿ
ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು

ಪಿ.ಆರ್. 268

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 184 ಡಿಸಿಇ 2009, ಬೆಂಗಳೂರು, ದಿನಾಂಕ: 25ನೇ ಮಾರ್ಚ್ 2010

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕನ್ನಡ ವಿಷಯದ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಶ್ರೇಣಿ ರೂ.8000–275–13500ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ಕ್ರಮ ಸಂಖ್ಯೆ	ಕೆ.ಪಿ.ಎಸ್.ಸಿ. ಕ್ರ. ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ NET	SLET	Ph D	M Phil
1	08	ರಂಗಸ್ವಾಮಿ.ಆರ್., # 1548/ಎ, 2ನೇ ಕ್ರಾಸ್, ಅರುಂಧತಿ ಫ್ಯಾಂಟಸಿ ಪಾರ್ಕ್ ಹತ್ತಿರ, ಸೊಪ್ಪಿನಕೇರಿ, ಮಂಡಿಮೊಹಲ್ಲಾ, ಮೈಸೂರು	NET			

ಮೇಲ್ಕಂಡ ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

1. ಈ ಅಧಿಸೂಚನೆಯಲ್ಲಿರುವ ಅಭ್ಯರ್ಥಿಗೆ ಕಾಲೇಜು ಶಿಕ್ಷಣ ಆಯುಕ್ತರು ಸ್ಥಳನಿಯುಕ್ತಿ ಆದೇಶ ನೀಡುವ ಮುನ್ನ ಕರ್ನಾಟಕ ಲೋಕಸೇವಾ ಆಯೋಗ ಆಯ್ಕೆ ಮಾಡಿರುವ ಜೇಷ್ಠತೆಯಂತೆಯೇ ಕೌನ್ಸಿಲಿಂಗ್ ನಡೆಸುವುದು. ಈ ಸಂಬಂಧ ಆಯುಕ್ತರ ಕಾರ್ಯಾಲಯವು ಕೌನ್ಸಿಲಿಂಗ್ ದಿನಾಂಕವನ್ನು ತಿಳಿಸುತ್ತದೆ.
2. ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3. ಜನ್ಮ ದಿನಾಂಕ, ವಿದ್ಯಾರ್ಹತೆ (ಅಂಕಪಟ್ಟಿ) ನಡತೆ, ಮೀಸಲಾತಿಗೆ ಸಂಬಂಧಿಸಿದ ಮತ್ತಿತರ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳು ಪ್ರಥಮವಾಗಿ ಆಯುಕ್ತರ ಮುಂದೆ ಹಾಜರುಪಡಿಸಿ ಪರಿಶೀಲನೆಯ ನಂತರ ಈ ದಾಖಲಾತಿಗಳನ್ನು ಹಾಜರಾಗುವ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು.
4. ಕರ್ನಾಟಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ (1974)ರಡಿ ನಿಗದಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆಯನ್ನು ಪರಿವೀಕ್ಷಣಾ ಅವಧಿಯಲ್ಲಿ ಉತ್ತೀರ್ಣರಾಗತಕ್ಕದ್ದು.
5. ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ. ಪರೀಕ್ಷೆ ತೇರ್ಗಡೆ ಹೊಂದಿದವರು ಅಕೌಂಟ್ಸ್ ಹೈಯರ್ ಮತ್ತು ಜನರಲ್ ಲಾ ಭಾಗ–1 ಮತ್ತು ಭಾಗ–2 ಇವನ್ನು ಪರಿವೀಕ್ಷಣಾ ಅವಧಿಯಲ್ಲಿ ತೇರ್ಗಡೆಯಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
6. ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ. ಪದವಿ ಇಲ್ಲದವರು ಅಂದರೆ ಕೇವಲ ಎಂ.ಫಿಲ್. ಪಾಸು ಮಾಡಿರುವವರು (ದೂರ ಶಿಕ್ಷಣ ಮುಖೇನ ಅಥವಾ ಸಾಂಪ್ರದಾಯಿಕ ಶಿಕ್ಷಣದ ಮುಖೇನ) ಪರಿವೀಕ್ಷಣಾ ಅವಧಿಯಲ್ಲಿ ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ.ಯಲ್ಲಿ ಮೇಲ್ಕಾಣಿಸಿದ ಇಲಾಖಾ ಪರೀಕ್ಷೆಗಳ ಜೊತೆಗೆ ಕಡ್ಡಾಯವಾಗಿ ಉತ್ತೀರ್ಣರಾಗತಕ್ಕದ್ದು. ಇಲ್ಲವಾದಲ್ಲಿ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಾಗುವುದಿಲ್ಲ.
7. ಉಪನ್ಯಾಸಕ ಹುದ್ದೆಗೆ ಅವಶ್ಯಕತೆ ಇರುವ ಓರಿಯಂಟೇಶನ್ ಮತ್ತು ರಿಫ್ರೆಶರ್ ಕೋರ್ಸ್ ತರಬೇತಿಯನ್ನು ಪೂರೈಸತಕ್ಕದ್ದು.
8. ಅಭ್ಯರ್ಥಿಗಳ ಜೇಷ್ಠತೆಯು ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯಲ್ಲಿ ಪ್ರಸ್ತುತ ಇದ್ದಂತೆಯೇ ಇರತಕ್ಕದ್ದು ಹಾಗೂ ತದನಂತರ ಈ ಸಂಬಂಧ ಸರ್ಕಾರ ಹೊರಡಿಸುವ ಅಧಿಸೂಚನೆಯನ್ವಯ ಇರತಕ್ಕದ್ದು.
9. ಅಭ್ಯರ್ಥಿಗಳ ನೇಮಕಾತಿಯು ಮಹಿಳಾ ಮೀಸಲಾತಿ ಕುರಿತಂತೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ (ಸಿವಿಲ್) ಸಂಖ್ಯೆ:232/99ರ ಅಂತಿಮ ತೀರ್ಮಾನಕ್ಕೆ ಬದ್ಧವಾಗಿರುತ್ತದೆ.
10. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಈ ಕುರಿತು ಬಾಕಿ ಇರುವ ಅರ್ಜಿ ಸಂಖ್ಯೆ: 4460/2008, 1150/2009, 1634–1635/2009, 5502/2008, 4463/2008, 5278, 5322, 5268, 8338/2008 ಮತ್ತು 43/2009ರ ಮೇಲೆ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಬದ್ಧರಾಗಿರತಕ್ಕದ್ದು. ಹಾಗೂ ಈ ತೀರ್ಪುಗಳ ಕುರಿತಾದ ಉಚ್ಚ ನ್ಯಾಯಾಲಯದ ಮೇಲ್ಮನವಿ ತೀರ್ಪಿಗೆ ಬದ್ಧರಾಗಿರತಕ್ಕದ್ದು.
11. ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:853–59/2009ರ ಮೇಲೆ ದಿನಾಂಕ:19.08.2009ರಂದು ನೀಡಿರುವ ತೀರ್ಪನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:26902–14/2009 ಸಲ್ಲಿಸಿದ್ದು, ಈ ರಿಟ್ ಅರ್ಜಿಯ ಮೇಲೆ ರಾಜ್ಯದ ಉಚ್ಚ ನ್ಯಾಯಾಲಯ ನೀಡುವ ತೀರ್ಪಿನನುಸಾರ ಮುಂದಿನ ಕ್ರಮ ಕೈಗೊಳ್ಳುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿದೆ.
12. ಪರಿವೀಕ್ಷಣಾ ಅವಧಿಯಲ್ಲಿ ಯಾವುದೇ ವರ್ಗಾವಣೆ ಪರಿಗಣಿಸಲಾಗುವುದಿಲ್ಲ.
13. ಈ ಅಧಿಸೂಚನೆಯಲ್ಲಿ ಕಾಣಿಸಿರುವ ಅಭ್ಯರ್ಥಿಗಳ ಸಂಬಳ, ಭತ್ಯೆ ಇತ್ಯಾದಿ ಇವುಗಳು ಸ್ಥಳನಿಯುಕ್ತಿ ಆದೇಶ ಹೊರಡಿಸಿ ಅದರಂತೆ ಆಯಾ ಸ್ಥಳಗಳಲ್ಲಿ ಹಾಜರಾದ ದಿನಾಂಕದಿಂದ ಲಭ್ಯವಾಗುತ್ತದೆ.

ಅಭ್ಯರ್ಥಿಗಳು ಅಂದರೆ ಪಿ.ಹೆಚ್.ಡಿ./ಎನ್.ಇ.ಟಿ./ಎಸ್.ಎಲ್.ಇ.ಟಿ. ಪದವಿ ಹೊಂದಿರುವವರು ಕನ್ನಡ ಭಾಷೆ, ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ–1 ಮತ್ತು ಭಾಗ–2 ಇವುಗಳಲ್ಲಿ ತೇರ್ಗಡೆ ಹೊಂದಿದ ನಂತರವೇ ಪರಿವೀಕ್ಷಣಾ ಅವಧಿ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲು ಅರ್ಹರಿರುತ್ತಾರೆ. ಅಂತೆಯೇ ಕೇವಲ ಎಂ.ಫಿಲ್. ಪದವಿ ಪಡೆದವರು ಈ ಇಲಾಖಾ ಪರೀಕ್ಷೆಗಳ ಜೊತೆಗೆ ಎನ್.ಇ.ಟಿ./ಎಸ್.ಎಲ್.ಇ.ಟಿ. ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಮಾತ್ರ ಪರಿವೀಕ್ಷಣಾ ಅವಧಿಯ ತೃಪ್ತಿಕರ ಘೋಷಣೆಗೆ ಅರ್ಹರಿರುತ್ತಾರೆ. ಈ ದಿಶೆಯಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ಒಂದು ಮುಚ್ಚಳಿಕೆಯನ್ನು ಕೌನ್ಸಿಲಿಂಗ್ ಸಮಯದಲ್ಲಿ ಇವರು ತಪ್ಪದೇ 100 ರೂಪಾಯಿ ಛಾಪಾ ಕಾಗದದಲ್ಲಿ ಶಪಥಗ್ರಹಣ ಮಾಡಿ

ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅವರುಗಳು ಸ್ಥಳ ನಿಯೋಜನೆಗೆ ಅರ್ಹರಲ್ಲ ಮತ್ತು ಈ ನೇಮಕಾತಿ ಆದೇಶ ರದ್ದಾಗಿದೆಯೆಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಕಾಲೇಜು).

LETTER OF UNDERTAKING

I, Sri/Smt/Kum.. son of/ daughter of wife of residing at.. do hereby understand and undertake to comply with the following terms and conditions relating to my appointment as Lecturer in.......................... pursuant to the recommendation made by the Karnataka Public Service Commission:-

(1) The scale of pay for which I have been appointed has been Rs.8,000 – 275 – 13,500 and the designation is Lecturer in...........

(2) I have to pass the prescribed Kannada language examination and the departmental examinations, viz., Accounts Higher General Part – I and Part – II, besides the orientation course and refresher course for the post of lecturer.

(3) I have to acquire Ph.D/NET/SLET and only thereafter I am entitled for declaration of period of probation as satisfactory i.e. after the completion of two years and after passing the above said examinations composed with satisfactory performance.

(4) As I have not acquired NET/SLET/Ph.D through course work but only M.Phil, I do understand that for declaration of period of probation, apart from passing Kannada language examination, Accounts Higher, General Law Part-I and Part-II besides the orientation course and refresher course I have to acquire NET/SLET without fail. Failure to acquire NET/SLET will render me ineligible for satisfactory declaration of period of probation and claim further increment either in the scale of Rs 8,000 – 13,500 or in any revised scale or claim any revised designation.

(5) I undertake to relinquish my claim to the post of lecturer in...................due to any adverse court verdict treating M.Phil degree obtained through distance or traditional education mode as invalid.

Signature of the candidate

Witnesses

1.

2.

P.R. 252

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಲಾಲ್‌ಬಾಗ್, ಬೆಂಗಳೂರು-4

ಪ್ರಕಟಣೆ

ಟೆಂಡರ್-ಕಂ-ಬಹಿರಂಗ ಹರಾಜು ಮುಂದೂಡಿಕೆ

ಸಂಖ್ಯೆ/ತೋಇ/ಆ/ಓ/ಏನಿ15/46/06-07, ದಿನಾಂಕ: 6ನೇ ಏಪ್ರಿಲ್ 2010

ವಿಷಯ: ಅನುಪಯುಕ್ತ ವಾಹನಗಳನ್ನು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ ದಿನಾಂಕ ಮುಂದೂಡಿಕೆ.

[illegible] ನಿರ್ದೇಶನಾಲಯದ ವ್ಯಾಪ್ತಿಯಲ್ಲಿರುವ [illegible] ದಿನಾಂಕ 17.03.2010 ರಂದು ಬೆಳಿಗ್ಗೆ 11.00 ಗಂಟೆಗೆ [illegible] ಗ್ರಂಥಾಲಯದ ಆವರಣದಲ್ಲಿ [illegible] ನಿಗದಿಪಡಿಸಲಾಗಿತ್ತು. [illegible] ದಿನಾಂಕ: 17.03.2010ರ ಬದಲಾಗಿ ದಿನಾಂಕ 12.05.2010 ರಂದು ಬೆಳಿಗ್ಗೆ 11.00 ಗಂಟೆಗೆ ಇಟ್ಟುಕೊಳ್ಳಲಾಗಿದೆ. ಹಾಗೂ ಟೆಂಡರ್ ಫಾರಂ ಪಡೆಯಲು 07.05.2010 ದಿನಾಂಕದವರೆಗೆ ಅವಧಿ ವಿಸ್ತರಿಸಲಾಗಿದೆ. ಟೆಂಡರ್ ಫಾರಂ ಸಲ್ಲಿಸಲು 10.05.2010 ದಿನಾಂಕ ಸಂಜೆ 4.00 ಗಂಟೆ ಕೊನೆಯ ದಿನಾಂಕವಾಗಿರುತ್ತದೆ. ಉಳಿದಂತೆ ಯಾವುದೇ ಷರತ್ತು ಮತ್ತು ನಿಬಂಧನೆಗಳಲ್ಲಿ ಬದಲಾವಣೆ ಇರುವುದಿಲ್ಲ.

ಪಿ.ಆರ್. 258 ನಿರ್ದೇಶಕರ ಪರವಾಗಿ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು
ಅಲ್ಪಾವಧಿ ಟೆಂಡರ್ ಪ್ರಕಟಣೆ

ನಂ.ಡಿಎಎಂ:ಇ.ಎಸ್.ಟಿ.3:ಭ.ಸಿ:ಟೆಂಡರ್:2009-10, ದಿನಾಂಕ: 2ನೇ ಏಪ್ರಿಲ್ 2010

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು-570 010, ಇವರಿಂದ ಸರ್ಕಾರಿ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಕೆಲಸಕ್ಕಾಗಿ ನೋಂದಾಯಿತ ಭದ್ರತಾ ಸಂಸ್ಥೆಯವರಿಂದ ಮೊಹರು ಮಾಡಿದ ಟೆಂಡರುಗಳನ್ನು ಸಾರ್ವಜನಿಕ ಖರೀದಿ ನಿಯಮಾವಳಿ ಶಾಸನ 2000 ಮತ್ತು ಕಾಯ್ದೆ 2000 ಆಡಳಿತದಲ್ಲಿ ಪಾರದರ್ಶಕ ನಿಯಮಾವಳಿಯಂತೆ ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಈ ಕೆಳಕಂಡ ಕೆಲಸಗಳಿಗೆ ಟೆಂಡರ್ ಫಾರಂಗಳಿಗಾಗಿ ನಿಗದಿತ ಟೆಂಡರ್ ಫಾರಂ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.4.2010 ಕಛೇರಿ ವೇಳೆಯಲ್ಲಿ ಟೆಂಡರ್ ಫಾರಂ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಖಾಲಿ ಟೆಂಡರ್ ಫಾರಂಗಳನ್ನು ದಿನಾಂಕ: 3.5.2010 ರಿಂದ 5.5.2010 ರವರೆಗೆ ವಿತರಿಸಲಾಗುವುದು. ಟೆಂಡರ್‌ಗಳನ್ನು ದಿನಾಂಕ: 6.5.2010 ರಂದು ಭಾರತೀಯ ಕಾಲಮಾನ ಮಧ್ಯಾಹ್ನ 4.00 ಘಂಟೆಯವರೆಗೆ ಸ್ವೀಕರಿಸಲಾಗುವುದು. ದಿನಾಂಕ: 7.5.2010 ರ ಬೆಳಿಗ್ಗೆ 11.30 ಕ್ಕೆ ಭದ್ರತಾ ಸಂಸ್ಥೆಯವರ ಸಮ್ಮುಖದಲ್ಲಿ ಟೆಂಡರ್ ತೆರೆಯಲಾಗುವುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ. ರೂ. ಗಳಲ್ಲಿ	ಕಾಲಾವಧಿ	ಟೆಂಡರ್ ಫಾರಂ ಮೊತ್ತ
1.	ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇದರ ಅಧೀನ ಕಛೇರಿಗಳಾದ ವಸ್ತು ಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು ಒದಗಿಸುವ ಕೆಲಸ.	50.00	50,000/-	ಹನ್ನೊಂದು ತಿಂಗಳುಗಳಿಗೆ	3000/-

1. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯು ರಾಜ್ಯವ್ಯಾಪ್ತಿ ಅಧೀನ ಕಛೇರಿಗಳನ್ನು ಮತ್ತು ವಸ್ತುಸಂಗ್ರಹಾಲಯಗಳನ್ನು ಹೊಂದಿದ್ದು, ರಾಜ್ಯವ್ಯಾಪ್ತಿ ಭದ್ರತಾ ಸಿಬ್ಬಂದಿಯನ್ನು ಒದಗಿಸಬೇಕಾಗುತ್ತದೆ.
2. ಖಾಲಿ ಟೆಂಡರ್ ಫಾರಂ ಮೊತ್ತ ರೂ. 3000/- ಮೊತ್ತದ ಡಿ.ಡಿ.ಯನ್ನು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರ ಹೆಸರಿಗೆ ಪಡೆದು ಸಲ್ಲಿಸುವುದು ಅರ್ಜಿಯ ಜೊತೆಗೆ ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ದಾಖಲೆ ಪತ್ರಗಳನ್ನು ದೃಢೀಕರಣದೊಂದಿಗೆ ಸಲ್ಲಿಸುವುದು: ಇಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು. ಖಾಲಿ ಟೆಂಡರ್ ಫಾರಂಗಳನ್ನು ಕಛೇರಿ ವೇಳೆಯಲ್ಲಿ ಪಡೆಯತಕ್ಕದ್ದು.
3. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು/ನಿಬಂಧನೆಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಗಮನಿಸಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಆಡಳಿತ ಶಾಖೆಯಿಂದ ಪಡೆಯಬಹುದಾಗಿದೆ.

ಆರ್. ಗೋಪಾಲ್

ಪಿ.ಆರ್. 263 ನಿರ್ದೇಶಕರು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಸಹಾಯಕ ಕೃಷಿ ನಿರ್ದೇಶಕರವರ ಕಛೇರಿ ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು-64

ಸಂಖ್ಯೆ:ಸ.ಕೃ.ನಿ.ಬೆಂ.ಉ.ತಾ.ಲೆಕ್ಕ-2:ಜಡವಸ್ತು:ಹರಾಜು:10-11, ದಿನಾಂಕ: 1ನೇ ಏಪ್ರಿಲ್ 2010

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಸಹಾಯಕ ಕೃಷಿ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು. ಬೆಂಗಳೂರು-64 ರವರ ಕಛೇರಿಯಲ್ಲಿ ಲಭ್ಯವಿರುವ ಈ ಕೆಳಕಂಡ ವಸ್ತುಗಳ ಕ್ರ.ಸಂ:1 ರಿಂದ 14 ವರೆಗಿನ ಅನುಪಯುಕ್ತ ವಸ್ತುಗಳನ್ನು ಟೆಂಡರ್-ಕಂ-ಬಹಿರಂಗ ಹರಾಜಿನ ಮೂಲಕ ಸ್ಪರ್ಧಾತ್ಮಕ ದರಗಳನ್ನು ಕರೆದು ಬಹಿರಂಗ ಹರಾಜನ್ನು ದಿ:24.5.2010 ರಂದು 11.00 ಗಂಟೆಗೆ ಈ ಕಛೇರಿ ಆವರಣದಲ್ಲಿ ನಿಗದಿಪಡಿಸಿದೆ. ಸಾರ್ವಜನಿಕರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸುವಂತೆ ಕೋರಿದೆ.

ಕ್ರ. ಸಂ.	ಅನುಪಯುಕ್ತ ಜಡ ದಾಸ್ತಾನು ವಸ್ತುಗಳ ವಿವರ	ಪರಿಮಾಣ
1	'S' ಮಾದರಿ ಕುರ್ಚಿಗಳು	13
2	ಮರದ ಕುರ್ಚಿಗಳು	4
3	ಟೈಪರೈಟರ್ ರಿವಾಲ್ವಿಂಗ್ ಚೇರ್	1
4	ಸ್ಟೀಲ್ ಮಡಿಚುವ ಕುರ್ಚಿಗಳು	37
5	ಸ್ಟೀಲ್ ಟ್ರೇಗಳು	3
6	ಟೇಬಲ್ ಫ್ಯಾನ್	3
7	ಕಾಲಿಂಗ್ ಬೆಲ್	1
8	ಫೋಟೊ ಫ್ರೇಂ	1
9	ಮ್ಯೂಸಿಯಂ ಜಾರ್ಸ್	16
10	ಅಮೋನಿಯಂ ಪ್ರಿಂಟಿಂಗ್ ಮೆಷಿನ್	1
11	ಈಸಾಲ್ ಸ್ಟಾಂಡ್	1
12	ಸ್ಟೀಲ್ ಆಲ್ಮೇರಾ	1
13	ಫಿಕ್ಟೋಗ್ರಾಪ್ ಬೋರ್ಡ್	1
14	ಸ್ಟೀಲ್ ಬುಟ್ಟಿಗಳು	3

ಸಹಾಯಕ ಕೃಷಿ ನಿರ್ದೇಶಕರು

ಪಿ.ಆರ್. 246 ಬೆಂಗಳೂರು ಉತ್ತರ ತಾಲ್ಲೂಕು

ಕಾರ್ಮಿಕ ಇಲಾಖೆ

ಅಧಿಸೂಚನೆ

ಸಂಖ್ಯೆ.ಕಾಇ 450 ಎಲ್‌ಎಸ್‌ಐ 2009, ಬೆಂಗಳೂರು, ದಿನಾಂಕ: 31ನೇ ಮಾರ್ಚ್ 2010

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯಲ್ಲಿ ಖಾಲಿಯಿರುವ ವಿಮಾ ವೈದ್ಯಾಧಿಕಾರಿಗಳ ಹುದ್ದೆಗೆ ಈ ಕೆಳಕಂಡ ಅಭ್ಯರ್ಥಿಗಳನ್ನು ಅವರುಗಳ ಹೆಸರಿನ ಮುಂದೆ ನಮೂದಿಸಲಾದ ಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ.

ಕ್ರ. ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
	ಮೈಸೂರು ವಲಯ	
1.	ಡಾ:ರಾಧಾಕೃಷ್ಣ ಎಸ್.ಎ. ಬಿನ್ ದಿವಂಗತ ಅರಸಯ್ಯ, ನಂ.286, ಭೋಗಾದಿ, 2ನೇ ಹಂತ (ದಕ್ಷಿಣ) ಭೋಗಾಧಿ ಅಂಚೆ, ಮೈಸೂರು-575026	ಕಾ.ರಾ.ವಿ. ಚಿಕಿತ್ಸಾಲಯ, ಬೆಳವಾಡಿ.

ಕ್ರ. ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
2.	ಡಾ:ಸುಮಂತ್ ಎ. ಬಿನ್ ವೀರಭದ್ರಪ್ಪ ಎ. ಕ್ವಾರ್ಟರ್ಸ್ ಸಂಖ್ಯೆ.1, ಸರ್ಕಾರಿ ರೇಷ್ಮೆಫಾರಂ, ಊಟಿ ರಸ್ತೆ, ನಂಜನಗೂಡು–571 301.	ಕಾ.ರಾ.ವಿ. ಚಿಕಿತ್ಸಾಲಯ, ನಂಜನಗೂಡು.
3.	ಡಾ:ಶಕ್ತಿಕುಮಾರ್ ಸಿ. ಬಿನ್ ಚಿನ್ನಸ್ವಾಮಿ ಎಸ್.ಕೆ. ಸಂಖ್ಯೆ.1–324, ಈ, ಶಾಂತಿ ಪಾರ್ಕ್ ರಸ್ತೆ, ಕೊಳ್ಳೇಗಾಲ –571 400	ಕಾ.ರಾ.ವಿ. ಚಿಕಿತ್ಸಾಲಯ, ನಂಜನಗೂಡು.
4.	ಡಾ:ಸುನೀಲ್‌ಕುಮಾರ್ ಟಿ.ಆರ್. ಬಿನ್ ರಾಮಚಂದ್ರಪ್ಪ ಟಿ.ಎಂ. ಕೇರಾಫ್ ಸುಗಂದಿನಿ, ಸಂಖ್ಯೆ.53, ಅನಿಕೇತನ ರಸ್ತೆ, ದಕ್ಷಿಣ, 3ನೇ ಅಡ್ಡ ರಸ್ತೆ, ಕುವೆಂಪುನಗರ, ಮೈಸೂರು.	ಕಾ.ರಾ.ವಿ. ಚಿಕಿತ್ಸಾಲಯ, ಬೃಂದಾವನ.
5.	ಡಾ:ಉಮಾ ಶಿವನಾಳ್, ಬಿನ್ ಪಿ.ಎ.ಎಸ್.ಶಿವನಾಳ್, ಕೇರಾಫ್ ಎನ್.ಮಲ್ಲೇಶಪ್ಪ, ಮನೆ ನಂ.156, ಈ ಬ್ಲಾಕ್, 11ನೇ ಮುಖ್ಯ ರಸ್ತೆ, 3ನೇ ಹಂತ, ವಿಜಯನಗರ, ಮೈಸೂರು.	ಕಾ.ರಾ.ವಿ. ಆಸ್ಪತ್ರೆ, ಮೈಸೂರು.
6.	ಡಾ:ಮುರಳೀಧರ್ ಸಿ.ಎನ್. ಬಿನ್ ನಾಗರಾಜ ಟಿ.ಡಿ. ಜೋಗಿ ಮಠ ರಸ್ತೆ, 4ನೇ ಅಡ್ಡ ರಸ್ತೆ, ಮುರಳೀಧರ್ ನಿವಾಸ, ಚಿತ್ರದುರ್ಗ.	ಕಾ.ರಾ.ವಿ. ಚಿಕಿತ್ಸಾಲಯ, ಭದ್ರಾವತಿ.
	ಮಂಗಳೂರು ವಲಯ	
1.	ಡಾ:ರೂಪಕ ನಾಯಕ್ ಬಿನ್ ಅರುಣ ಪಿ. ಕಲ್‌ಗುಜಿಗರ್, ಸರಸ್ವತಿ ನಿಲಯ, ವಾಕ್ವಾಡಿ ರಸ್ತೆ, ಕುಂಬಾಷಿ, ಕುಂದಾಪುರ–576 257.	ಕಾ.ರಾ.ವಿ. ಆಸ್ಪತ್ರೆ, ಮಂಗಳೂರು.
2.	ಡಾ:ಬಿ.ಎಸ್.ಪ್ರವೀಣ್‌ಕುಮಾರ್ ಬಿನ್ ಸಿದ್ಧಲಿಂಗಪ್ಪ ಎಸ್.ಬಿರಾದಾರ. ಕೇರಾಫ್ ಸರಿನೆರಳು ಹೌಸ್, ರಾಘವೇಂದ್ರ ಕಾಲೋನಿ ಬೀದರ್ ಬೀದರ್ ಜಿಲ್ಲೆ.	ಕಾ.ರಾ.ವಿ. ಆಸ್ಪತ್ರೆ, ಮಂಗಳೂರು.
3.	ಡಾ:ಕೆ.ನಾಗೇಶ್ವರಿ, ಬಿನ್ ವಿ.ಕಾಳಿಯಪ್ಪನ್, ಲಕ್ಷ್ಮಿಶ್ರೀ ದೀಪ ಫಾರ್ಮ್ ಹೌಸ್ ಹತ್ತಿರ, ಹೊಸಬೆಟ್ಟು, ಶಿವಾಜಿನಗರ, ಮಂಗಳೂರು.	ಕಾ.ರಾ.ವಿ. ಚಿಕಿತ್ಸಾಲಯ, ಪಣಂಬೂರು.

ಕ್ರ. ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
4.	ಡಾ:ಮಹಮ್ಮದ್ ಸಮೀರ್, ಬಿನ್ ಕುನ್ನಿ ಅಬ್ಬಾಸ್, ಸಂಖ್ಯೆ.17-18-1372/1, ಬ್ಲಾಸಂ ಬ್ರಿಟ್ಟೋ ರಸ್ತೆ, ಫಲ್ನೀರ್ ಮಂಗಳೂರು-560 001	ಕಾ.ರಾ.ವಿ. ಚಿಕಿತ್ಸಾಲಯ, ಕರಂಗಲ್‌ಪಾಡಿ.
	ದಾವಣಗೆರೆ ವಲಯ	
1.	ಡಾ:ಮಂಜುನಾಥ್ ಕೆ. ಬಿನ್ ಕೆ.ಕಾಮೇಶ್ವರಾಚಾರ್, ಸಂಖ್ಯೆ.2227/1, ಎಂ.ಸಿ.ಸಿ. ಎ ಬ್ಲಾಕ್, ಸೌಭಾಗ್ಯ ನಿಲಯ, ದಾವಣಗೆರೆ.	ಕಾ.ರಾ.ವಿ. ಚಿಕಿತ್ಸಾಲಯ, ಹರಿಹರ.
2.	ಡಾ:ಮೊಹಮದ್ ಕೆ.ಎಂ.ಎಫ್.ಅಹಮದ್, ಬಿನ್ ದಿವಂಗತ ಅಬ್ದುಲ್ ಜಲೀಕ್ ಸಾಬ್, ಕೇರಾಫ್ ಡಾ:ಇಕ್ಬಾಲ್ ಷರೀಫ್, ಸಂಖ್ಯೆ.2817, 4ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆ, ರಾಮಕೃಷ್ಣ ಕೃಪಾ, ಗಾಂಧಿ ಶಾಲೆಯ ಹತ್ತಿರ, ಎಂ.ಸಿ.ಸಿ. ಬಿ. ಬ್ಲಾಕ್, ದಾವಣಗೆರೆ.	ಕಾ.ರಾ.ವಿ. ಆಸ್ಪತ್ರೆ, ದಾವಣಗೆರೆ.
3.	ಡಾ:ಗುರುರಾಜ ಎಸ್. ಬಿನ್ ಸೋಮಲಾ ನಾಯಕ್, ಸಂಖ್ಯೆ.1480/19, 1ನೇ ಎ. ಅಡ್ಡ ರಸ್ತೆ, ಸಿದ್ಧವೀರಪ್ಪ ಲೇ ಔಟ್, ದಾವಣಗೆರೆ.	ಕಾ.ರಾ.ವಿ. ಆಸ್ಪತ್ರೆ, ದಾವಣಗೆರೆ.
4.	ಡಾ:ಶ್ವೇತಾ ಎನ್.ಎಂ. ಬಿನ್.ಮೊಗಣ್‌ಗೌಡ ಎಸ್.ಎಂ. ಸೀನಿಯರ್ ಫೀಲ್ಡ್ ಆಫೀಸರ್, ಪಿ.ಎಲ್.ಡಿ. ಬ್ಯಾಂಕ್, ಹರಪ್ಪನಹಳ್ಳಿ.	ಕಾ.ರಾ.ವಿ. ಆಸ್ಪತ್ರೆ, ದಾವಣಗೆರೆ.
	ಹುಬ್ಬಳ್ಳಿ ವಲಯ	
1.	ಡಾ:ಪರ್ವೀನ್ ಆರ್ಷಿಯಾ, ಬಿನ್ ನಜೀರ್ ಅಹಮದ್, ವಕೀಲರು, ಹುಡೆಡ್ ಬಿಲ್ಡಿಂಗ್, ರಾಯಲ್‌ಪ್ಲಸ್ ಅಪಾರ್ಟ್‌ಮೆಂಟ್ ಪಕ್ಕ, ಲೋಕಪ್ಪನ್ ಅಕ್ಕಳ್, ವಿದ್ಯಾನಗರ ಹುಬ್ಬಳ್ಳಿ.	ಕಾ.ರಾ.ವಿ. ಆಸ್ಪತ್ರೆ, ಹುಬ್ಬಳ್ಳಿ.
2.	ಡಾ:ಫರ್ಜಾನ ಬೇಗಂ ಧಾರವಾಡ, ಬಿನ್ ಅಬ್ದುಲ್ ಸತ್ತಾರ್, ಮನೆ ಸಂಖ್ಯೆ.4, ಗುರುನಾಥನಗರ, ಆನಂದನಗರ ರಸ್ತೆ, ಹುಬ್ಬಳ್ಳಿ.	ಕಾ.ರಾ.ವಿ. ಚಿಕಿತ್ಸಾಲಯ, ಹುಬ್ಬಳ್ಳಿ ನಂ.1.

ಕ್ರ ಸಂ.	ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ವೈದ್ಯರ ಹೆಸರು ಮತ್ತು ವಿಳಾಸ	ನೇಮಕಾತಿ ಮಾಡಲಾದ ಸ್ಥಳ
3.	ಡಾ:ಮಂಜುಳ ಬಸಪ್ಪ ಬದನೆಕಾಯಿ, ಬಿನ್ ಬಸಪ್ಪ ಬದನೆಕಾಯಿ, ಕೇರಾಫ್ ಶಾಂತ ಸೋಫಿನ್, ಹೇಮಶ್ರೀ, ಲಕ್ಷ್ಮಿನಗರ, 9ನೇ ಅಡ್ಡ ರಸ್ತೆ, ವಿದ್ಯಾಗಿರಿ ಧಾರವಾಡ.	ಕಾ.ರಾ.ವಿ. ಆಸ್ಪತ್ರೆ, ಹುಬ್ಬಳ್ಳಿ.
4.	ಡಾ:ಇಮ್ರಾನ್ ಸೋಲ್ಲಾಪುರ, ಬಿನ್ ಅಬ್ದುಲ್ ವಾಹಿದ್ ಸೋಲ್ಲಾಪುರ, 16–ಬಿ, ಸಾನ್‌ಮಯೋ ನಗರ, ಗೋಕುಲ ರಸ್ತೆ, ಹುಬ್ಬಳ್ಳಿ–30.	ಕಾ.ರಾ.ವಿ. ಚಿಕಿತ್ಸಾಲಯ, ಪೀರನ್‌ವಾಡಿ, ಬೆಲಗಾವಿ.
5.	ಡಾ:ಪ್ರಕಾಶ್ ಎಸ್. ಬೀರನೂರ್, ಬಿನ್ ಶಿವಪ್ಪ, ಹೆಚ್.ಐ.ಜಿ.2/102, ಅಕ್ಷಯಪಾರ್ಕ್, ಗೋಕುಲ ರಸ್ತೆ, ಹುಬ್ಬಳ್ಳಿ.	ಕಾ.ರಾ.ವಿ. ಆಸ್ಪತ್ರೆ, ಹುಬ್ಬಳ್ಳಿ.
6.	ಡಾ:ಸಂದೀಪ್ ಎಸ್.ಹಿರೇಶ್‌ನವರ್, ಬಿನ್ ಶಿವಪ್ಪ, ಬಿ.ಬ್ಲಾಕ್–103, ಅಕ್ಷಯಪಾರ್ಕ್, ಗೋಕುಲ ರಸ್ತೆ, ಹುಬ್ಬಳ್ಳಿ.	ಕಾ.ರಾ.ವಿ. ಆಸ್ಪತ್ರೆ, ಹುಬ್ಬಳ್ಳಿ.
7.	ಡಾ:ಸುಪ್ರಿಯಾ ಸುನಿಲ್ ಬನ್ನಿಕೂಪ್, ಬಿನ್ ಅರವಿಂದ್ ವೈದ್ಯ, ಬನ್ನಿಕೂಪ್ ಬಿಲ್ಡಿಂಗ್, ಕಲಾ ಕಾಲೇಜ್ ಹಿಂಭಾಗ, 1ನೇ ಅಡ್ಡ ರಸ್ತೆ, ವಿದ್ಯಾನಗರ, ಹುಬ್ಬಳ್ಳಿ.	ಕಾ.ರಾ.ವಿ. ಆಸ್ಪತ್ರೆ, ಹುಬ್ಬಳ್ಳಿ.

ಈ ನೇಮಕಾತಿಯ ಷರತ್ತುಗಳು ಈ ಕೆಳಗಿನಂತಿವೆ:

1) ಈ ನೇಮಕಾತಿಯು ಒಂದು ವರ್ಷದ ಅವಧಿಗೆ ಅಥವಾ ನೇರ ನೇಮಕಾತಿಯ ಮೂಲಕ ಹುದ್ದೆಯನ್ನು ತುಂಬುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುತ್ತದೆ.

2) ಈ ಮೇಲಿನ ಅಭ್ಯರ್ಥಿಗಳಲ್ಲಿ ಮೈಸೂರು ವಲಯದ ಕ್ರ.ಸಂ.6ರ ಅಭ್ಯರ್ಥಿಯಾದ ಡಾ:ಮುರಳೀಧರ್ ಸಿ.ಎನ್.ಹೊರತುಪಡಿಸಿ ಇತರೆ ಅಭ್ಯರ್ಥಿಗಳು ಈ ನೇಮಕಾತಿ ಅಧಿಸೂಚನೆಯನ್ನು ನೋಂದಾಯಿತ ಅಂಚೆ ಮೂಲಕ ಜಾರಿಗೊಳಿಸಿದ 15 ದಿನಗಳೊಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು, ಈ ಅವಧಿಯ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಲಿಖಿತ ಮೂಲಕ ಸಕಾರಣವನ್ನು ನೀಡಿದಲ್ಲಿ ಮಾತ್ರ ಇನ್ನೂ 15 ದಿನಗಳ ಕಾಲಾವಕಾಶವನ್ನು ನೀಡುವುದಕ್ಕೆ ಪರಿಗಣಿಸಲಾಗುವುದು. ಕ್ರ.ಸಂ.6ರ ಅಭ್ಯರ್ಥಿಯವರ ಕೋರಿಕೆಯಂತೆ ಮೇ ತಿಂಗಳ ಕೊನೆಯವಾರದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಅವಕಾಶ ನೀಡಿದೆ.

3) ಈ ಮೇಲಿನ ಅಭ್ಯರ್ಥಿಗಳು ನಿರ್ದೇಶಕರು, ಕಾರಾವಿ ಯೋಜನೆ ವೈದ್ಯಕೀಯ ಸೇವೆಗಳು ರವರ ಮುಂದೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ತದನಂತರ ನಿರ್ದೇಶಕರಿಂದ ಚಲನಾದೇಶವನ್ನು ಪಡೆದು ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

4) ಆಯ್ಕೆ ಪಟ್ಟಿಯಲ್ಲಿನ ವಿಮಾ ವೈದ್ಯಾಧಿಕಾರಿ ಅಭ್ಯರ್ಥಿಗಳಲ್ಲಿ ತಜ್ಞ ವೈದ್ಯರುಗಳಿಗೆ ಮಾಸಿಕ ರೂ.13,000–00 ಹಾಗೂ ಉಳಿದ ವೈದ್ಯರುಗಳಿಗೆ ರೂ.11,000–00ಗಳ ಸಂಚಿತ ವೇತನವನ್ನು ಪಾವತಿಸಲಾಗುವುದು.

5) ಖಾಯಂ ವೈದ್ಯರಿಲ್ಲದ ಚಿಕಿತ್ಸಾಲಯಗಳ ಹಣಕಾಸಿನ ವ್ಯವಹಾರವನ್ನು ಗುತ್ತಿಗೆ ವೈದ್ಯರಿಗೆ ನೀಡುವ ಬದಲು ಹತ್ತಿರದ ಕಾ.ರಾ.ವಿ. ಆಸ್ಪತ್ರೆ/ಚಿಕಿತ್ಸಾಲಯಗಳ ಡ್ರಾಯಿಂಗ್ ಆಫೀಸರ್‌ಗಳಿಗೆ ನೀಡಿ ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದಿದ ವೈದ್ಯರುಗಳ ಚಿಕಿತ್ಸಾಲಯಗಳಿಗೆ ಸಂಬಂಧಿಸಿದ ಹಣ ಡ್ರಾ ಮಾಡಲು ಅಧಿಕಾರ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದಸ್ವಾಮಿ

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ. (ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 247

ಪೊಲೀಸ್ ಮಹಾ ನಿರ್ದೇಶಕರವರ ಕಾರ್ಯಾಲಯ ಸಿಐಡಿ, ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ಕಾರ್ಲ್‌ಟನ್ ಭವನ, ಅರಮನೆ ರಸ್ತೆ ಬೆಂಗಳೂರು

ಅಧಿಸೂಚನೆ

ಸಂಖ್ಯೆ: 59/ಸಂಗ್ರಹ-1/ಹರಾಜು/ಸಿಐಡಿ/2009-10, ದಿನಾಂಕ: 19ನೇ ಏಪ್ರಿಲ್ 2010

ವಿಷಯ : ಅನುಪಯುಕ್ತ ವಸ್ತುಗಳ ಬಹಿರಂಗ ಹರಾಜು ಮಾಡುವ ಬಗ್ಗೆ.

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಅನುಪಯುಕ್ತ ವಸ್ತುಗಳು ಮತ್ತು ಮರದ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ದಿನಾಂಕ: 29/04/2010 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ, ಸಿಐಡಿ ಆವರಣದಲ್ಲಿ ಬಹಿರಂಗ ಹರಾಜು ನಡೆಸಲು ತೀರ್ಮಾನಿಸಲಾಗಿದೆ. ಇಚ್ಛೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ ಅನುಪಯುಕ್ತ ಸಾಮಾಗ್ರಿಗಳನ್ನು ಹರಾಜು ಮುಖಾಂತರ ಕೊಳ್ಳಬಹುದು.

ಸಿಐಡಿ ಕಛೇರಿಯಲ್ಲಿರುವ ನಿರುಪಯುಕ್ತ ವಸ್ತುಗಳ ವಿವರ

ಕ್ರ.ಸಂ	ವಸ್ತುಗಳ ವಿವರ	ಪರಿಮಾಣ
1	ಕೇನ್ ಛೇರ್	15 ಸಂಖ್ಯೆ
2	ವುಡನ್ ಪಾರ್ಟೀಷಿಯನ್ ಶೀಟ್	2 ಸಂಖ್ಯೆ
3	ಮರದ ನೋಟೀಸ್ ಬೋರ್ಡ್	2 ಸಂಖ್ಯೆ
4	ವುಡನ್ ಛೇರ್	21 ಸಂಖ್ಯೆ
5	ಎಸ್ ಟೈಪ್ ಛೇರ್	43 ಸಂಖ್ಯೆ
6	ಕಬ್ಬಿಣದ ಛೇರ್	37 ಸಂಖ್ಯೆ
7	ಹೈಬ್ಯಾಕ್ ಕುಷನ್, ವಯರ್ & ವೀಲ್ ಛೇರ್	27 ಸಂಖ್ಯೆ
8	ಎಸ್ ಟೈಪ್ ಲೆದರ್ ಕುಷನ್ ಛೇರ್	5 ಸಂಖ್ಯೆ
9	ಎಸ್ ಟೈಪ್ ಕುಷನ್ ಛೇರ್	7 ಸಂಖ್ಯೆ
10	ಟ್ಯೂಬ್ ಲೈಟ್ ಫ್ರೇಮ್	48 ಸಂಖ್ಯೆ
11	ಸ್ಟೀಲ್ ವಾಟರ್ ಫಿಲ್ಟರ್	4 ಸಂಖ್ಯೆ
12	ಕಬ್ಬಿಣದ ರೋಲಿಂಗ್ ಶೆಟ್ಟರ್ (ದೊಡ್ಡದು)	7 ಸಂಖ್ಯೆ
13	ಕಬ್ಬಿಣದ ರೋಲಿಂಗ್ ಶೆಟ್ಟರ್ (ಚಿಕ್ಕದು)	2 ಸಂಖ್ಯೆ
14	ಕಬ್ಬಿಣದ ಕಿಟಕಿ	3 ಸಂಖ್ಯೆ
15	ಕಬ್ಬಿಣದ ಪ್ರಿಂಟಿಂಗ್ ಮಿಷಿನ್ ಸ್ಪೇರ್ಸ್ ಮತ್ತು ಇತರ ಸಾಮಗ್ರಿ	ಕೆಜಿ
16	ಪ್ಲಾಸ್ಟಿಕ್ ವಾಟರ್ ಫ್ಲೆಶ್ ಔಟ್	8 ಸಂಖ್ಯೆ
17	ಸ್ಟೀಲ್ ಟೇಬಲ್	5 ಸಂಖ್ಯೆ
18	ಮರದ ಟೇಬಲ್	1 ಸಂಖ್ಯೆ
19	ಅಲ್ಮೆರಾ	7ಸಂಖ್ಯೆ
20	ಅಲ್ಯೂಮಿನಿಯಂ ಪಾರ್ಟೀಶನ್ ಬಿಡಿ ಬಾಗಗಳು	ಕೆಜಿ
21	ಕಾಯರ್ ಮ್ಯಾಟ್ (ಚಿಕ್ಕದು)	10 ಸಂಖ್ಯೆ
22	ಕಾಯರ್ ಮ್ಯಾಟ್ (ದೊಡ್ಡದು)	4 ಸಂಖ್ಯೆ
23	ವೆಲ್‌ವೆಟ್ ಮ್ಯಾಟ್	5 ಸಂಖ್ಯೆ
24	ಕಬ್ಬಿಣದ ಮಂಚ	1 ಸಂಖ್ಯೆ
25	ಪಿಸ್ತೂಲ್ ಪೌಚ್	10 ಸಂಖ್ಯೆ

ಕ್ರಸಂ	ವಸ್ತುಗಳ ವಿವರ	ಪರಿಮಾಣ
26	ಗ್ಲಾಸ್ ಟ್ರೈಟ್	3 ಸಂಖ್ಯೆ
27	ಡೋರ್ ಕ್ಲೋಸರ್	6 ಸಂಖ್ಯೆ
28	ಸೋಫಾ	1 ಸಂಖ್ಯೆ
29	ವಿವಿಧ ಕಂಪನಿಯ ಪ್ರಿಂಟರ್ ಮತ್ತು ಜೆರಾಕ್ಸ್ ಖಾಲಿ ಕಾಟ್ರೆಡ್ಜ್‌ಗಳು	250 ಸಂಖ್ಯೆ
30	ಕಬ್ಬಿಣದ ಎಲೆಕ್ಟ್ರಿಕಲ್ ಕಂಬ	1 ಸಂಖ್ಯೆ
31	ಸೀಲಿಂಗ್ ಫ್ಯಾನ್	8 ಸಂಖ್ಯೆ
32	ವಾಲ್ ಕ್ಲಾಕ್	5 ಸಂಖ್ಯೆ
33	ಪೆಡಸ್ಟಲ್ ಫ್ಯಾನ್	6 ಸಂಖ್ಯೆ
34	ಸ್ಟೀಲ್ ಬಿಂದಿಗೆ	2 ಸಂಖ್ಯೆ
35	ಟೇಬಲ್ ಫ್ಯಾನ್	5 ಸಂಖ್ಯೆ
36	ಕಬ್ಬಿಣದ ರ್‍ಯಾಕ್	2 ಸಂಖ್ಯೆ
37	ವಿವಿಧ ಕಂಪನಿಯ ಹಳೆಯ ಟೆಲಿಫೋನ್	50 ಸಂಖ್ಯೆ
38	ರೆಫ್ರಿಜರೇಟರ್	1 ಸಂಖ್ಯೆ
39	ಬ್ಯಾಟರಿಗಳು (ದೊಡ್ಡದು)	14 ಸಂಖ್ಯೆ
40	ಬ್ಯಾಟರಿಗಳು (ಚಿಕ್ಕದು)	11 ಸಂಖ್ಯೆ
41	ವುಡನ್ ಡೋರ್	6 ಸಂಖ್ಯೆ
42	ವುಡನ್ ವಿಂಡೋ ಫ್ರೇಮ್	16 ಸಂಖ್ಯೆ

ಹಳೆಯ ಮರದ ಸಾಮಗ್ರಿ ಹಾಗೂ ಇತರೆ ವಸ್ತುಗಳು

ಕ್ರಸಂ	ವಸ್ತುಗಳ ಹೆಸರು	ಪರಿಮಾಣ
1	ಮರದ ಕಿಟಕಿಗಳು	6
2	ಮರದ ಬಾಗಿಲು	3
3	ತರಾಯಿ (ಲಾಂಗ್ ಪೀಸ್)	42
4	ತರಾಯಿ (ಶಾರ್ಟ್ ಪೀಸ್)	41
5	ಉದ್ದನೆಯ ಹಲಗೆ	6
6	ಪ್ಲೈವುಡ್ ಡೋರ್	2
7	ಲಾಂಗ್ ವಿಂಡೋ ಶೆಟರ್	3
8	ಲಾಂಗ್ ರಿಪೀಸ್ ಪಟ್ಟಿ	6
9	ಶಾರ್ಟ್ ರಿಪೀಸ್ ಪಟ್ಟಿ	40. ಕೆಜಿ
10	ಕಬ್ಬಿಣದ ಪೈಪ್‌ಗಳು	03
11	ಕಬ್ಬಿಣದ ರಾಡ್‌ಗಳು	ಕೆಜಿ

ಪೊಲೀಸ್ ಮಹಾ ನಿರ್ದೇಶಕರು,

ಪಿ.ಆರ್. 269

ಸಿಐಡಿ, ತರಬೇತಿ, ವಿಶೇಷ ಘಟಕಗಳು ಮತ್ತು
ಆರ್ಥಿಕ ಅಪರಾಧಗಳು, ಬೆಂಗಳೂರುರವರ ಪರವಾಗಿ.

. ಪೊಲೀಸ್ ಮಹಾ ನಿರ್ದೇಶಕರವರ ಕಾರ್ಯಾಲಯ ಸಿಐಡಿ, ತರಬೇತಿ ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳು ಕಾರ್ಲ್‌ಟನ್ ಭವನ, ಅರಮನೆ ರಸ್ತೆ ಬೆಂಗಳೂರು.

ಅಧಿಸೂಚನೆ

ಸಂಖ್ಯೆ: 01/ಸಂಗ್ರಹ-2/ಸಿಐಡಿ/2009-10, ದಿನಾಂಕ: 16ನೇ ಏಪ್ರಿಲ್ 2010

ವಿಷಯ : ಅನುಪಯುಕ್ತ ಬೆರಳಚ್ಚು ಯಂತ್ರಗಳನ್ನು ಬಹಿರಂಗ ಹರಾಜು ಮಾಡುವ ಬಗ್ಗೆ.

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಅನುಪಯುಕ್ತ ವಸ್ತುಗಳಾದ ಬೆರಳಚ್ಚು ಯಂತ್ರಗಳನ್ನು ವಿಲೇವಾರಿ ಮಾಡಲು ದಿನಾಂಕ: 29/04/2010 ರಂದು ಬೆಳಿಗ್ಗೆ 11-00 ಗಂಟೆಗೆ ಪೊಲೀಸ್ ಮಹಾ ನಿರ್ದೇಶಕರು ಸಿಐಡಿರವರ ಕಛೇರಿ ಆವರಣದಲ್ಲಿ ಬಹಿರಂಗ ಹರಾಜು ನಡೆಸಲು ತೀರ್ಮಾನಿಸಲಾಗಿದೆ. ಇಚ್ಛೆಯುಳ್ಳವರು ಹರಾಜಿನಲ್ಲಿ ಭಾಗವಹಿಸಿ ಸಾಮಾಗ್ರಿಗಳನ್ನು ಕೊಳ್ಳಬಹುದು.

ಸಿಐಡಿ ಕಛೇರಿಯಲ್ಲಿನ ಹಳೆಯ ಕನ್ನಡ ಬೆರಳಚ್ಚು ಯಂತ್ರಗಳ ವಿವರ

ಕ್ರ. ಸಂ	ಬೆರಳಚ್ಚು ಯಂತ್ರಗಳ ಹೆಸರು	ಕಂಪನಿಯ ಹೆಸರು	ನೊಂದಣಿ ಸಂಖ್ಯೆ	ಒಟ್ಟು ಸಂಖ್ಯೆ	ಷರಾ
1	ಕನ್ನಡ ಬೆರಳಚ್ಚು ಯಂತ್ರ	ಫೆಸಿಟ್	859426	1 ಸಂಖ್ಯೆ	
2	ಕನ್ನಡ ಬೆರಳಚ್ಚು ಯಂತ್ರ	ರೆಮಿಂಗ್‌ಟನ್	ಆರ್-653769	1 ಸಂಖ್ಯೆ	
3	ಕನ್ನಡ ಬೆರಳಚ್ಚು ಯಂತ್ರ	ಫೆಸಿಟ್	831781	1 ಸಂಖ್ಯೆ	
4	ಕನ್ನಡ ಬೆರಳಚ್ಚು ಯಂತ್ರ	ರೆಮಿಂಗ್‌ಟನ್	1-217528	1 ಸಂಖ್ಯೆ	ಸಿಐಡಿ-734
